ಸಂಪುಟ: 21, ಸಂಚಿಕೆ: 99, ಪುಟಗಳು: 8, ಶುಕ್ರವಾರ, 19 ಜನವರಿ 2024 RNI NO. KARKAN/2002/08054
epaper: www.sanjemugilu.com

ಸುದ್ದಿಗಳ ಹೊನಲು

# ಸಂಜೆ ಮುಗಿಲು

ಕನ್ನಡ ಪ್ರಾದೇಶಿಕ ಸಂಜೆ ದಿನಪತ್ರಿಕೆ

ಬೆಂಗಳೂರು। ಬೆಂಗಳೂರು ಗ್ರಾಮಾಂತರ। ಕೋಲಾರ। ಚಿಕ್ಕಬಳ್ಳಾಪುರ। ರಾಮನಗರ। ಮಂಡ್ಯ। ಮೈಸೂರು। ಚಾಮರಾಜನಗರ



ವೇಣು ಸಾರಥ್ಯದಲ್ಲಿ...




ಸುಭಾಷಿತ

ಸ್ವಲ್ಪ ಉಳ್ಳವನು ಬಡವನಲ್ಲ;
ಇನ್ನೂ ಬೇಕೆನ್ನುವವನು ಬಡವ

। ಸೆಬೇಕಾ

## ಪಂಚಾಂಗ

(ಶುಕ್ರವಾರ 19, ಜನವರಿ -2024)

- ಶೋಭಕೃತ್ ನಾಮ ಸಂವತ್ಸರ,
- ಉತ್ತರಾಯಣ, ಹಿಮಂತ ಋತು,
- ಪುಷ್ಯ ಮಾಸ, ಶುಕ್ಲ ಪಕ್ಷ,
- ತಿಥಿ: ನವಮಿ
- ನಕ್ಷತ್ರ: ರೇವತಿ,
- ರಾಹುಕಾಲ - 10:47 AM -12:28 PM
- ಗುಳಿಕಕಾಲ - 07:56 AM - 09:27 AM
- ಯಮಗಂಡಕಾಲ - 03:29 PM - 04:59 PM

## ಇನ್ಕಮ್ ಟ್ಯಾಕ್ಸ್ ವಿಚಾರದಲ್ಲಿ ಬಜೆಟ್‌ನಲ್ಲಿ ಏನು ಬದಲಾವಣೆ ನಿರೀಕ್ಷಿಸಬಹುದು?

**ನವದೆಹಲಿ:** ಫೆಬ್ರುವರಿ 1ರಂದು ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಮಧ್ಯಂತರ ಬಜೆಟ್ ಮಂಡನೆ ಮಾಡಲಿದ್ದಾರೆ. ಚುನಾವಣಾ ಪೂರ್ವ ಬಜೆಟ್ ಆದ್ದರಿಂದ ದೊಡ್ಡಮಟ್ಟದ ಘೋಷಣೆಗಳನ್ನು ಮಾಡುವ ಸಾಧ್ಯತೆ ಇಲ್ಲ. ಆದರೂ ತೆರಿಗೆ ಇತ್ಯಾದಿ ಕೆಲ ವಿಚಾರದಲ್ಲಿ ಸರ್ಕಾರ ಒಂದಷ್ಟು ಬದಲಾವಣೆ ತಂದರೂ ತರಬಹುದು. ಆದಾಯ ತೆರಿಗೆಗೆ ಸಂಬಂಧಿಸಿದಂತೆ ಕೆಲವಿಷ್ಟು ನಿರೀಕ್ಷೆಗಳಂತೂ ಇವೆ. ಹಣಕಾಸು ಸಚಿವೆ ಮಧ್ಯಂತರ ಬಜೆಟ್ ಅನ್ನು ಕೇವಲ ಲೇಖಾನುದಾನಕ್ಕೆ ಮಾತ್ರ ಸೀಮಿತಗೊಳಿಸುತ್ತಾರಾ ಅಥವಾ ಏನಾದರೂ ಹೊಸ ಬದಲಾವಣೆ ತರುತ್ತಾರಾ ಕಾದು ನೋಡಬೇಕು. ಆದರೆ, ತೆರಿಗೆ ಸೇರಿದಂತೆ ಹಲವಾರು ಕ್ಷೇತ್ರಗಳಲ್ಲಿಉದ್ಯಮದವರ ನಿರೀಕ್ಷೆಗಳಂತೂ ಸಾಕಷ್ಟು ಇವೆ.




**ಸರ್ಚಾರ್ಜ್ ಕಡಿಮೆ ಆಗುತ್ತದಾ:** ಹಳೆಯ ಆದಾಯ ತೆರಿಗೆ ಪದ್ಧತಿ ಮುಂದುವರಿದಿದೆಯಾದರೂ ಜೊತೆಗೆ ಹೊಸ ಆದಾಯ ತೆರಿಗೆಯನ್ನೂ ಪರಿಚಯಿಸಲಾಗಿದೆ. ಹೊಸ ಪದ್ಧತಿ ಡೀಫಾಲ್ಟ್ ಆಗಿದೆ. ಸಾಕಷ್ಟು ತೆರಿಗೆ ಉಳಿತಾಯಕ್ಕೆ ಅದು ಅವಕಾಶ ಕೊಟ್ಟಿದೆ. ಆದರೆ, ವರ್ಷಕ್ಕೆ 50 ಲಕ್ಷ ರೂನಿಂದ 5 ಕೋಟಿ ರೂವರೆಗಿನ ವರಮಾನ ಇರುವ ವ್ಯಕ್ತಿಗಳಿಗೆ ಹೊಸ ಇನ್ಕಮ್ ಟ್ಯಾಕ್ಸ್ ರಿಜೈಮ್ ನಿಂದ ಹೆಚ್ಚಿನ ಲಾಭ ಇಲ್ಲ. ಈ ಹಿನ್ನೆಲೆಯಲ್ಲಿ ಸರ್ಚಾರ್ಜ್ ಅಥವಾ ಹೆಚ್ಚುವರಿ ತೆರಿಗೆಯನ್ನು ಈ ಬಜೆಟ್ ನಲ್ಲಿ ಕಡಿಮೆ ಮಾಡಬಹುದು ಎಂಬ ನಿರೀಕ್ಷೆ ಇದೆ.

ತೆರಿಗೆ ಅನ್ವಯವಾಗುವ ಆದಾಯ ಮತ್ತು ಸರ್ಚಾರ್ಜ್ ನಲ್ಲಿ ಸಂಭಾವ್ಯ ಬದಲಾವಣೆ

50 ಲಕ್ಷ ರೂನಿಂದ 1 ಲಕ್ಷ ರೂವರೆಗೆ: ಶೇ. 10ರಿಂದ ಶೇ. 5ಕ್ಕೆ ಸರ್ಚಾರ್ಜ್ ಇಳಿಕೆಯ ನಿರೀಕ್ಷೆ

1-2 ಕೋಟಿ ರೂ: ಶೇ. 15ರಿಂದ ಶೇ. 10ಕ್ಕೆ

2-5 ಕೋಟಿ ರೂ: ಶೇ. 25ರಿಂದ ಶೇ. 15ಕ್ಕೆ

5 ಕೋಟಿ ಮೇಲ್ಪಟ್ಟ ಆದಾಯ: ಶೇ. 25

ಪುಟ 2

### ರಾಹುಲ್ ಗಾಂಧಿ ನೇತೃತ್ವದ ಭಾರತ್ ಜೋಡೋ ನ್ಯಾಯ ಯಾತ್ರೆ ವಿರುದ್ಧ

## ಎಫ್‌ಐಆರ್ ದಾಖಲು

**ನವದೆಹಲಿ:** ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದ ಭಾರತ್ ಜೋಡೋ ನ್ಯಾಯ ಯಾತ್ರೆ ವಿರುದ್ಧ ಅಸ್ಸಾಂ ಪೊಲೀಸರು ಎಫ್ ಐಆರ್ ದಾಖಲಿಸಿದ್ದಾರೆ. ಯಾತ್ರೆಯ ಮಾರ್ಗ ಬದಲಾವಣೆಯಿಂದಾಗಿ ರಾಜ್ಯದ ಜೋರ್ಹತ್ ನಗರದಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಅಧಿಕಾರಿ ತಿಳಿಸಿದ್ದಾರೆ. ಅಧಿಕಾರಿಯೊಬ್ಬರು ಮಾತನಾಡಿ, ಅನುಮತಿಯಂತೆ ಯಾತ್ರೆ, ಕೆಬಿ ರಸ್ತೆಯತ್ತ ಸಾಗಬೇಕಿತ್ತು.



ಪುಟ 2

## ಸಂಕ್ಷಿಪ್ತ ಸುದ್ದಿ

### ನಕಲಿ ದಾಖಲೆ ನೀಡಿ ಸಾಲ ಪಡೆಯುವ ಖದೀಮರು ಬಂಧನ

**ಬೆಂಗಳೂರು:** ಸರಿಯಾಗಿ ಪರಿಶೀಲಿಸದೆ ನಕಲಿ ಭೂ ದಾಖಲೆಗಳನ್ನು ಹೊಂದಿದ್ದವರಿಗೆ ಸಾಲ ನೀಡಿದ್ದ ಮೂವರು ಬ್ಯಾಂಕ್ ಮ್ಯಾನೇಜರ್ ಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ಐಸಿಐಸಿಐ ಬ್ಯಾಂಕ್ ಸೇಲ್ಸ್ ಮ್ಯಾನೇಜರ್ ರಾಕೇಶ್, ಸೆಂಟ್ ಮಾರ್ಕ್ಸ್ ರಸ್ತೆಯ ಎಸ್ ಬಿಐ ಬ್ಯಾಂಕ್ ನ ಎಜಿಎಂ ಮುರುಳಿಧರ್, ಬೆಂಗಳೂರು



ಪುಟ 2

### ಆನ್ ಲೈನ್ ಗೇಮ್ ಪಾಸ್ ವರ್ಡ್ ಕೊಟ್ಟಿಲ್ಲವೆಂದು ಯುವಕನ ಕೊಲೆ




**ಪಶ್ಚಿಮ ಬಂಗಾಳ:** ಕ್ಷುಲ್ಲಕ ವಿಚಾರ ಯುವಕನನ್ನೇ ಬಲಿ ತೆಗೆದುಕೊಂಡಿರುವ ಘಟನೆ ಪಶ್ಚಿಮ ಬಂಗಾಳದಲ್ಲಿ ನಡೆದಿದೆ. ಪಶ್ಚಿಮ ಬಂಗಾಳದ ಮುರ್ಷಿದಾಬಾದ್ ಜಿಲ್ಲೆಯಲ್ಲಿ ಆನ್‌ಲೈನ್ ಮೊಬೈಲ್ ಗೇಮ್‌ನ (ಫ್ರೀ ಫೈರ್) ಪಾಸ್‌ವರ್ಡ್ ಹಂಚಿಕೊಳ್ಳಲು ನಿರಾಕರಿಸಿದ್ದಕ್ಕಾಗಿ ಯುವಕನನ್ನು ಅವನ ನಾಲ್ವರು ಸ್ನೇಹಿತರು ಕೊಲೆ ಮಾಡಿದ್ದಾರೆ. ನಂತರ ಅವರ ದೇಹವನ್ನು ಸ್ನೇಹಿತರು ಸುಟ್ಟು ಹಾಕಿ ಕಾಡಿನಲ್ಲಿ ಎಸೆದಿರುವ ಮಾಹಿತಿ ಲಭ್ಯವಾಗಿದೆ.

ಪುಟ 2

### ಫೆಬ್ರವರಿಯಲ್ಲಿ ಪ್ರತಿ ದಿನ 998 ಕ್ಯೂಸೆಕ್ ನೀರು ತ.ನಾಡಿಗೆ ಬಿಡಲು ಸೂಚನೆ

**ನವದೆಹಲಿ:** ಕಾವೇರಿ ನೀರು ವ್ಯಾಜ್ಯ ನ್ಯಾಯಾಧಿಕರಣದ ಸುಪ್ರೀಂ ಕೋರ್ಟ್ ಮಾರ್ಪಡಿಸಿದ ಅಂತಿಮ ಆದೇಶದಲ್ಲಿ ಹೇಳಿದ ಪ್ರಮಾಣದಲ್ಲಿ ತಮಿಳುನಾಡಿಗೆ ಜನವರಿಯ ಬಾಕಿ ಉಳಿದಿರುವ ದಿನಗಳು ಹಾಗೂ ಫೆಬ್ರವರಿಯಲ್ಲಿ ನೀರು ಬಿಡುಗಡೆ ಮಾಡುವಂತೆ ಕರ್ನಾಟಕಕ್ಕೆ ಕಾವೇರಿ ನೀರು ನಿಯಂತ್ರಣ ಸಮಿತಿ ಗುರುವಾರ ಆದೇಶ ನೀಡಿದೆ.

ಪುಟ 2

### ಅಯೋಧ್ಯೆಮಂದಿರದ ಗರ್ಭಗುಡಿಯಲ್ಲಿ ರಾಮ ಲಲ್ಲಾ ಮೂರ್ತಿ

# ದೇಶಾದ್ಯಂತ ಹೈಅಲರ್ಟ್

**ಬೆಂಗಳೂರು:** ಜನವರಿ 22ರಂದು ಸೋಮವಾರ ಅಯೋಧ್ಯೆಯ ಶ್ರೀರಾಮಮಂದಿರದಲ್ಲಿ ರಾಮಲಲ್ಲಾ ಪ್ರಾಣಪ್ರತಿಷ್ಠೆ ನೆರವೇರಲಿದೆ. ಈ ಹಿನ್ನೆಲೆಯಲ್ಲಿ ರಾಜ್ಯದಲ್ಲೂ ಬಿಗಿ ಭದ್ರತೆ ನಿಯೋಜಿಸಲಾಗುತ್ತಿದೆ.

ಬಾಲರಾಮನ ಮೂರ್ತಿ ಪ್ರತಿಷ್ಠಾಪನೆ ಹಿನ್ನೆಲೆಯಲ್ಲಿ ಜ.22ರಂದು ಯಾವುದೇ ಪೊಲೀಸ್ ಸಿಬ್ಬಂದಿಗೆ ರಜೆ ನೀಡದಂತೆ ಸೂಚಿಸಲಾಗಿದೆ. ಒಂದು ವೇಳೆ ರಜೆಯಲ್ಲಿರುವವರು ಕಡ್ಡಾಯವಾಗಿ ಕರ್ತವ್ಯಕ್ಕೆ ಹಾಜರಾಗಲೇಬೇಕು ಎಂದು ಹಿರಿಯ ಅಧಿಕಾರಿಗಳು ಸೂಚಿಸಿರುವುದಾಗಿ ಮೂಲಗಳು ತಿಳಿಸಿವೆ.

ಈ ಹಿಂದಿನ ಕೋಮುಗಲಭೆಗಳ ಬಗ್ಗೆ ಮಾಹಿತಿ ಪಡೆದಿರುವ ಪೊಲೀಸರು, ಅಂತಹ ಗಲಭೆಗಳಲ್ಲಿ ಭಾಗಿಯಾಗಿದ್ದವರ ಮೇಲೂ ಹದ್ದಿನ ಕಣ್ಣು ಇಡಲಾಗಿದೆ. ಜೊತೆಗೆ ಆಯಾ ರೌಡಿಶೀಟರ್‌ಗಳ ಮೇಲೂ ನಿಗಾ ವಹಿಸಲಾಗಿದೆ.

ಅಲ್ಲದೇ ಎಲ್ಲಾ ಠಾಣೆಗಳ ವ್ಯಾಪ್ತಿಯಲ್ಲಿ ಇನ್ಸ್‌ಪೆಕ್ಟರ್ ಗಳು ಧರ್ಮದ ಮುಖಂಡರನ್ನ ಕರೆಸಿ ಶಾಂತಿಪಾಲನಾ ಸಭೆ ನಡೆಸಬೇಕು. ಈ ಬಗ್ಗೆ ತಮ್ಮ ಸಮುದಾಯದ ಮುಖಂಡರಿಗೆ ಸಲಹೆ ನೀಡುವಂತೆ ಸೂಚಿಸಲು ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ ಎನ್ನಲಾಗಿದೆ.

ಜ.22ರಂದು ರಾಜ್ಯದಲ್ಲಿಯೂ ಯಾವುದೇ ರ್‍ಯಾಲಿಗಳಿಗೆ ಅವಕಾಶ ಇಲ್ಲ. ಆ ಸಮಯದಲ್ಲಿ ಯಾವುದೇ ರೀತಿಯ ಅಹಿತಕರ ಘಟನೆ ನಡೆಯದಂತೆ ಮುನ್ನೆಚ್ಚರಿಕೆ ವಹಿಸಲು ವಿವಿಧ ಜಿಲ್ಲೆಗಳಿಂದಲೂ ಪೊಲೀಸರನ್ನ ಕರೆಸಲಾಗಿದೆ. ಮಂಡ್ಯ, ರಾಮನಗರ, ಚಿಕ್ಕಬಳ್ಳಾಪುರ ಜಿಲ್ಲೆಗಳಿಂದಲೂ ಹೆಚ್ಚುವರಿ ಪೊಲೀಸರ ನಿಯೋಜನೆ ಮಾಡಿರುವುದಾಗಿ ಅಧಿಕಾರಿಗಳು ತಿಳಿಸಿದಾರೆ.





## ರಾಮಲಲ್ಲಾ ಪ್ರಾಣ ಪ್ರತಿಷ್ಠೆಗೂ ಮುನ್ನ ಮೋದಿಯವರ ವ್ರತಾಚರಣೆ

**ದೆಹಲಿ:** ರಾಮಮಂದಿರದಲ್ಲಿ ರಾಮ ಲಲ್ಲಾ ಪ್ರಾಣ ಪ್ರತಿಷ್ಠೆಗಾಗಿ ಪ್ರಧಾನಿ ನರೇಂದ್ರ ಮೋದಿಯವರು 11ದಿನಗಳ ವ್ರತಾಚರಣೆ ಮಾಡುತ್ತಿದ್ದಾರೆ. ವ್ರತಾಚರಣೆ ವೇಳೆ ಪ್ರಧಾನಿ ನರೇಂದ್ರ ಮೋದಿ ಅವರು ನೆಲದ ಮೇಲೆ ಮಲಗಲಿದ್ದಾರೆ. ಅವರು ಕೇವಲ ಎಳನೀರು ಮಾತ್ರ ಸೇವಿಸಲಿದ್ದಾರೆ ಎಂದು ಮೂಲಗಳು ಗುರುವಾರ ಇಂಡಿಯಾ ಟುಡೇಗೆ ತಿಳಿಸಿವೆ. ಜನವರಿ 12 ರಂದು ಮೋದಿ ವ್ರತಾಚರಣೆ ಆರಂಭಿಸಿದ್ದು, ಪ್ರಾಣ ಪ್ರತಿಷ್ಠೆಯ ''ಐತಿಹಾಸಿಕ'' ಮತ್ತು ''ಶುಭ'' ಸಂದರ್ಭಕ್ಕೆ ಸಾಕ್ಷಿಯಾಗಲು ನಾನು ಅದೃಷ್ಟಶಾಲಿ ಎಂದು ಹೇಳಿದರು.



ಪ್ರಾಣ ಪ್ರತಿಷ್ಠಾ ವ್ಯಾಯಾಮದ ಸಮಯದಲ್ಲಿ ಎಲ್ಲಾ ಭಾರತೀಯರನ್ನು ಪ್ರತಿನಿಧಿಸುವವರಾಗಿ ದೇವರು ನನ್ನನ್ನು ಆಯ್ಕೆ ಮಾಡಿದ್ದಾರೆ. ಇದನ್ನು ಗಮನದಲ್ಲಿಟ್ಟುಕೊಂಡು ನಾನು 11 ದಿನಗಳ ವಿಶೇಷ ಧಾರ್ಮಿಕ ವ್ರತಾಚರಣೆ ಪಾಲನೆ ಕೈಗೊಳ್ಳುತ್ತಿರುವುದಾಗಿ ಮೋದಿ ಹೇಳಿದ್ದಾರೆ. ಮೋದಿ ಅವರು 11 ದಿನಗಳ ಕಾಲ 'ಯಮ್ ನಿಯಮ್' ಅನ್ನು ಅನುಸರಿಸುತ್ತಾರೆ. ಅವರು ಧರ್ಮಗ್ರಂಥಗಳಲ್ಲಿ ನೀಡಿರುವ ಎಲ್ಲಾ ಸೂಚನೆಗಳನ್ನು ಕಟ್ಟುನಿಟ್ಟಾಗಿ ಅನುಸರಿಸಲು ನಿರ್ಧರಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪುಟ 2

## ರೈಲು ನಿಲ್ದಾಣಗಳಲ್ಲಿ ರಾಮಮಂದಿರ ಪ್ರಾಣ ಪ್ರತಿಷ್ಠಾ ಸಮಾರಂಭ ನೇರ ಪ್ರಸಾರ

**ಮುಂಬೈ:** ಜನವರಿ 22 ರಂದು ನಡೆಯಲಿರುವ ಅಯೋಧ್ಯೆಯ ರಾಮ ಮಂದಿರದ ಉದ್ಘಾಟನಾ ಸಮಾರಂಭವನ್ನು (ಪ್ರಾಣ ಪ್ರತಿಷ್ಠಾ) ದೇಶಾದ್ಯಂತ ರೈಲ್ವೆ ನಿಲ್ದಾಣಗಳಲ್ಲಿ ನೇರ ಪ್ರಸಾರ ಮಾಡಲಾಗುವುದು ಎಂದು ರೈಲ್ವೆ ಹೇಳಿದೆ. ದೇಶದಾದ್ಯಂತ ರೈಲು ನಿಲ್ದಾಣಗಳಲ್ಲಿ ಕನಿಷ್ಠ 9,000 ಸ್ಕ್ರೀನ್‌ಗಳು ಲಭ್ಯವಿವೆ.ಅಯೋಧ್ಯೆಯಲ್ಲಿ ರಾಮಮಂದಿರದ ಪ್ರಾಣ ಪ್ರತಿಷ್ಠಾ ಸಮಾರಂಭದ ನೇರ ಪ್ರಸಾರವನ್ನು ತೋರಿಸಲು ಈ ಪರದೆಗಳನ್ನು ಬಳಸಬಹುದು ಎಂದು ಸರ್ಕಾರಿ ಮೂಲಗಳು ಹೇಳಿರುವುದಾಗಿ ಎಎನ್‌ಐ ಸುದ್ದಿಸಂಸ್ಥೆ ವರದಿ ಮಾಡಿದೆ.



ಪುಟ 2

## ಪತ್ನಿ ಸಹಾಯ ಪಡೆದು ಪೊಲೀಸ್ ಕಸ್ಟಡಿಯಿಂದ ತಪ್ಪಿಸಿಕೊಂಡ ಕೈದಿ

**ಹರ್ಯಾಣ:** ಪತ್ನಿ ಸಹಾಯದಿಂದ ಕೈದಿಯೊಬ್ಬ ಪೊಲೀಸ್ ಕಸ್ಟಡಿಯಿಂದ ತಪ್ಪಿಸಿಕೊಂಡಿರುವ ಘಟನೆ ಹರ್ಯಾಣದಲ್ಲಿ ನಡೆದಿದೆ. ವಂಚನೆ ಮತ್ತು ಇತರ ಅಪರಾಧಗಳ ಆರೋಪಿಯೊಬ್ಬ ಪೊಲೀಸರಿಗೆ ಚಳ್ಳೆಹಣ್ಣು ತಿನ್ನಿಸಿ ಸ್ಕೂಟರ್ ನಲ್ಲಿ ಪತ್ನಿಯ ಜತೆ ಪರಾರಿಯಾಗಿದ್ದಾನೆ.

ಆರೋಪಿಯನ್ನು ಅನಿಲ್ ಅಲಿಯಾಸ್ ಟಿಂಕಲ್ ಎಂದು ಗುರುತಿಸಲಾಗಿದ್ದು, ಜನವರಿ 16 ರಂದು ಮಂಗಳವಾರ ವಿಚಾರಣೆಗಾಗಿ ಹರಿಯಾಣದ ಪಲ್ವಾಲ್‌ನಲ್ಲಿರುವ ಸ್ಥಳೀಯ ನ್ಯಾಯಾಲಯಕ್ಕೆ ಕರೆತರಲಾಗಿತ್ತು.

ಕಳೆದ ವರ್ಷ ಏಪ್ರಿಲ್ 16 ರಂದು ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಅನಿಲ್ ಅವರನ್ನು ಪೊಲೀಸರು ಬಂಧಿಸಿದ್ದರು ಮತ್ತು ಪ್ರಸ್ತುತ ಏಳು ವಿವಿಧ ಪ್ರಕರಣಗಳಲ್ಲಿ ಆರೋಪ ಎದುರಿಸುತ್ತಿದ್ದಾನೆ.



ನ್ಯಾಯಾಲಯದ ವಿಚಾರಣೆಯ ನಂತರ, ಅನಿಲ್ ಮತ್ತು ಪೊಲೀಸ್ ಅಧಿಕಾರಿಗಳು ಪಲ್ವಾಲ್‌ನ ಹೊಡಾಲ್ ಪ್ರದೇಶವನ್ನು ತಲುಪಲು ಆಟೋ-ರಿಕ್ಷಾವನ್ನು ಹತ್ತಿದ್ದರು. ಅಲ್ಲಿ ಮಥುರಾಗೆ

ಪುಟ 2

### ಪ್ರಭಾಕರ್ ಭಟ್ ಗೆ ಜಾಮೀನು ಕೊಡಿಸಿದ ಕಾಂಗ್ರೆಸ್ ವಕೀಲ

## ಅಧ್ಯಕ್ಷ ಸ್ಥಾನದಿಂದ ಉಚ್ಚಾಟನೆ



**ಮಂಡ್ಯ:** ಮುಸ್ಲಿಂ ಮಹಿಳೆಯರ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿದ್ದ ಆರ್ ಎಸ್ ಎಸ್ ಮುಖಂಡ ಕಲ್ಲಡ್ಕ ಪ್ರಭಾಕರ್ ಭಟ್ ಅವರಿಗೆ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದ 3ನೇ ಅಪರ ಜಿಲ್ಲಾ ಮತ್ತ ಸತ್ರ ನ್ಯಾಯಾಲಯ ಜಾಮೀನು ಮಂಜೂರು ಮಾಡಿತ್ತು. ಪ್ರಭಾಕರ್ ಭಟ್ ಪರ ನ್ಯಾಯಾಲಯದಲ್ಲಿ ವಲಾಕತ್ತು ವಹಿಸಿದ್ದ ಶ್ರೀರಂಗಪಟ್ಟಣ ಕಾಂಗ್ರೆಸ್ ಕಾನೂನು ಘಟಕದ ಅಧ್ಯಕ್ಷರು ಎಂಬ ವಿಚಾರ ಬಹಿರಂಗವಾಗಿದೆ. ಇದೀಗ ಅವರನ್ನು ಘಟಕದ ಅಧ್ಯಕ್ಷ ಸ್ಥಾನದಿಂದ ಉಚ್ಚಾಟನೆ ಮಾಡಲಾಗಿದೆ.

ಪುಟ 2

### ಮಣಿಪುರದಲ್ಲಿ ಮತ್ತೆ ಹಿಂಸಾಚಾರ

## ಐವರು ನಾಗರಿಕರು ಸಾವು

**ಮಣಿಪುರ:** ಮಣಿಪುರದಲ್ಲಿ ಹಿಂಸಾಚಾರ ಮುಂದುವರೆದಿದೆ, ಎರಡು ಪ್ರತ್ಯೇಕ ಘಟನೆಗಳಲ್ಲಿ ಅಪರಿಚಿತ ದುಷ್ಕರ್ಮಿಗಳು ಐವರು ನಾಗರಿಕರನ್ನು ಹತ್ಯೆ ಮಾಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಪೊಲೀಸ್ ಹೇಳಿಕೆಯ ಪ್ರಕಾರ, ಬಿಷ್ಣುಪುರ್ ಜಿಲ್ಲೆಯ ನಿಂಗ್‌ತೌಖೋಂಗ್ ಖಾ ಖುನೌದಲ್ಲಿ ನಾಲ್ವರು ನಾಗರಿಕರು ಮತ್ತು ಕಾಂಗ್‌ಪೋಕ್ಪಿ ಜಿಲ್ಲೆಯ ಕಾಂಗ್‌ಚುಪ್ ಚಿಂಗ್ ಖಾಂಗ್‌ನಲ್ಲಿ ಒಬ್ಬರನ್ನು ಅಪರಿಚಿತ ಶಸ್ತ್ರಸಜ್ಜಿತ ದುಷ್ಕರ್ಮಿಗಳು ಕೊಲೆ ಮಾಡಿದ್ದಾರೆ.

ಬಿಷ್ಣುಪುರ ಜಿಲ್ಲೆಯಲ್ಲಿ ಐವರನ್ನು ಹತ್ಯೆ ಮಾಡಿದ್ದ ಹಂತಕರನ್ನು ಬಂಧಿಸಲು ಪ್ರಯತ್ನಗಳು ನಡೆಯುತ್ತಿವೆ ಎಂದು ಪೊಲೀಸರು ತಿಳಿಸಿದ್ದಾರೆ. ಮೃತರನ್ನು ಓಯಿನಮ್ ಬಮೊನ್‌ಜಾವೊ ಸಿಂಗ್ (61), ಅವರ ಮಗ ಒಯಿನಮ್ ಮಣಿತೊಂಬ ಸಿಂಗ್ (32), ಥಿಯಂ ಸೋಮೇಂದ್ರೊ ಸಿಂಗ್ (55) ಮತ್ತು ನಿಂಗ್‌ತೌಜಮ್ ನಬದ್ವೀಪ್ ಸಿಂಗ್ (40) ಎಂದು ಗುರುತಿಸಲಾಗಿದೆ.



ಕಾಂಗ್‌ಪೋಕ್ಪಿಯಲ್ಲಿ ಮೃತಪಟ್ಟ ನಾಗರಿಕನನ್ನು ಥಿಯಮ್ ಕೊಂಜಿನ್ ನಿವಾಸಿ ತಖೆಲ್ಲಂಬಮ್ ಮನೋರಂಜನ್ ಎಂದು ಗುರುತಿಸಲಾಗಿದೆ. ಪೊಲೀಸರ ಪ್ರಕಾರ, ಕಾಂಗ್ ಚುಪ್ ಚಿಂಗ್‌ಖಾಂಗ್ ಬಳಿಯ ಬಂಕರ್ ಹಿಲ್ ನಲ್ಲಿ ಮನೋರಂಜನ್ ಮೃತದೇಹ

ಪುಟ 2

## ವಾಣಿಜ್ಯ ತೆರಿಗೆ ಪರಿವೀಕ್ಷಕರ ಹುದ್ದೆಗೆ ಪರೀಕ್ಷೆ

**ರಾಮನಗರ:** ಕರ್ನಾಟಕ ಲೋಕಸೇವಾ ಆಯೋಗವು ಅಧಿಸೂಚಿಸಿರುವ ವಾಣಿಜ್ಯ ತೆರಿಗೆಗಳ ಇಲಾಖೆಯಲ್ಲಿನ ಉಳಿಕೆ, ಮೂಲ ವೃಂದದ ವಾಣಿಜ್ಯ ತೆರಿಗೆ ಪರಿವೀಕ್ಷಕರು 230 ಹುದ್ದೆಗಳಿಗೆ ಜ. 20 ಮತ್ತು 21 ರಂದು ಕನ್ನಡ ಭಾಷಾ ಪರೀಕ್ಷೆ/ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸಲು ಜಿಲ್ಲೆಯಲ್ಲಿ ಸಿದ್ದತೆಗಳನ್ನು ಕೈಗೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಡಾ. ಅವಿನಾಶ್ ಮೆನನ್ ರಾಜೇಂದ್ರನ್ ಅವರು ತಿಳಿಸಿದ್ದಾರೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಜಿಲ್ಲಾ ಆರೋಗ್ಯಾಧಿಕಾರಿಗಳು, ಜಿಲ್ಲಾ ಖಜಾನಾಧೀಕಾರಿಗಳು, ಪರೀಕ್ಷಾ ಕೇಂದ್ರದ ಮುಖ್ಯಸ್ಥರುಗಳು ಮತ್ತು ಇತರೆ ಅಧಿಕಾರಿಗಳನ್ನು ಒಳಗೊಂಡಂತೆ ಪರೀಕ್ಷೆಯನ್ನು ಸುಸೂತ್ರವಾಗಿ ನಡೆಸಲು ಸಂಬಂಧಿಸಿದ ಅಧಿಕಾರಿಗಳು ಮತ್ತು ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರುಗಳಿಗೆ ಸಭೆಯನ್ನು ನಡೆಸಿ ಸೂಚನೆಗಳನ್ನು ನೀಡಲಾಗಿದೆ.

ಅಭ್ಯರ್ಥಿಗಳಿಗೆ ಪ್ರಮುಖ ಸೂಚನೆ: ಅಭ್ಯರ್ಥಿಗಳು ಕಟ್ಟುನಿಟ್ಟಾಗಿ ಪರೀಕ್ಷೆ ಪ್ರಾರಂಭವಾಗುವ 02 ಗಂಟೆ ಮುಂಚಿತವಾಗಿ ಪರೀಕ್ಷಾ ಕೇಂದ್ರದ ಬಳಿ ಹಾಜರಾಗತಕ್ಕದ್ದು ಹಾಗೂ ಅಭ್ಯರ್ಥಿಗಳು ಪರೀಕ್ಷಾ ಕೇಂದ್ರದ ಸುತ್ತ ಕಿವಿಯಲ್ಲಿ ಯಾವುದೇ ಎಲೆಕ್ಟ್ರಾನಿಕ್ ಡಿವೈಸ್ ಮತ್ತು ಮೈಕ್ರೋ ಫೋನ್ ಬಳಸುವಂತಿಲ್ಲ, ಇವುಗಳನ್ನು ಬಳಸುವುದು ಕಡ್ಡಾಯವಾಗಿ ನಿಷೇದಿಸಿದೆ ಮತ್ತು ಅಭ್ಯರ್ಥಿಗಳಿಗೆ ಪರೀಕ್ಷಾ ಪ್ರವೇಶ ಪತ್ರದಲ್ಲಿ ನೀಡಲಾಗಿರುವ ಇನ್ನಿತರೆ ಸೂಚನೆಗಳನ್ನು ಪಾಲಿಸತಕ್ಕದ್ದು. ಪರೀಕ್ಷೆಯನ್ನು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಚನ್ನಪಟ್ಟಣ, ಸರ್ಕಾರಿ ಪ್ರೌಢಶಾಲೆ ಐಜೂರು, ರಾಮನಗರ, ಶಾಂತಿನಿಕೇತನ ಪಾಲಿಟೆಕ್ನಿಕ್ ಕಾಲೇಜು ರಾಮನಗರ, ಶಾಂತಿನಿಕೇತನ ಪ್ರಥಮ ದರ್ಜೆ ಕಾಲೇಜು, ರಾಮನಗರ ಹಾಗೂ ಶಾಂತಿನಿಕೇತನ ಪ್ರೌಢಶಾಲೆ, ರಾಮನಗರ. ಜ. 21ರ ಭಾನುವಾರ ನಡೆಯುವ ಪರೀಕ್ಷಾ ಕೇಂದ್ರದ ಹೆಸರು ಮತ್ತು ವಿಳಾಸ: ಪರೀಕ್ಷೆಯನ್ನು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಚನ್ನಪಟ್ಟಣ, ಭಾರತೀಯ ಸಂಸ್ಕೃತಿ ವಿದ್ಯಾಪೀಠ, ರಾಮನಗರ, ಸರ್ಕಾರಿ ಪ್ರೌಢಶಾಲೆ ಐಜೂರು, ರಾಮನಗರ, ಶಾಂತಿನಿಕೇತನ ಪಾಲಿಟೆಕ್ನಿಕ್ ಕಾಲೇಜು ರಾಮನಗರ, ಬಾಲಕಿಯರ.ಪ.ಪೂ.ಕಾ (ಪ್ರೌಢಶಾಲಾ ವಿಭಾಗ) ರಾಮನಗರ, ಬಾಲಕರ,ಪ.ಪೂ.ಕಾ (ಪ್ರೌಢಶಾಲಾ ವಿಭಾಗ) ರಾಮನಗರ ಇಲ್ಲಿ ನಡೆಸಲಾಗುವುದು ಎಂದು ತಿಳಿಸಿದ್ದಾರೆ.

## ಫಾಲ್ಟ್ ಲೈನ್ಸ್ ಇನ್ ದಿ ಫೈತ್ ಕುರಿತು ಚರ್ಚೆ




**ಮೈಸೂರು:** ಫಾಲ್ಟ್ ಲೈನ್ಸ್ ಇನ್ ದಿ ಫೈತ್ ಕೃತಿಯ ಕುರಿತು ಚರ್ಚೆಯನ್ನು ಮೈಸೂರು ವಿಶ್ವವಿದ್ಯಾನಿಲಯ (ಹೈಬ್ರಿಡ್ ಮೋಡ್) ವಿಜ್ಞಾನ ಭವನದಲ್ಲಿ ಅಂತರರಾಷ್ಟ್ರೀಯ ಸಂಬಂಧಗಳ ವಿಭಾಗದ ಮುಖ್ಯಸ್ಥರು ಮತ್ತು ಸಂಯೋಜಕಿ ಡಾ.ಭಾರತಿ ಹಿರೇಮಠ ಆಯೋಜಿಸಿದ್ದರು.

ಮಹಾರಾಜ ಕಾಲೇಜು ಪ್ರಾಂಶುಪಾಲರು ಎಚ್ ಸೋಮಶೇಖರಪ್ಪ, ಮಹಾರಾಜ ಕಾಲೇಜಿನ ಆಡಳಿತಾಧಿಕಾರಿ ಡಾ. ಷಣ್ಮುಗಂ ಉಪಸ್ಥಿತಿಯಲ್ಲಿ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಅಧ್ಯಕ್ಷತೆಯನ್ನು ಸಿಎಸ್ ಐಆರ್-ವಿಶ್ರಾಂತ ವಿಜ್ಞಾನಿ, ಜಪಾನ್ ನ ಹೊಕ್ಕೈಡೋ ವಿಶ್ವವಿದ್ಯಾಲಯದ ರಾಯಭಾರಿ, ಮೈಸೂರು ವಿಶ್ವವಿದ್ಯಾಲಯದ ಮಾಜಿ ಉಪಕುಲಪತಿ ಪ್ರೊ ಕೆ ಎಸ್ ರಂಗಪ್ಪ ವಹಿಸಿದ್ದರು.

ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರು, ನವದೆಹಲಿಯ ಜಾಮಿಯಾ ಹಮ್ದರ್ದ್ ಮಾಜಿ ಪ್ರೊ-ಚಾನ್ಸಲರ್ ಮತ್ತು ಕೇರಳದ ಕ್ಯಾಲಿಕಟ್ ವಿಶ್ವವಿದ್ಯಾಲಯದ ಮಾಜಿ ಉಪಕುಲಪತಿ ಇಕ್ಬಾಲ್ ಸೈಯದ್ ಹಸನೈನ್ ಕೃತಿ ಕುರಿತು ಮಾತನಾಡಿದರು. ಅಖಘಾಂಆ-ಭಾರತ ನಿರ್ದೇಶಕ, ಖುಖು ಎಓಗ ಮಾಜಿ ಅಸೋಸಿಯೇಟ್ ಡೀನ್, ಎಓಗ ನ ಮಾಜಿ ಪ್ರಾಧ್ಯಾಪಕ ಪ್ರೊ ಅಫ್ತಾಬ್ ಕಮಲ್ ಪಾಷಾ, ಮಹಾರಾಜ ಕಾಲೇಜು ಅಂತರಾಷ್ಟ್ರೀಯ ಸಂಬಂಧಗಳ ವಿಭಾಗ ಅಧ್ಯಾಪಕರು ಡಾ. ಸಂಘಮಿತ್ರ ಕಲಿತ ಕೃತಿ ಕುರಿತು ಮಾತನಾಡಿದರು.

ಬಳಿಕ ಯುವ ವಿದ್ವಾಂಸರ ಅಧಿವೇಶನ ಹಮ್ಮಿಕೊಂಡಿದ್ದು, ಮಹಾರಾಜ ಕಾಲೇಜು ಅಂತರಾಷ್ಟ್ರೀಯ ಸಂಬಂಧಗಳ ವಿಭಾಗದ ಸ್ನಾತಕೋತ್ತರ ವಿದ್ಯಾರ್ಥಿಗಳಾದ ಎಸ್ತರ್ ಗಮಕೋ ಝುಗ್ವೈ, ದೀಪಕ್ ನಾರಾಯಣ ಎಸ್ ಭಾರದ್ವಾಜ್, ಶೆಮೇರಿ ಪೆರೇರಾ, ಪಿಎಚ್‌ಡಿ ಸಂಶೋಧನಾ ವಿದ್ವಾಂಸರಾದ ಅಲಾ ಎಂ ಎಚ್ ನಾಸರ್, ಬೆಂಗಳೂರಿನ ಓಋಂಖ ಪಿಎಚ್‌ಡಿ ಸಂಶೋಧನಾ ವಿದ್ವಾಂಸರು ರೋಹಿಣಿ ರೀನಮ್ ಪಾಲ್ಗೊಂಡಿದ್ದರು.

## ಧನ್ವನಂತರಿ ದೇವಾಲಯಲ್ಲಿ ಸಮಗ್ರ ರಾಮಾಯಣ ಸಪ್ತಾಹ ಪ್ರವಚನ ಮಾಲಿಕೆ

**ಮೈಸೂರು:** ಅಯೋಧ್ಯೆಯಲ್ಲಿ ಶ್ರೀರಾಮಮಂದಿರ ಉದ್ಘಾಟನೆ ಪರ್ವಕಾಲದ ನಿಮಿತ್ತ ಅಗ್ರಹಾರದಲ್ಲಿರುವ ಮೈಸೂರಿನ ಉತ್ತರಾಧಿ ಮಠ ಶ್ರೀ ದನ್ವನಂತರಿ ದೇವಾಲಯಲ್ಲಿ ಸಮಗ್ರ ರಾಮಾಯಣ ಸಪ್ತಾಹ ಪ್ರವಚನ ಮಾಲಿಕೆ ಹಮ್ಮಿಕೊಳ್ಳಲಾಗಿದೆ. ಈ ಪ್ರವಚನ ಮಾಲಿಕೆಯನ್ನು ಮುಡ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್ ಉದ್ಘಾಟಿಸಿದರು. ಈ ವೇಳೆ ಮಾತನಾಡಿದ ಅವರು ಧನ್ವಂತರಿ ದೇವಸ್ಥಾನದಲ್ಲಿ ರಾಮಾಯಣ ಸಪ್ತಾಹ ಪ್ರವಚನ ಹಮ್ಮಿಕೊಂಡಿರುವುದು ಅತ್ಯಂತ ಒಳ್ಳೆಯ ಕಾರ್ಯ ಎಂದು ಹೇಳಿದರು. ಲೌಖಿಕ ಬದುಕಿನಲ್ಲಿ ಮನುಷ್ಯ ಆಧುನಿಕತೆಯಡೆಗೆ ಹೋಗ್ತಾ,ಹೋಗ್ತಾ ಸ್ವಾರ್ಥಕ್ಕಾಗಿ ಬೌದ್ಧಿಕ ಅನುಕೂಲತೆಯೇ ಜೀವನ ಅಂದುಕೊಂಡಿದ್ದಾರೆ ಎಂದು ವಿಷಾದಸಿದರು. ಇವತ್ತಿನ ಪ್ರವಚನಕಾರರಾದ ಪಂಡಿತ್ ಶ್ರೀ ಗುರುರಾಜಾಚಾರ್ಯ, ಪಂಡಿತ್ ಗೋವಿಂದಚಾರ್ಯ ಪಾಂಡುರಂಗಿ, ಪಂಡಿತ್ ಅನಿರುದ್ಧಚಾರ್ಯ ಪಾಂಡುರಂಗಿ ಮತ್ತು ಎಸ್. ಬಿ. ವಾಸುದೇವ ಮೂರ್ತಿ ಪಾಲ್ಗೊಂಡಿದ್ದರು.



## ಹಿಟ್ ಅಂಡ್ ರನ್ ಪ್ರಕರಣ ನ್ಯೂನ್ಯತೆ ಸರಿಪಡಿಸಿ

**ಹುಳಿಯಾರು:** ಕೇಂದ್ರ ಸರಕಾರ ಪ್ರಸ್ತಾಪಿಸಿರುವ ಅಪಘಾತದ ವೇಳೆ ಹಿಟ್ ರನ್ ಪ್ರಕರಣಗಳಿಗೆ ಸಂಬಂಧಿಸಿದಂತೆ ಚಾಲಕರಿಗೆ ಶಿಕ್ಷೆ ವಿಧಿಸುವ ವಿಧೇಯಕವನ್ನು ವಿರೋಧಿಸಿ ರಾಷ್ಟ್ರಾದ್ಯಂತ ನಡೆಯುತ್ತಿರುವ ಮುಷ್ಕರವನ್ನು ಬೆಂಬಲಿಸಿ ಬುಧವಾರ ಹುಳಿಯಾರು ಲಾರಿ ಚಾಲಕರ ಸಂಘದಿಂದ ಪ್ರತಿಭಟನೆ ನಡೆಸಿದರು.

ಹುಳಿಯಾರಿನಲ್ಲಿರುವ ಸಂಘದ ಕಛೇರಿಯಿಂದ ನಾಡಕಛೇರಿಯವರೆವಿಗೂ ಪ್ರತಿಭಟನಾ ಮೆರವಣಿಗೆ ನಡೆಸಿದ ಚಾಲಕರು ನೂತನ ಕಾಯ್ದೆ ವಿರುದ್ಧ ದಿಕ್ಕಾರ ಕೂಗಿದರು. ಕೇಂದ್ರ ಸರಕಾರ ಕೂಡಲೇ ಚಾಲಕರ ಪರ ಕಾನೂನು ಜಾರಿ ಮಾಡಬೇಕು ಎಂದು ಒತ್ತಾಯಿಸಿದರು. ಈ ಕಾಯ್ದೆಯನ್ನು ಹಿಂಪಡೆಯುವಂತೆ ಆಗ್ರಹಿಸಿ ನಾಡಕಛೇರಿ ಮೂಲಕ ಪ್ರಧಾನಿಗೆ ಮನವಿ ಪತ್ರ ರವಾನಿಸಿದರು.

ಹುಳಿಯಾರು ಲಾರಿ ಚಾಲಕರ ಸಂಘದ ಅಧ್ಯಕ್ಷ ಸೈಯದ್ ಯಾಸೀನ್ ಅವರು ಮಾತನಾಡಿ ಹಿಟ್-ಅಂಡ್-ರನ್ ಪ್ರಕರಣದಲ್ಲಿ ಚಾಲಕನಿಗೆ 7 ಲಕ್ಷ ರೂ. ದಂಡ ಅಥವಾ 10 ವರ್ಷಗಳ ಜೈಲು ಶಿಕ್ಷೆ ಇದೆ. ಇದು ಚಾಲಕ ವೃತ್ತಿ ಪ್ರವೇಶಿಸಲು ಅಥವಾ ಮುಂದುವರೆಯಲು ನಿರುತ್ಸಾಹಗೊಳಿಸುವ ಕಾನೂನಾಗಿದೆ. 7 ಲಕ್ಷ ರೂ. ಇದಿದ್ದರೆ ಸ್ವಂತ ಉದ್ಯೋಗ ಮಾಡಿ ಹೆಂಡತಿ ಮಕ್ಕಳೊಂದಿಗೆ ಸುಖ ಸಂಸಾರ ನಡೆಸುತ್ತಿದ್ದ. ಈ ಆರ್ಥಿಕ ಶಕ್ತಿ ಇಲ್ಲದವರೇ ಹೊಟ್ಟೆಪಾಡಿಗಾಗಿ ಚಾಲಕ ವೃತ್ತಿ ಆಯ್ಕೆ ಮಾಡಿಕೊಂಡು ನಿದ್ರಾಹಾರದ ಅರಿವಿಲ್ಲದೆ ದುಡಿಯುತ್ತಿದ್ದಾರೆ. ಇಂತಹ ಚಾಲಕರಿಗೆ ಇದೊಂದು ಮರಣಶಾಸನವಾಗಿದೆ ಎಂದು ಆರೋಪಿಸಿದ್ದಾರೆ.

ಉಪಾಧ್ಯಕ್ಷ ಹರೀಶ್ ರಾವ್ ಮಾತನಾಡಿ ಹಿಟ್ -ಅಂಡ್ -ರನ್ ಪ್ರಕರಣಗಳಿಗೆ ಅಪರಾಧವನ್ನು ನಿರ್ಧರಿಸುವಲ್ಲಿ ಸ್ಪಷ್ಟತೆಯ ಅಗತ್ಯವಿದೆ. ವಿಶೇಷವಾಗಿ ವಾಹನವು ಹಿಂದಿನಿಂದ ಹೊಡೆದಾಗ ಅಥವಾ ಸಣ್ಣ ವಾಹನದ ಚಾಲಕನ ದೋಷದ ಸಂದರ್ಭಗಳಲ್ಲಿ ಸರಿಯಾದ ತನಿಖೆಯಾಗದೆ ಕೆಲವು ವಾಹನಗಳ ಮೇಲೆ ಅನ್ಯಾಯದ ಆರೋಪಗಳು ಮೇಲುಗೈ ಸಾಧಿಸಬಹುದು. ಹಾಗಾಗಿ ಕಾನೂನಿನಲ್ಲಿ ಗಮನರ್ಹವಾದ ಲೋಪಗಳಿವೆ. ಅಲ್ಲದೆ ಸಾರಿಗೆ ವಲಯದ ಪ್ರತಿನಿಧಿಗಳೊಂದಿಗೆ ಯಾವುದೇ ಸಮಾಲೋಚನೆಯಿಲ್ಲದೆ ಜಾರಿಗೆ ಮುಂದಾಗಿರುವುದು ಖಂಡನೀಯ. ಸರ್ಕಾರ ಕೂಡಲೇ ಕಾಯ್ದೆಯನ್ನು ಹಿಂಪಡೆಯಬೇಕು ಎಂದು ಒತ್ತಾಯಿಸಿದರು. ಮುಬಾರಕ್ ಷರೀಫ್, ಇಮ್ರಾನ್, ಸಾದತ್, ಜಿನೇದ್, ಇರ್ಫಾನ್, ಸಾದತ್, ಮುಜಾಯಿದ್, ಮಹಬೂಬ್, ರಫೀಕ್, ನವೀನ್, ಜಾಫರ್, ಖಲಂದರ್, ಫಯಾಜ್, ಸಲ್ಮಾನ್, ಖಾಜಾ, ನಾಗರಾಜು, ದೀಪು, ತಬಾರಕ್, ನಜೀರ್, ದಾದು, ಚಾಂದ್, ಸೈಫುಲ್ಲಾ, ನಜೀರ್, ಜಬ್ಬರ್, ಸದ್ದಾಮ್ ಉಪಸ್ಥಿತರಿದ್ದರು.

# ಲಾರಿ ಚಾಲಕರ ಮುಷ್ಕರ

## ಹಿಟ್ ಅಂಡ್ ರನ್ ವಿಧೇಯಕ ವಾಪಾಸ್‌ಗಾಗಿ ಪ್ರತಿಭಟನೆ

**ಮೈಸೂರು:** ಹಿಟ್ ಅಂಡ್ ರನ್ ಪ್ರಕರಣದಲ್ಲಿ ವಾಹನಗಳ ಚಾಲಕರಿಗೆ ಕಠಿಣ ಶಿಕ್ಷೆ ಹಾಗೂ ಹೆಚ್ಚು ದಂಡ ವಿಧಿಸುವ ಕೇಂದ್ರದ ನಿಯಮ ತಿದ್ದುಪಡಿ ಖಂಡಿಸಿ ಹಮ್ಮಿಕೊಂಡಿರುವ ಮುಷ್ಕರಕ್ಕೆ ಮೈಸೂರು ಜಿಲ್ಲಾ ಲಾರಿ ಮಾಲೀಕರ ಹಾಗೂ ಚಾಲಕರ ಒಕ್ಕೂಟವು ಶಾಂತಿಯುತ ಬೆಂಬಲ ಸೂಚಿಸಿದೆ.



ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಈ ಕಾಯ್ದೆಯಿಂದ ಲಾರಿ ಮಾಲೀಕರು ಹಾಗೂ ಚಾಲಕರಿಗೆ ಮಾತ್ರವಲ್ಲದೇ ಇತರೆ ವಾಹನಗಳ ಚಾಲಕರಿಗೂ ತೊಂದರೆಯಾಗಲಿದೆ. ಹೀಗಾಗಿ ಮುಷ್ಕರವನ್ನು ಸಂಘಟನೆಯು ಬೆಂಬಲಿಸಲಿದೆ. ಸಾರ್ವಜನಿಕರೂ ಈ ಜನವಿರೋಧಿ ಕಾಯ್ದೆಯನ್ನು ವಿರೋಧಿಸಬೇಕು ಎಂದು ಮೈಸೂರು ಜಿಲ್ಲಾ ಲಾರಿ ಮಾಲೀಕರ ಒಕ್ಕೂಟದ ಉಪಾಧ್ಯಕ್ಷ ಅಬ್ದುಲ್ ಖಾದರ್ ಶಾಹಿದ್ ಬುಧವಾರ ಸುದ್ದಿಗೋಷ್ಠಿಯಲ್ಲಿ ಮನವಿ ಮಾಡಿದರು. ಕಾಯ್ದೆ ತಿದ್ದುಪಡಿ ಅನ್ವಯ ಆದಲ್ಲಿ, ಯಾವುದೇ ವಾಹನ ಚಾಲಕರು ಅಪಘಾತವನ್ನು ಮಾಡಿ, ನಾಗರಿಕರ ಸಾವಿಗೆ ಕಾರಣವಾದರೆ ಚಾಲಕನಿಗೆ ಕಾಯ್ದೆ 106(1 ಮತ್ತು 2) ಅನ್ವಯ 10 ವರ್ಷಗಳವರೆಗೆ ಕಠಿಣ ಕಾರಾಗೃಹ ಶಿಕ್ಷೆ ಮತ್ತು ?7 ಲಕ್ಷಗಳವರೆಗೆ ದಂಡವನ್ನು ನ್ಯಾಯಾಲಯ ವಿಧಿಸಬಹುದಾಗಿದೆ. ಇದರಿಂದ ಉದ್ಯಮಕ್ಕೆ ಭಾರಿ ಹೊಡೆತ ಬೀಳಲಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಯಾವ ಚಾಲಕರು ಬೇಕೆಂತಲೇ ಅಪಘಾತ ಮಾಡುವುದಿಲ್ಲ. ಇದನ್ನು ಅರಿಯದ ಸರ್ಕಾರ ಹೊಸ ಕಾನೂನು ತಂದು, ಚಾಲಕರ ಮೇಲೆ ಮತ್ತಷ್ಟು ಒತ್ತಡ ಏರಿದೆ. ಮೈಸೂರು ಜಿಲ್ಲೆಯಲ್ಲಿ 30ರಿಂದ 40 ಸಾವಿರ ಲಾರಿಗಳಿವೆ. ಕೇಂದ್ರ ಸರ್ಕಾರದ ಈ ಕಾಯ್ದೆಯಿಂದ ಚಾಲಕ ಹುದ್ದೆಯ ಸಹವಾಸ ಬೇಡವೇ ಅನ್ನುವಷ್ಟು ಚಾಲಕರಿಗೆ ಬೇಸರವಾಗಿದೆ. ಹೀಗಾಗಿ ಕಾಯ್ದೆಯನ್ನು ಹಿಂಪಡೆದು ಚಾಲಕರಿಗೆ ಅನುಕೂಲ ಮಾಡಕೊಡಬೇಕು. ಈ ಕಾಯ್ದೆಯನ್ನು ಹಿಂಪಡೆಯುವವರಿಗೆ ನಮ್ಮ ಮುಷ್ಕರ ನಿಲ್ಲುವುದಿಲ್ಲ ಎಂದರು.

ನಮ್ಮ ಹೋರಾಟಕ್ಕೆ ವಾಹನಗಳ ವಿವಿಧ ಸಂಘಟನೆಗಳ ಬೆಂಬಲ ವ್ಯಕ್ತಪಡಿಸಿವೆ. ಅಗತ್ಯ ವಸ್ತುಗಳ ವಾಹನ ಸಂಚಾರಕ್ಕೆ ಯಾವುದೇ ಅಡಚಣೆ ಮಾಡುವುದಿಲ್ಲ. ಎಂದು ತಿಳಿಸಿದರು.

ಕರುನಾಡು ಲಾರಿ ಚಾಲಕರ ಪರಿಷತ್ ಅಧ್ಯಕ್ಷ ರಾಜೇಂದ್ರ ಮಾತನಾಡಿ, ಕೇಂದ್ರ ಸರ್ಕಾರದ ಈ ಕಾಯ್ದೆಯಿಂದ ಚಾಲಕರ ಮೇಲೆ ಬಹಳ ಹೊಡೆತ ಬೀಳಲಿದೆ. ಈ ವೃತ್ತಿಯನ್ನು ನಂಬಿರುವ ನಾವು ಜೀವನ ಮಾಡುವುದು ಹೇಗೆ? 10 ವರ್ಷ ಶಿಕ್ಷೆ, ?7 ಲಕ್ಷ ದಂಡ ವಿಧಿಸುವುದಾದರೆ ನಮಗೆ ವಾಹನಗಳ ಲೈಸೆನ್ಸ್ ಬೇಡ. ಭಿಕ್ಷೆ ಬೇಡಿ ಜೀವನ ಮಾಡುತ್ತೇವೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಒಕ್ಕೂಟದ ಉಪಾಧ್ಯಕ್ಷ ಪ್ರಕಾಶ್ ಎಸ್. ರೇರ, ಕಾರ್ಯದರ್ಶಿ ಎಸ್.ಅಭಿಷೇಕ್, ಮೈಸೂರು ಸಿಟಿ ಗ್ರೂಪ್ ಲಾರಿ ಮಾಲೀಕರ ಸಂಘದ ಅಧ್ಯಕ್ಷ ಅಜಗರ್, ಮುಖಂಡರಾದ ಅಜೀಜ್, ಬಿ.ಗಣೇಶ್ ಇದ್ದರು.

## ಮೈಸೂರಿನಲ್ಲಿ ಖಾಸಗಿ ಬಸ್‌ಗಳಿಂದ ಬೆಂಬಲ



**ಮೈಸೂರು:** ಕೇಂದ್ರ ಸರ್ಕಾರದ ನೂತನ ಮೋಟಾರು ವಾಹನ ಕಾಯ್ದೆಗೆ ದೇಶಾದ್ಯಂತ ವಿರೋಧ ತೀವ್ರಗೊಂಡಿದ್ದು ಕಾಯ್ದೆಯನ್ನ ವಾಪಸ್ ಪಡೆಯುವಂತೆ ಆಗ್ರಹಿಸಿ ಲಾರಿ ಮಾಲೀಕರು, ಚಾಲಕರ ಮುಷ್ಕರ ನಡೆಸುತ್ತಿದ್ದಾರೆ. ಲಾರಿ ಮಾಲೀಕರು ಮತ್ತು ಚಾಲಕರ ಮುಷ್ಕರಕ್ಕೆ ಮೈಸೂರಿನಲ್ಲಿ ಖಾಸಗಿ ಬಸ್ ಗಳು ಬೆಂಬಲ ವ್ಯಕ್ತಪಡಿಸಿವೆ. ಖಾಸಗಿ ಬಸ್ ಚಾಲಕ ಮತ್ತು ಮಾಲೀಕರು ರಸ್ತೆಗಿಳಿಯದೆ ಹೋರಾಟಕ್ಕೆ ನೈತಿಕ ಬೆಂಬಲ ಸೂಚಿಸಿದ್ದಾರೆ. ನಗರದ ಆರ್ ಎಂಸಿ ಬಳಿ ಇರುವ ಖಾಸಗಿ ಬಸ್ ನಿಲ್ದಾಣದಲ್ಲಿ ನೂರಾರು ಖಾಸಗಿ ಬಸ್ ಗಳು ನಿಂತಿದ್ದು ಈ ಮೂಲಕ ಮುಷ್ಕರಕ್ಕೆ ಬೆಂಬಲ ವ್ಯಕ್ತಪಡಿಸಿದ್ದಾರೆ. ಕೇಂದ್ರ ಸರ್ಕಾರದ ನೂತನ ಕಾನೂನು ಕೇವಲ ಲಾರಿ ಚಾಲಕರಿಗೆ ಅಥವಾ ಮಾಲೀಕರಿಗೆ ಮಾತ್ರ ಅಲ್ಲ. ಇದು ರಸ್ತೆಯಲ್ಲಿ ಸಂಚಾರ ಮಾಡುವ ದ್ವಿಚಕ್ರ ವಾಹನದಿಂದ ಹಿಡಿದು ಭಾರಿ ವಾಹನಗಳವರೆಗೆ ಎಲ್ಲಾ ರೀತಿಯ ವಾಹನ ಸವಾರರಿಗೂ ಅನ್ವಯವಾಗುತ್ತದೆ. ಹಾಗಾಗಿ ಇದು ಚಾಲಕ, ಮಾಲೀಕರಿಗೆ ಮರಣ ಶಾಸಕವಾಗಿದೆ. ಈ ಕೂಡಲೇ ಕಾಯ್ದೆ ವಾಪಸ್ ಪಡೆಯಬೇಕು ಎಂದು ವ್ಯಾಪಕ ಒತ್ತಾಯ ಕೇಳಿ ಬಂದಿದೆ.

## ಮೊಲ ಕಾಡಿಗೆ ಬಿಟ್ಟು ಸಂಕ್ರಾಂತಿ

**ಹುಳಿಯಾರು:** ಹೋಬಳಿಯ ಸೀಗೆಬಾಗಿ ಗ್ರಾಮದಲ್ಲಿ ಕಾಡಿನಿಂದ ಹಿಡಿದು ತಂದ ಮೊಲವನ್ನು ಮತ್ತೆ ಕಾಡಿಗೆ ಬಿಡುವ ಮೂಲಕ ಮಂಗಳವಾರ ಸಂಜೆ ಸಂಕ್ರಾಂತಿ ಸಂಪನ್ನಗೊಂಡಿತು. ಸಂಕ್ರಾಂತಿ ಹಬ್ಬವನ್ನು ಸೀಗೆಬಾಗಿ ಗ್ರಾಮದಲ್ಲಿ ವರ್ಷದ ಮೊದಲ ಹಬ್ಬವಾಗಿ ಆಚರಿಸುತ್ತಾರೆ. ಹಬ್ಬಕ್ಕೆ ಮೂರು ದಿನದ ಮೊದಲೇ ಗ್ರಾಮದ ಕೆಲವರು ಕಾಡಿಗೆ ಹೋಗಿ ಜೀವಂತ ಮೊಲವನ್ನು ಹಿಡಿದು ತಂದು ಮೊಲದ ಕಿವಿವೆ ಓಲೆ ಹಾಕುತ್ತಾರೆ. ಸಂಕ್ರಾಂತಿ ಹಬ್ಬದಂದು ವಿಶೇಷವಾಗಿ ಪೂಜಿಸಿ ಜೋಪಾನವಾಗಿ ಹಿಡಿದಿಟ್ಟಿರುತ್ತಾರೆ. ಹಬ್ಬದ ಮರುದಿನ ಅಂದರೆ ಮಂಗಳವಾರ ಸಂಜೆ ವರದರಾಜಸ್ವಾಮಿ ದೇಗುಲದ ಆವರಣದಿಂದ ವರದರಾಜಸ್ವಾಮಿ ಹಾಗೂ ವಿವಿಧ ದೇವರುಗಳೊಂದಿಗೆ ಮಂಗಳವಾದ್ಯ ಸಹಿತ ಮೊಲದ ಉತ್ಸವ ಮಾಡುತ್ತಾರೆ. ನಂತರ ಶಾಲಾ ಆವರಣದಲ್ಲಿ ನೂರಾರು ಮಂದಿಯ ಸಮ್ಮುಖದಲ್ಲಿ ಮೊಲಕ್ಕೆ ವಿಶೇಷ ಪೂಜೆ ಸಲ್ಲಿಸಿ ಕಿವಿಗೆ ಓಲೆ ಹಾಕಿದ್ದ ಮೊಲವನ್ನು ಪುನಃ ಕಾಡಿಗೆ ಬಿಡುತ್ತಾರೆ. ಅದು ಯಾವ ದಿಕ್ಕಿಗೆ ಓಡುತ್ತದೆಯೋ ಆ ದಿಕ್ಕಿನಲ್ಲಿ ಉತ್ತಮ ಬೆಳೆಯಾಗುತ್ತದೆ ಎಂಬ ಪ್ರತೀತಿ ಗ್ರಾಮಸ್ಥರಲ್ಲಿದೆ. ಈ ಅಪರೂಪದ ಆಚರಣೆಗೆ ಸೀಗೆಬಾಗಿ ಸೇರಿದಂತೆ ಅಕ್ಕಪಕ್ಕದ ಗ್ರಾಮಸ್ಥರು, ಶ್ರೀ ವರದರಾಜಸ್ವಾಮಿಯ ಭಕ್ತರು ಸೇರುತ್ತಾರೆ. ಒಟ್ಟಾರೆ ಇದೊಂದು ಪುಟ್ಟ ಜಾತ್ರೆಯ ರೀತಿ ನಡೆಯುತ್ತಿದ್ದು ಅನಾಧಿ ಕಾಲದಿಂದಲೂ ನಡೆಸಿಕೊಂಡು ಬರುತ್ತಿದ್ದಾರೆ.



## ಕಾಡಾನೆ ದಾಳಿ– ರೈತನಿಗೆ ಕಾಲು ಮುರಿತ

**ಹನೂರು:** ಜಮೀನಿನಲ್ಲಿ ಕಾವಲು ಕಾಯುತ್ತಿದ್ದ ಗಂಗನದೊಡ್ಡಿಯ ನಟರಾಜು ಎಂಬುವವರು ಕಾಡಾನೆ ದಾಳಿಯಿಂದ ಗಾಯಗೊಂಡಿರುವ ಘಟನೆ ಮಂಗಳವಾರ ನಡೆದಿದೆ. ಅಂದು ರಾತ್ರಿ ಜಮೀನಿನಲ್ಲಿ ಕಾವಲು ಕಾಯುತ್ತಿದ್ದ ಸಮಯದಲ್ಲಿ ಕಾಡಾನೆಯೊಂದು ಜಮೀನಿಗೆ ನುಗ್ಗಿದ್ದು, ದಾಳಿ ನಡೆಸಿದೆ. ಬಳಿಕ ಗಾಯಗೊಂಡಿದ್ದ ಅವರನ್ನು ಮೈಸೂರಿನ ಜೆ.ಎಸ್.ಎಸ್ ಆಸ್ಪತ್ರೆಗೆ ದಾಖಲಿಸಲಾಗಿದೆ.



ಕಾಡಾನೆ ಹಾವಳಿ ತಪ್ಪಿಸಿ: ನಾಲ್ಕು ತಿಂಗಳ ಹಿಂದೆ ಇದೇ ರೀತಿ ಕಾವಲು ಕಾಯುವ ಸಂದರ್ಭದಲ್ಲಿ ಕಾಡಾನೆ ದಾಳಿ ಮಾಡಿತ್ತು. ಆಗ ಪ್ರಾಣಾಪಾಯದಿಂದ ಪಾರಾಗಿದ್ದರು. ಈಗ ಮತ್ತೆ ದಾಳಿಗೆ ತುತ್ತಾಗಿದ್ದಾರೆ. ಈ ಭಾಗದಲ್ಲಿ ಕಾಡಾನೆ ಹಾವಳಿ ಮಿತಿ ಮೀರಿದ್ದು, ಕಾಡಂಚಿನ ಜಮೀನಿನ ರೈತರು ಸದಾ ಆತಂಕದಲ್ಲೆ ಇರಬೇಕಾದ ಪರಿಸ್ಥಿತಿ ಎದುರಾಗಿದೆ. ಕೂಡಲೇ ಅರಣ್ಯ ಇಲಾಖೆ ಕಾಡಾನೆ ಹಾವಳಿ ತಪ್ಪಿಸಬೇಕು ಎಂದು ರೈತರು ಒತ್ತಾಯಿಸಿದ್ದಾರೆ. ಆನೆ ದಾಳಿ ಪರಿಣಾಮ ಬಲಗಾಲು ಮುರಿದಿದ್ದು, ಸೊಂಟದ ಬಳಿ ಗಾಯವಾಗಿದೆ. ಶಸ್ತ್ರ ಚಿಕಿತ್ಸೆ ಮಾಡುವುದಾಗಿ ವೈದ್ಯರು ತಿಳಿಸಿದ್ದಾರೆ. ವೈದ್ಯರಿಂದ ವರದಿ ಪಡೆದು ನಂತರ ಇಲಾಖೆಯಿಂದ ವೈದ್ಯಕೀಯ ವೆಚ್ಚ ಭರಿಸಲು ಕ್ರಮ ಕೈಗೊಳ್ಳಲಾಗುವುದು? ಎಂದು ವಲಯ ಅರಣ್ಯಾಧಿಕಾರಿ ಪ್ರವೀಣ್ ತಿಳಿಸಿದರು.

## ಕುಡಿವ ನೀರಿನ ಅವಶ್ಯಕತೆ ಬಗ್ಗೆ ಮನವರಿಕೆ ಮಾಡಿ

**ಚನ್ನಪಟ್ಟಣ:** ಕಾವೇರಿ ನದಿ ನೀರು ಹಂಚಿಕೆ ಪ್ರಾಧಿಕಾರದಲ್ಲಿ ಜ. 19 ರಂದು ಕರೆದಿರುವ ವಿಶೇಷ ಸಭೆಯಲ್ಲಿ ಜಲಸಂಪನ್ಮೂಲ ಸಚಿವರು ರಾಜ್ಯದ ಜಲಾಶಯಗಳಲ್ಲಿನ ನೀರಿನ ಕೊರತೆ ಮತ್ತು ಕುಡಿನೀರಿನ ಅವಶ್ಯಕತೆ ಬಗ್ಗೆ ಮನವರಿಕೆ ಮಾಡಿಕೊಡಲು ಮುಂದಾಗಬೇಕು ಎಂದು ಕಸ್ತೂರಿ ಕರ್ನಾಟಕ ಜನಪರ ವೇದಿಕೆಯ ರಾಜ್ಯಾಧ್ಯಕ್ಷ ರಮೇಶ್‌ಗೌಡರು ಅಭಿಪ್ರಾಯಿಸಿದರು.




ಕಾವೇರಿ ನದಿ ನೀರಿನ ಹಂಚಿಕೆಯಲ್ಲಿ ಸಂಕಷ್ಟ ಸೂತ್ರ ರಚಿಸುವ ಜೊತೆಗೆ ಮೇಕೆದಾಟು ಯೋಜನೆಗೆ ಅಡಿಗಲ್ಲು ಹಾಕುವಂತೆ ಆಗ್ರಹಿಸಿಕಸ್ತೂರಿ ಕರ್ನಾಟಕ ಜನಪರ ವೇದಿಕೆಯ ರಾಜ್ಯಾಧ್ಯಕ್ಷರಾದ ರಮೇಶ್ ಗೌಡರ ನೇತೃತ್ವದಲ್ಲಿ ನಿರಂತರವಾಗಿ ಹೋರಾಟ ಮಾಡುತ್ತಿದ್ದು ಬುದವಾರ ನಡೆದ 105 ನೇ ದಿನದ ಹೋರಾಟದಲ್ಲಿ ಮಾತನಾಡಿದ ಅವರು, ರಾಜ್ಯದ ನಾಲ್ಕು ಜಲಾಶಯಗಳಿಂದ 60 ಟಿಎಂಸಿ ನೀರು ಮಾತ್ರ ಉಳಿಸಿದೆ ಈ ನೀರನ್ನು ಮುಂದೆ ಮಳೆಗಾಲ ಬರುವವರೆಗೆ ಕುಡಿಯುವ ನೀರಿಗೆ ಬಳಕೆ ಮಾಡಿಕೊಳ್ಳಬೇಕಿದ್ದು, ಜೊತೆಗೆ ಜಲಚರ ಪ್ರಾಣಿ ಉಳಿಸಲು ನದಿಗೂ ನೀರನ್ನು ಬಿಡಬೇಕಿದೆ. ಈ ನಿಟ್ಟಿನಲ್ಲಿ ಜ. 19 ರಂದು ಪ್ರಾಧಿಕಾರದಿಂದ ಕರೆದಿರುವ ಸಭೆಯಲ್ಲಿ ತಮಿಳುನಾಡು ಮತ್ತೆ ನೀರು ಬಿಡಿ ಎನ್ನುವ ಅವಕಾಶ ಇದ್ದು ಜಲಾಶಯದಲ್ಲಿ ನೀರಿಲ್ಲದಿದ್ದರೂ ನೀರು ಬಿಡಿ ಎಂದು ಒತ್ತಡ ಹಾಕಿದರೆ ಅದು ಅವರ ಕ್ರೂರತನದ ಪ್ರದರ್ಶನವಾಗುತ್ತದೆ ಎಂದು ಕುಟುಕಿದರು.

ರಾಜ್ಯದಲ್ಲಿ ಬರದ ನಡುವೆ ಬಿಸಿಲಿನ ತಾಪ ಹೆಚ್ಚಾಗಿದ್ದು ಮಳೆ ಬರುವವರೆಗೆ ಜಲಾಶಯಗಳ ನೀರನ್ನು ಕುಡಿಯುವ ನೀರಿಗೆ ಬಳಕೆ ಮಾಡಿಕೊಳ್ಳಲು ಮೊದಲ ಆದ್ಯತೆ ನೀಡಿ ಮುಂದಿನ ಅವಧಿ ವೇಳೆಗೆ ಇದೇ ಪರಿಸ್ಥಿತಿ ಬಾರದಂತೆ ಸರ್ಕಾರ ಮುನ್ನೆಚ್ಚರಿಕೆ ವಹಿಸಬೇಕು. ಈ ನಿಟ್ಟಿನಲ್ಲಿ ಮಳೆ ಅಭಾವ ಉಂಟಾದ ವೇಳೆ ಮಳೆ ಆದಾರಿತ ಸಂಕಷ್ಟ ಸೂತ್ರ ರಚಿಸಲು ಹಾಗೂ ಮಳೆ ಹೆಚ್ಚು ಬಂದ ವೇಳೆ ಸಮುದ್ರದ ಪಾಲಾಗದಂತೆ ನೀರನ್ನು ತಡೆದು ಉಪಯುಕ್ತವಾಗಿಸಿಕೊಳ್ಳಲು ಮೇಕೆದಾಟು ಯೋಜನೆಯನ್ನು ಶೀಘ್ರವೇ ಅನುಷ್ಠಾನಕ್ಕೆ ತರಲು ಮುಂದಾಗಬೇಕು ಎಂದು ರಮೇಶ್‌ಗೌಡರು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ವೇದಿಕೆಯ ಜಿಲ್ಲಾಧ್ಯಕ್ಷ ಬೇವೂರು ಯೋಗೀಶ್‌ಗೌಡ, ರಾಜ್ಯ ಉಪಾಧ್ಯಕ್ಷರುಗಳಾದ ರಂಜಿತ್‌ಗೌಡ್, ಬೆಂಕಿ ಶ್ರೀಧರ್ ವೇದಿಕೆ ರಾಜ್ಯ ಕಾರ್ಯಾಧ್ಯಕ್ಷ ಜಗದಾಪುರ ಕೃಷ್ಣೇಗೌಡ, ಎಂಟಿಆರ್ ತಿಮ್ಮರಾಜು, ಮೆಣಸಿಗನಹಳ್ಳಿ ರಾಮಕೃಷ್ಣ, ಡಿಎಸ್‌ಎಸ್ ಸಂಚಾಲಕ ವೆಂಕಟೇಶ್ (ಸೇಟು), ವೇದಿಕೆ ತಾಲೂಕು ಗೌರವ ಅಧ್ಯಕ್ಷ ಚಿಕ್ಕಣ್ಣಪ್ಪ, ಅಜಿತ್, ಸಿದ್ದಪ್ಪಾಜಿ, ಅಜಯ್, ರಾಮಕೃಷ್ಣ, ರಮೇಶ್, ರವಿ, ಪುನಿತ್, ಸಯ್ಯದ್ ಮುಜಾಯಿದ್ ಸೇರಿದಂತೆ ಹಲವರು ಇದ್ದರು.

## ಪ್ರಶ್ನೋತ್ತರ ಹೊತ್ತಿಗೆ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಜಾಲತಾಣದಲ್ಲಿ ಲಭ್ಯ

**ಬೆಂಗಳೂರು:** ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು ವಿಜ್ಞಾನ ಪ್ರತಿಭಾನ್ವೇಷಣೆ ಕಾರ್ಯಕ್ರಮದಡಿ ಪ್ರಶ್ನೋತ್ತರ ಹೊತ್ತಿಗೆಯನ್ನು ಪದವಿ ಪೂರ್ವ ವಿದ್ಯಾರ್ಥಿಗಳ ಅಧ್ಯಯನಕ್ಕೆ ಪೂರಕವಾಗುವಂತೆ ಭೌತವಿಜ್ಞಾನ, ರಸಾಯನವಿಜ್ಞಾನ, ಗಣಿತ ಮತ್ತು ಜೀವವಿಜ್ಞಾನ ವಿಷಯಗಳಲ್ಲಿ ನುರಿತ ಸಂಪನ್ಮೂಲ ತಜ್ಞರ ಸಹಕಾರದೊಂದಿಗೆ ಹೊರತರಲಾಗಿದೆ. ಆಸಕ್ತ ವಿದ್ಯಾರ್ಥಿಗಳು ಈ ಪುಸ್ತಕವನ್ನು ಅಕಾಡೆಮಿಯ ಜಾಲತಾಣ https://kstacademy.in/kn/sts-k/ ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ ಎಂದು ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಎ.ಎಂ.ರಮೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಎಸ್. ಸಂಜಯ್ ನಿಧನ

**ವಿಜಯಪುರ:** ಪಟ್ಟಣದ ಜೆ. ಸಿ. ಬಡಾವಣೆಯಲ್ಲಿ ವಾಸವಾಗಿರುವ ನಗರ್ತ ಸಮಾಜದ ಎಸ್. ಸಂಜಯ್ (ಗಾಂಧಿ)(51) ರವರು ಹೃದಯಾಘಾತದಿಂದ ಬುಧವಾರದಂದು ಲಿಂಗೈಕ್ಯರಾಗಿರುತ್ತಾರೆ. ಮೃತರು ಪತ್ನಿ ಹಾಗೂ ಓರ್ವ ಪುತ್ರನನ್ನು ಅಗಲಿದ್ದು, ಅವರ ಅಂತ್ಯಸಂಸ್ಕಾರವನ್ನು ಅ. ಶಿ. ವೈ. ನಗರ್ತ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು. ಮಹಂತಿನ ಮಠ, ಯುವಕ ಸಂಘ, ಮಹಿಳಾ ಸಂಘಗಳ ಪದಾಧಿಕಾರಿಗಳು ನೂರಾರು ಸಂಖ್ಯೆಯಲ್ಲಿ ಆಗಮಿಸಿ, ಮೃತರ ಆತ್ಮಕ್ಕೆ ಶಾಂತಿ ಕೋರಿದರು.



### ಮುಗಿಲು ಮುಟ್ಟಿತು ಜನತೆಯ ಹರ್ಷದ ಹೊನಲು

## ಹಾರೋಹಳ್ಳಿಗೆ ಬಿಎಂಟಿಸಿ ಬಸ್ ಸಂಚಾರ ಪ್ರಾರಂಭ

**ವಿಜಯಪುರ:** ಹೋಬಳಿಯ ಹಾರೋಹಳ್ಳಿ ಗ್ರಾಮದಲ್ಲಿ ಕಳೆದ ಸುಮಾರು 15 ವರ್ಷಗಳಿಂದಲೂ ಕಾಣದ ಬಸ್ ಸಂಚಾರ ಇಂದು ಪ್ರಾರಂಭವಾಗಿದ್ದು ಜನತೆಯ ಹರ್ಷ ಹರ್ಷಕ್ಕೆ ಕೊನೆಯಿಲ್ಲದಂತಾಯಿತು.

ವಿಜಯಪುರ ಶನಿಮಹಾತ್ಮನ ದೇವಸ್ಥಾನ ದಂಡಿಗಾನಹಳ್ಳಿ ಬೈಚಾಪುರ ಹಾರೋಹಳ್ಳಿ ಗುಳ್ಳಳ್ಳಿ ಆವತಿ ಮಾರ್ಗವಾಗಿ ದೇವನಹಳ್ಳಿ ಬೆಂಗಳೂರಿಗೆ ಬಿಎಂಟಿಸಿ ಬಸ್ ಸಂಚಾರ ಪ್ರಾರಂಭವಾಗಿದ್ದು ಈ ಹಿಂದೆ ಖಾಸಗಿ ಹಾಗೂ ಕೆಎಸ್‌ಆರ್‌ಟಿಸಿ ಬಸ್ಸುಗಳು 15 ವರ್ಷಗಳ ಹಿಂದೆ ಓಡಾಡುತ್ತಿದ್ದದು ನಿಂತ ನಂತರ ಈ ಭಾಗದ ಜನತೆ ಸಾಕಷ್ಟು ಬಸ್ ಗಳನ್ನು ಓಡಿಸಲು ಒತ್ತಾಯ ಮಾಡುತ್ತಿದ್ದರೂ ಸಹ ಅದು ಇಂದು ನೆರವೇರಿದಂತಾಯಿತು.



ಹಾರೋಹಳ್ಳಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಚಂದ್ರಪ್ಪ ರವರು ಮಾತನಾಡಿ ಸಚಿವ ಕೆಎಚ್ ಮುನಿಯಪ್ಪ ರವರ ಬಳಿ ಹಲವಾರು ಬಾರಿ ಓಡಾಡಿದ ಬಳಿಕ ಕೊನೆಗೂ ಈ ಭಾಗಕ್ಕೆ ಬಸ್ಸನ್ನು ಹಾಕಿಸಿದ್ದು ಇನ್ನು ಮುಂದೆ ಈ ಭಾಗದ ಹಳ್ಳಿಗಳ ಜನ ಬೆಂಗಳೂರಿಗೆ ಹೋಗಬೇಕೆಂದರೆ ದೇವನಹಳ್ಳಿಗೆ ಹೋಗಿ ಇಲ್ಲವೇ ವಿಜಯಪುರಕ್ಕೆ ಹೋಗಿ ಹೋಗಬೇಕಾದ ಪರಿಸ್ಥಿತಿ ಇರುವುದಿಲ್ಲ ನೇರವಾಗಿ ತಮ್ಮ ತಮ್ಮ ಗ್ರಾಮಗಳಿಂದಲೇ ಬೆಂಗಳೂರಿಗೆ ಹೋಗಲು ಹಾಗೂ ಬರಲು ಅನುಕೂಲವಾಗುತ್ತದೆ ಎಂದು ತಿಳಿಸಿದರು.

ಗ್ರಾಮದ ಮುಖಂಡ ಪ್ರಗತಿಪರ ರೈತರಾದ ರಘುರವರು ಮಾತನಾಡಿ, ಬೆಳಗ್ಗೆ ಶಾಲಾ ಕಾಲೇಜಿಗೆ ಹೋಗುವ ಮಕ್ಕಳು ಅವರಿವರು ಓಡಾಡುವ ಗಾಡಿಗಳಿಗೆ ಕೈ ಅಡ್ಡ ಇಟ್ಟು ಅವರು ಗಳಿಂದ ಡ್ರಾಪ್ ತೆಗೆದುಕೊಳ್ಳಬೇಕಾಗುತ್ತದೆ. ಇಲ್ಲವೋ ನಡೆದುಕೊಂಡೆ ವಿಜಯಪುರಕ್ಕೆ ಹೋಗಿ ಅಲ್ಲಿಂದ ಚಿಕ್ಕಬಳ್ಳಾಪುರ ಹಾಗೂ ದೇವನಹಳ್ಳಿ ಕಡೆಗೆ ಶಾಲಾ-ಕಾಲೇಜುಗಳಿಗೆ ಹೋಗಬೇಕಾಗಿತ್ತು ಆದರೆ ಇದೀಗ ಬಸ್ ಬಿಟ್ಟಿರುವುದರಿಂದ ಕಾಲೇಜುಗಳ ಸಮಯಕ್ಕೆ ಹೋಗಲು ಹಾಗೂ ಕಾಲೇಜುಗಳು ಬಿಟ್ಟ ಸಮಯಕ್ಕೆ ಗ್ರಾಮಕ್ಕೆ ವಾಪಸ್ ಬರಲು ಅನುಕೂಲವಾಗಿದೆ ಎಂದು ತಿಳಿಸಿದರು. ಬೆಳಗ್ಗೆ 7 ಗಂಟೆಗೆ ಇಲ್ಲಿನ ಕೂಲಿಕಾರ್ಮಿಕರು ದ್ರಾಕ್ಷಿ ಕಟಿಂಗ್ ಮತ್ತಿತರೆ ಕೂಲಿ ಕೆಲಸಕ್ಕಾಗಿ ವೆಂಕಟಗಿರಿಕೋಟೆ, ವಿಜಯಪುರ, ದೇವನಹಳ್ಳಿಗಳಿಗೆ ಹೋಗಬೇಕಾಗಿದ್ದು, ಇದೀಗ ಬಸ್‌ಗಳ ಪ್ರಾರಂಭದಿಂದ ಅನುಕೂಲವಾಗಿದೆ ಎಂದು ತಿಳಿಸಿದರು.

ವಿಧಾನ ಪರಿಷತ್ತಿಗೆ ಶಿಕ್ಷಕರ ಕ್ಷೇತ್ರದಿಂದ ಚುನಾವಣೆ ಪ್ರಕಟಗೊಂಡ ಕಾರಣ ಹಾರೋಹಳ್ಳಿ ಗ್ರಾಮದಲ್ಲಿ ಪ್ರಾರಂಭವಾಯಿತು ಆಗಬೇಕಾಗಿದ್ದ ಹಾಲು ಉತ್ಪಾದಕ ಸಹಕಾರ ಸಂಘದ ವಿಸ್ತರಣಾ ಕಟ್ಟಡ ಉದ್ಘಾಟನೆ ಸಹ ರದ್ದುಗೊಂಡಿದ್ದು ಬಸ್ಗಳ ಓಡಾಟ ಸಹ ಪ್ರಾರಂಭಗೊಳ್ಳುವುದಿಲ್ಲವೇ ಎಂಬ ಆತಂಕ ಮೂಡಿದ್ದರೂ ಸಹ, ಆದರೆ ಸಮಯಕ್ಕೆ ಸರಿಯಾಗಿ ಬಸ್ ಬಂದಿದ್ದು, ಅದಕ್ಕೆ ಪೂಜೆ ಸಲ್ಲಿಸಿ, ಓಡಾಟ ಪ್ರಾರಂಭಿಸಲಾಯಿತು.

ಹಾರೋಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಸುಮದೇವಿ ಮಂಜುನಾಥ್, ಪಂಚಾಯಿತಿ ಕಾರ್ಯದರ್ಶಿ ರಾಜೇಶ್, ಸದಸ್ಯರುಗಳಾದ ಆಂಜನಮ್ಮ, ಮಂಜುಳಮ್ಮ, ಟಿ.ಎಂ ಹರೀಶ್, ಡಿಎಂ ಸತೀಶ್, ನಾಗಮ್ಮ, ಎಂ.ಪಿ.ಸಿ.ಎಸ್ ಉಪಾಧ್ಯಕ್ಷ ಬೈರಪ್ಪ, ನಿರ್ದೇಶಕ ಸುಬ್ರಮಣ್ಯ, ಜಯರಾಮರೆಡ್ಡಿ, ಅಪ್ಪಾಸ್ವಾಮಿ, ದೇವನಹಳ್ಳಿ ತಾಲೂಕು ಪಂಚಾಯಿತಿ ಮಾಜಿ ಸದಸ್ಯರಾದ ಅನ್ನಪೂರ್ಣ ಚಂದ್ರಪ್ಪ, ಹಾರೋಹಳ್ಳಿ ಎಂ ಪಿ ಸಿ ಎಸ್ ಅಧ್ಯಕ್ಷರಾದ ಎಚ್‌ಜಿ ಶ್ರೀನಿವಾಸ್, ಮತ್ತಿತರರು ಉಪಸ್ಥಿತರಿದ್ದರು.

## ಸರ್ಕಾರಿ ಬಸ್‌ಗೆ ಮುಗಿಬಿದ್ದ ಜನ

**ಯಳಂದೂರು:** ತಾಲ್ಲೂಕಿನಾದ್ಯಂತ ಖಾಸಗಿ ಬಸ್ ಮತ್ತು ಲಾರಿ ಚಾಲಕರು ಬಂದ್‌ಗೆ ಕರೆ ನೀಡಿದ್ದ ಹಿನ್ನೆಲೆಯಲ್ಲಿ ಬುಧವಾರ ಖಾಸಗಿ ಬಸ್‌ಗಳ ಸಂಚಾರ ಸ್ಥಗಿತವಾಗಿದ್ದು, ಸರ್ಕಾರಿ ಬಸ್ ಪ್ರಯಾಣಕ್ಕೆ ಜನದಟ್ಟಣೆ ಕಂಡುಬಂತು. ಸಾರ್ವಜನಿಕರು ಸರ್ಕಾರಿ ಬಸ್ ಅವಲಂಬಿಸಿ ಹೊರ ಜಿಲ್ಲೆಗಳಿಗೆ ತೆರಳುವ ಹಿನ್ನೆಲೆಯಲ್ಲಿ ಮುಗಿಬಿದ್ದಿದ್ದ ಪ್ರಯಾಣಿಕರು ತೊಂದರೆ ಅನುಭವಿಸುವಂತಾಗಿತ್ತು. ಖಾಸಗಿ ಬಸ್ ಇಲ್ಲದ ಕಾರಣ ಬಸ್ ನಿಲ್ದಾಣಗಳಲ್ಲಿ ಜನದಟ್ಟಣೆ ಹೆಚ್ಚಾಗಿತ್ತು. ಹೊಸ ಕಾನೂನು ಜಾರಿಯಾದಲ್ಲಿ ಅಪಘಾತ ಸಂದರ್ಭ ಚಾಲಕರಿಗೆ 7 ವರ್ಷ ಜೈಲು ಮತ್ತು 10 ಲಕ್ಷ ದಂಡ ಬೀಳಲಿದೆ. ಇಂತಹ ಅವೈಜ್ಞಾನಿಕ ಕಾಯ್ದೆ ಜಾರಿ ವಿರೋಧಿಸಿ ಒಂದು ದಿನ ವಾಹನ ಸಂಚಾರ ನಿರ್ಬಂಧಿಸಿದ್ದೇವೆ? ಎಂದು ರವೀಂದ್ರ ಬಸ್ ನಿರ್ವಾಹಕ ಬಾಬು ಹೇಳಿದರು. ಲಾರಿ ಚಾಲಕರ ಪ್ರತಿಭಟನೆ ಮುಂದುವರಿಯಲಿದ್ದು, ಪ್ರತಿಭಟನೆ ಹಿಂಪಡೆಯುವ ಬಗ್ಗೆ ಇನ್ನೂ ಒಮ್ಮತಕ್ಕೆ ಬಂದಿಲ್ಲ. ಆದರೆ, ಬಸ್ ಗುರುವಾರ ಎಂದಿನಂತೆ ಸಂಚರಿಸಲಿದೆ ಎಂದು ಚಾಲಕ ನಾಗೇಂದ್ರ, ಹೇಳಿದರು.



## ಇ-ಆಸ್ತಿ ತಂತ್ರಾಂಶದಲ್ಲಿ ಆಸ್ತಿ ದಾಖಲೀಕರಣ ಮತ್ತು ಗಣಕೀಕರಣಗೊಳಿಸಿ

**ರಾಮನಗರ:** ರಾಮನಗರ ಜಿಲ್ಲಾ ವ್ಯಾಪ್ತಿಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಖಾತೆ ಹೊಂದಿರುವ ಆಸ್ತಿಗಳನ್ನು ದಿನಾಂಕ: 02.05.2015 ರಿಂದ ಜಾರಿಗೆ ಬರುವಂತೆ, ನಾಗರೀಕರಿಗೆ ಕೈಬರಹದ ಸಹಿಯುಳ್ಳ ನಮೂನೆ-3ನ್ನು ನೀಡುತ್ತಿದ್ದನ್ನು ಸಂಪೂರ್ಣವಾಗಿ ನಿಷೇಧಿಸಿ, ಇ-ಆಸ್ತಿ ತಂತ್ರಾಂಶವನ್ನು ಅಭಿವೃದ್ಧಿ ಪಡಿಸಿ, ಡಿಜಿಟಲ್ ಸಹಿಯುಳ್ಳ ದಾಖಲೀಕರಣ ಮತ್ತು ಗಣಕೀಕರಣ ಕಾರ್ಯವನ್ನು ನಮೂನೆ-3ನ್ನು ದಿನಾಂಕ:20.04.2016 ರಿಂದ ಜಾರಿಗೆ ಬರುವಂತೆ ಸುತ್ತೋಲೆ ಹೊರಡಿಸಲಾಗಿರುತ್ತದೆ. ಆಸ್ತಿಯ ಮಾಲೀಕರು ತಮ್ಮ ಆಸ್ತಿಗೆ ಸಂಬಂಧಿಸಿದಂತೆ, ತೆರಿಗೆಯನ್ನು ಇನ್ನು ಮುಂದೆ ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ದತಿಯಡಿ ಆನ್‌ಲೈನ್ ಮುಖಾಂತರ ಲೆಕ್ಕಾಚಾರ ಮಾಡಿ ಚಲನ್ ಜನರೇಟ್ ಮಾಡಿ ಬ್ಯಾಂಕ್ ಕೌಂಟರ್/ಆನ್‌ಲೈನ್ ಪಾವತಿ (ಬಿಬಿಪಿಎಸ್) ಮುಖಾಂತರ ಆಸ್ತಿ ತೆರಿಗೆ ಅಥವಾ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದ ಎಲ್ಲಾ ರೀತಿಯ ತೆರಿಗೆಗಳನ್ನು ಪಾವತಿಸಲು ಸಾರ್ವಜನಿಕರಿಗೆ ಅವಕಾಶ ಕಲ್ಪಿಸಲಾಗಿದೆ. ಪೌರಾಡಳಿತ ನಿರ್ದೇಶನಾಲಯವು ಆಸ್ತಿಯ ಮಾಲೀಕರಿಗೆ ಸುಲಲಿತವಾಗಿ ಆಸ್ತಿಯ ನಮೂನೆ-03 ರ ನಕಲು ಪ್ರತಿಯನ್ನು ಪಡೆಯಲು 07 ದಿನಗಳು, ಆಸ್ತಿ ಹಕ್ಕು ವರ್ಗಾವಣೆ ಮಾಡಲು 45 ದಿನಗಳು, ಹೊಸದಾಗಿ ಆಸ್ತಿಗೆ ಪಿಐಡಿ ನೀಡಲು 07 ದಿನಗಳ ಕಾಲ ನಿಗದಿಪಡಿಸಿದೆ ಹಾಗೂ ನಿಗದಿಪಡಿಸಿದ ದಿನಾಂಕದೊಳಗೆ ವಿಳಂಬಕ್ಕೆ ಆಸ್ಪದ ನೀಡದೇ ಆಸ್ತಿಯ ಮಾಲೀಕರಿಗೆ ನಮೂನೆ-03 ನ್ನು ವಿತರಿಸಲು ಎಲ್ಲಾ ಸ್ಥಳೀಯ ಸಂಸ್ಥೆಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ.

## ಅಗ್ನಿವೀರ್‌ಗೆ ಅರ್ಜಿ ಆಹ್ವಾನ

**ಮಂಡ್ಯ:** ಭಾರತೀಯ ವಾಯುಪಡೆಯಿಂದ ಅಗ್ನಿಪತ್ ಯೋಜನೆ ಅಡಿಯಲ್ಲಿ ಅಗ್ನಿವೀರ್ ವಾಯು ಸೇನೆಗೆ ಆಯ್ಕೆ ಪರೀಕ್ಷೆಗಾಗಿ ಅವಿವಾಹಿತ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳಿಂದ ಆನ್ಲೈನ್ ಮುಖಾಂತರ ಅರ್ಜಿ ಆಹ್ವಾನಿಸಲಾಗಿದೆ. 17 ರಿಂದ 21 ವರ್ಷದೊಳಗಿನ ಆಸಕ್ತ ಅಭ್ಯರ್ಥಿಗಳು ಫೆಬ್ರವರಿ 6 ರವರೆಗೆ ಆನ್ಲೈನ್ ಮುಖಾಂತರ ಅರ್ಜಿ ಸಲ್ಲಿಸಬಹುದಾಗಿದೆ. ಪಿ.ಯು.ಸಿ (ಫಿಸಿಕ್ಸ್, ಮ್ಯಾಥಮೆಟಿಕ್ಸ್ ಮತ್ತು ಇಂಗ್ಲಿಷ್ ನಲ್ಲಿ ಶೇಕಡ 50ರಷ್ಟು ಅಂಕಗಳೊಂದಿಗೆ) ತೇರ್ಗಡೆ ಆಗಿರಬೇಕು ಅಥವಾ ಡಿಪ್ಲೋಮೋ (ಮೆಕಾನಿಕಲ್, ಎಲೆಕ್ಟ್ರಿಕಲ್, ಎಲೆಕ್ಟ್ರಾನಿಕ್ಸ್, ಆಟೋಮೊಬೈಲ್, ಕಂಪ್ಯೂಟರ್ ಸೈನ್ಸ್, ಇನ್ಸ್ಟ್ರುಮೆಂಟೇಶನ್ ಟೆಕ್ನಾಲಜಿ/ಇನ್ ಫಾರ್ ಮೇಷನ್ ಟೆಕ್ನಾಲಜಿ) ಯಲ್ಲಿ ಶೇಕಡ 50ರಷ್ಟು ಅಂಕಗಳೊಂದಿಗೆ ತೇರ್ಗಡೆ ಆಗಿರಬೇಕು. ಆನ್ ಲೈನ್ ನೋಂದಣಿಗಾಗಿ https://agnipathvayu.cdac.in ಅನ್ನು ವೀಕ್ಷಣೆ ಮಾಡಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂ. ಸಂ. 08232-295124, 9113875775 ಅನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಉದ್ಯೋಗ ವಿನಿಮಯ ಕಛೇರಿಯ ಉದ್ಯೋಗಾಧಿಕಾರಿಗಳು ತಿಳಿಸಿದ್ದಾರೆ.

## ಅರ್ಜಿ ಆಹ್ವಾನ

**ಮಂಡ್ಯ:** ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವತಿಯಿಂದ ಆಯೋಜಿಸಲಾಗಿರುವ 2023-24ನೇ ಸಾಲಿನ ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಪರಿಶಿಷ್ಟ ಪಂಗಡದಉಪಯೋಜನೆಯಡಿ 15 ರಿಂದ 29 ವರ್ಷದೊಳಗಿನ ಯುವಜನರಿಗೆ ಜಾನಪದ ಕಲಾ ಪ್ರಕಾರಗಳ 8 ದಿನಗಳ ತರಬೇತಿ ಶಿಬಿರವನ್ನು ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದೆ. ತರಬೇತಿ ಶಿಬಿರಕ್ಕೆ ಹಾಜರಾಗುವ ಯುವಜನರಿಗೆ ಊಟೋಪಹಾರ ಹಾಗೂ ಪ್ರಯಾಣಭತ್ಯೆ ನೀಡಲಾಗುವುದು. ಆಸಕ್ತ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ 15 ರಿಂದ 29 ವರ್ಷದೊಳಗಿನ ಯುವಕ/ಯುವತಿಯರು ತಮ್ಮ ಸ್ವವಿವರಗಳನ್ನೊಳಗೊಂಡ ಅರ್ಜಿಗಳನ್ನು ಮಂಡ್ಯ ಸಹಾಯಕ ನಿರ್ದೇಶಕರ ಕಛೇರಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಸರ್.ಎಂ. ವಿಶ್ವೇಶ್ವರಯ್ಯ ಒಳಾಂಗಣ ಕ್ರೀಡಾಂಗಣ ಕಛೇರಿಗೆ ಜನವರಿ 23 ರೊಳಗೆ ಸಲ್ಲಿಸುವುದು. ನಂತರ ಬರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಕಛೇರಿ ದೂ. ಸಂ: 08232-224725ರ ಮೂಲಕ ಅಥವಾ ಕಛೇರಿ ವೇಳೆಯಲ್ಲಿ ಖುದ್ದಾಗಿ ಸಂಪರ್ಕಿಸಬಹುದು.

## ಫೆ.16ರಂದು ರಾಜ್ಯ ವಿಧಾನ ಪರಿಷತ್ ಸ್ಥಾನಕ್ಕೆ ಉಪ ಚುನಾವಣೆ

**ರಾಮನಗರ:** ರಾಜ್ಯ ವಿಧಾನ ಪರಿಷತ್ತಿಗೆ ಬೆಂಗಳೂರು ಶಿಕ್ಷಕರ ಕ್ಷೇತ್ರದ ಪ್ರತಿನಿಧಿಯಾಗಿದ್ದ ಪುಟ್ಟಣ್ಣ ಅವರ ರಾಜೀನಾಮೆಯಿಂದ ತೆರವಾದ ಕ್ಷೇತ್ರಕ್ಕೆ ಕೇಂದ್ರ ಚುನಾವಣಾ ಆಯೋಗವು ಉಪ ಚುನಾವಣೆಗೆ ಅಧಿಸೂಚನೆ ಹೊರಡಿಸಿದೆ. ಮಾದರಿ ನೀತಿ ಸಂಹಿತೆ ಇದೇ ಜ. 16 ರಿಂದ ಜಾರಿಗೊಂಡಿದ್ದು, 2024ರ ಜ. 23ರಂದು ಚುನಾವಣಾ ಅಧಿಸೂಚನೆ ಪ್ರಕಟವಾಗಲಿದೆ. ಜ. 30ಕ್ಕೆ ನಾಮಪತ್ರ ಸಲ್ಲಿಕೆಗೆ ಅಂತಿಮ ದಿನ. ಜ. 31 ನಾಮಪತ್ರಗಳ ಪರಿಶೀಲನೆ, 2024ರ ಫೆಬ್ರವರಿ 2ರಂದು ನಾಮಪತ್ರಗಳ ಹಿಂತೆಗೆದುಕೊಳ್ಳಲು ಕೊನೆಯ ದಿನವಾಗಿದೆ. ಫೆ. 16ರ ಬೆಳಿಗ್ಗೆ 8 ರಿಂದ ಸಂಜೆ 4 ರವರೆಗೆ ಚುನಾವಣಾ ಮತದಾನ ನಡೆಯಲಿದೆ. ಫೆ. 20ರಂದು ಮತ ಎಣಿಕೆ ನಡೆಯಲಿದೆ. ಫೆ. 23ಕ್ಕೆ ಚುನಾವಣಾ ಪ್ರಕ್ರಿಯೆ ಪೂರ್ಣಗೊಳ್ಳಲಿದೆ ಜಿಲ್ಲಾ ಚುನಾವಣಾಧಿಕಾರಿಗಳೂ ಆಗಿರುವ ಜಿಲ್ಲಾಧಿಕಾರಿ ಡಾ. ಅವಿನಾಶ್ ಮೆನನ್ ರಾಜೇಂದ್ರನ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಜನತಾ ದರ್ಶನ ಮುಂದೂಡಿಕೆ

**ರಾಮನಗರ:** ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಮಾಗಡಿ ತಾಲ್ಲೂಕಿನ ಡಾ. ಶ್ರೀ ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳ ಸಭಾಂಗಣದಲ್ಲಿ ಜ. 31ರಂದು ಬೆಳಿಗ್ಗೆ 10 ಗಂಟೆಗೆ ಹಮ್ಮಿಕೊಳ್ಳಲಾಗಿದ್ದ ಜನತಾ ದರ್ಶನ ಕಾರ್ಯಕ್ರಮವನ್ನು ಮುಂದೂಡಲಾಗಿದೆ, ಮುಂದಿನ ದಿನಾಂಕ ತಿಳಿಸಲಾಗುವುದು ಎಂದು ಜಿಲ್ಲಾಧಿಕಾರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.

### ರೋಟರಿ ಶಾಲೆಯ ಇಂದಿರಾ ಕ್ಯಾಂಟೀನ್ ನಿರ್ಮಾಣ ಮಾಡಲು ವಿರೋಧ

# ಮಕ್ಕಳ ಆಕ್ರೋಶಕ್ಕೆ ವಾಪಸ್ಸಾದ ಪುರಸಭೆ ಅಧಿಕಾರಿಗಳು

**ವಿಜಯಪುರ:** ಪಟ್ಟಣದ ಪುರಸಭೆ ಪಕ್ಕದಲ್ಲಿರುವ ರೋಟರಿ ಶಾಲೆಯ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಪುರಸಭೆಯಿಂದ ಬಿಟ್ಟುಕೊಟ್ಟಿದ್ದ 0-11 ಗುಂಟೆ ಪುರಸಭೆಯ ಜಾಗದಲ್ಲಿ, ಇಂದಿರಾ ಕ್ಯಾಂಟೀನ್ ನಿರ್ಮಾಣ ಮಾಡಲು ಸಿದ್ಧತೆಗಳು ಮಾಡಿಕೊಂಡಿರುವ ಹಿನ್ನೆಲೆಯಲ್ಲಿ ರೋಟರಿ ಶಾಲೆಯ ಸಿಬ್ಬಂದಿ ಹಾಗೂ ಆಡಳಿತ ಮಂಡಳಿಯವರು ಮತ್ತು ಮಕ್ಕಳು ತೀವ್ರ ಆಕ್ರೋಶ ವ್ಯಕ್ತಪಡಿಸಿದ ನಂತರ ಬಂದ ಜೆ.ಸಿ.ಬಿಯೊಂದಿಗೆ ವಾಪಸ್ ತೆರಳಿದರು.

ಈ ಕುರಿತು ರೋಟರಿ ಸಂಸ್ಥೆಯ ಅಧ್ಯಕ್ಷ ಸಿ.ಬಸಪ್ಪ ಅವರು ಮಾತನಾಡಿ, 1983 ರಲ್ಲಿ ಪುರಸಭೆಯಲ್ಲಿ ನಡೆದಿರುವ ಸಾಮಾನ್ಯ ಸಭೆಯಲ್ಲಿ 13 ಮಂದಿ ಸದಸ್ಯರ ಸಮ್ಮುಖದಲ್ಲಿ ಸಭೆಯಲ್ಲಿ ತೀರ್ಮಾನಿಸಿ, ರೋಟರಿ ಶಾಲೆಯ ಮಕ್ಕಳು ಆಟವಾಡಲು ಬಿಟ್ಟುಕೊಟ್ಟಿದ್ದಾರೆ.

41 ವರ್ಷಗಳಿಂದ ನಾವು ಈ ಜಾಗವನ್ನು ಉಪಯೋಗ ಮಾಡಿಕೊಳ್ಳುತ್ತಿದ್ದೇವೆ. ಶಾಲಾ ವಿದ್ಯಾರ್ಥಿಗಳು ಬೆಳಗಿನ ಸಮಯದಲ್ಲಿ ಸಾಮೂಹಿಕ ಪ್ರಾರ್ಥನೆ ಮಾಡಲು, ಆಟವಾಡಲು, ಹಾಗೂ ಯೋಗಾಭ್ಯಾಸ ಮಾಡಲು ಬಳಕೆ ಮಾಡಿಕೊಳ್ಳುತ್ತಿದ್ದೇವೆ. ನಮಗೆ ಈ ಜಾಗವನ್ನು ಹೊರತುಪಡಿಸಿ, ಬೇರೆ ಜಾಗವಿಲ್ಲ. ಶಾಲೆಯ ವಿದ್ಯಾರ್ಥಿಗಳು ಶಾಲೆಯ ಒಳಗೆ ಬಂದು ಹೋಗುವುದಕ್ಕೆ ಬೇರೆ ದಾರಿಯಿಲ್ಲ. ಪುರಸಭೆಯವರು ಉದ್ದೇಶ ಪೂರ್ವಕವಾಗಿ ರೋಟರಿ ಶಾಲೆಯನ್ನು ಗುರಿ ಮಾಡಿಕೊಂಡು ಏಕಾಏಕಿ ಬಂದು ಇಂದಿರಾ ಕ್ಯಾಂಟೀನ್ ನಿರ್ಮಾಣ ಮಾಡಲು ಜಾಗಕ್ಕೆ ಗುರ್ತು ಮಾಡಿದ್ದಾರೆ. ಇಲ್ಲಿ ಇಂದಿರಾ ಕ್ಯಾಂಟೀನ್ ಮಾಡಿದರೆ ವಿದ್ಯಾರ್ಥಿಗಳ ಕಲಿಕೆಗೆ ತೊಡಕಾಗುತ್ತದೆ. ವಿದ್ಯಾರ್ಥಿಗಳ ಆರೋಗ್ಯದ ದೃಷ್ಟಿಯಿಂದ ಹಾಗೂ ಅವರ ರಕ್ಷಣೆಯ ದೃಷ್ಟಿಯಿಂದ ಇಲ್ಲಿ ಇಂದಿರಾ ಕ್ಯಾಂಟೀನ್ ಮಾಡಬಾರದು. ಪುರಸಭೆಗೆ ಸೇರಿದ ಸಾಕಷ್ಟು ಜಾಗಗಳಿವೆ. ಬೇರೆ ಕಡೆಗೆ ಇದನ್ನು ಸ್ಥಳಾಂತರ ಮಾಡಲಿ, ವಿದ್ಯಾರ್ಥಿಗಳಿಗೆ ತೊಂದರೆ ಕೊಡಬಾರದು ಎಂದರು.

ನಾವು ಹಲವಾರು ಬಾರಿ ಈ ಜಾಗವನ್ನು ಶಾಲೆಯ ಹೆಸರಿಗೆ ದಾಖಲೆ ಮಾಡಿಕೊಡಿ ಎಂದು ಮನವಿಗಳನ್ನೂ ಸಲ್ಲಿಸಿದ್ದೇವೆ. ಇದುವರೆಗೂ ಮಂಜೂರು ಮಾಡಿಕೊಟ್ಟಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಕಣ್ಣೀರಿಟ್ಟ ವಿದ್ಯಾರ್ಥಿನಿಯರು: ಪ್ರತಿಯೊಬ್ಬ ವಿದ್ಯಾರ್ಥಿಗೆ ಪಠ್ಯ ಚಟುವಟಿಕೆಗಳು ಎಷ್ಟು ಮುಖ್ಯವೋ, ಪಠ್ಯೇತರ ಚಟುವಟಿಕೆಗಳು ಸಹಾ ಅಷ್ಟೇ ಮುಖ್ಯವಾಗುತ್ತದೆ. ನಾವು ಆಟವಾಡುವುದಕ್ಕೆ ಜಾಗವಿಲ್ಲ. ಇಂದಿರಾ ಕ್ಯಾಂಟೀನ್ ಮಾಡಿದರೆ, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲಿಗೆ ಬರುತ್ತಾರೆ. ನಮಗೆ ತೊಂದರೆಯಾಗುತ್ತದೆ. ನಾವು ಇಲ್ಲೆ ಹುಟ್ಟಿ ಬೆಳೆಯುತ್ತಿದ್ದೇವೆ. ನಮ್ಮ ಭವಿಷ್ಯಕ್ಕೆ ಕಲ್ಲು ಹಾಕಬೇಡಿ. ಈ ಜಾಗವನ್ನು ನಮಗೆ ಬಿಟ್ಟುಕೊಟ್ಟು, ಇಂದಿರಾ ಕ್ಯಾಂಟಿನ್ ಬೇರೆ ಕಡೆ ಮಾಡಿಕೊಳ್ಳಿ ಎಂದು ವಿದ್ಯಾರ್ಥಿನಿಯರು ಕಣ್ಣೀರು ಹಾಕಿ ಮನವಿ ಮಾಡಿದರು.



ರೋಟರಿ ಮಾಜಿ ಅಧ್ಯಕ್ಷ ಪಿ.ಚಂದ್ರಪ್ಪರವರು ಮಾತನಾಡಿ, ಕೆಲವೇ ಬೆರಳೆಣಿಕೆ ಪುರಸಭಾ ಸದಸ್ಯರು ದುರುದ್ದೇಶದಿಂದ ಕಳೆದ 5 ದಶಕಗಳಿಂದ ಸಾರ್ವಜನಿಕ ಸೇವೆಯಲ್ಲಿ ಅಗ್ರಗಣ್ಯವೆನಿಸಿಕೊಂಡಿರುವ ರೋಟರಿ ಸಂಸ್ಥೆಯ ಹೆಸರನ್ನು ಹಾಳು ಮಾಡಲು ಈ ರೀತಿ ಮಾಡುತ್ತಿದ್ದು, ಇದು ಒಳ್ಳೆಯ ಕ್ರಮವಲ್ಲವೆಂದು, ತಿಳಿಸಿದರು.

ರೋಟರಿ ಎಜುಕೇಷನ್ ಸೊಸೈಟಿಯ ಕಾರ್ಯದರ್ಶಿ ಸಿದ್ದರಾಜುರವರು ಮಾತನಾಡಿ, ರೋಟರಿ ಸಂಸ್ಥೆ ಹಾಗೂ ಶಾಲೆಯು ಯಾವುದೇ ಆದಾಯದ ಮೂಲವಾಗಿರದೇ, ಕೇವಲ ಸೇವಾ ಗುರಿ ಹೊಂದಿದ್ದು, ಈಗಾಗಲೇ 200 ಕ್ಕೂ ಹೆಚ್ಚು ಉಚಿತ ನೇತ್ರ ತಪಾಸಣಾ ಶಿಬಿರಗಳನ್ನು ನಡೆಸಿ, 2000 ಕ್ಕೂ ಹೆಚ್ಚು ಮಂದಿಗೆ ಉಚಿತ ಕ್ಯಾಟ್‌ರ್ಯಾಕ್ಟ್ ಶಸ್ತ್ರಚಿಕಿತ್ಸೆ ನಡೆಸುವುದರೊಂದಿಗೆ ಹತ್ತು-ಹಲವು ಉಚಿತ ಆರೋಗ್ಯ ತಪಾಸಣಾ ಶಿಬಿರಗಳನ್ನು ನಡೆಸಿ, ಉಚಿತವಾಗಿ ಔಷಧೋಪಚಾರ ನಡೆಸಿಕೊಂಡು ಬಂದಿರುವುದಲ್ಲದೇ, ರೋಟರಿ ಶಾಲೆಯಲ್ಲಿ ಓದುತ್ತಿರುವ ಮಕ್ಕಳಿಗೆ ಅತಿ ಕಡಿಮೆ ವೆಚ್ಚದಲ್ಲಿ ಶಿಕ್ಷಣ ನೀಡುವುದರೊಂದಿಗೆ ಬಹಳಷ್ಟು ಬಡ ಮಕ್ಕಳಿಗೆ ಉಚಿತ ಸಮವಸ್ತ್ರ, ಉಚಿತ ಪಠ್ಯಪುಸ್ತಕಗಳನ್ನು ನೀಡುವುದರೊಂದಿಗೆ ಸರಕಾರಿ ಶಾಲೆಗಳಲ್ಲಿ ಡೆಸ್ಕ್ ಮೊದಲಾಗಿ ಪೀಠೋಪಕರಣಗಳನ್ನು ಒದಗಿಸುತ್ತಾ, ಸ್ವಚ್ಛತೆಯ ಕಾರಣಕ್ಕೆ ಅಂತರರಾಷ್ಟ್ರೀಯ ರೋಟರಿ ಸಂಸ್ಥೆಯ ಸಹಕಾರದೊಂದಿಗೆ ಲಕ್ಷಾಂತರ ರೂಗಳ ವೆಚ್ಚದಲ್ಲಿ ಆಧುನಿಕ ಶೌಚಾಲಯಗಳ ನಿರ್ಮಾಣ ಮಾಡಿರುವ ಸಂಸ್ಥೆಯ ಮೇಲೆ ಪುರಸಭೆಯಿಂದ ನಡೆಯುತ್ತಿರುವ ಈ ದಬ್ಬಾಳಿಕೆ ಸರಿಯಲ್ಲವೆಂದು, ತಿಳಿಸಿದರು.

ರೋಟರಿ ಸಂಸ್ಥೆಯ ಅಧ್ಯಕ್ಷ ಸಿ.ಬಸಪ್ಪ, ಮುಖ್ಯಶಿಕ್ಷಕಿ ಮಂಜುಳಾ, ಸಿದ್ದರಾಜು, ಚಂದ್ರಪ್ಪ, ಸುರೇಶ್, ನರಸಿಂಹಕುಮಾರ್, ಕಲಾವತಿ ಬಿ.ರಿತಿ, ನವೀನ್, ಪುಟ್ಟರಾಜು. ಎನ್, ಸಾಮಾಜಿಕ ಕಾರ್ಯಕರ್ತ ಸೂರ್ಯಪ್ರಕಾಶ್ ಮುಂತಾದವರು ಇದ್ದರು. ಪುರಸಭೆ ಮುಖ್ಯಾಧಿಕಾರಿ ಸಂತೋಷ್ .ಜಿ.ಆರ್ ಮಾತನಾಡಿ, ಪುರಸಭೆಯ ಜಾಗವನ್ನು ಶಾಲಾ ವಿದ್ಯಾರ್ಥಿಗಳಿಗೆ ಆಟವಾಡಲು ಉಪಯೋಗವಾಗುವಂತೆ 1983 ರಲ್ಲಿ ನಿಗಾವಣೆ ಮಾಡಲು ರೋಟರಿಯವರಿಗೆ ಬಿಟ್ಟುಕೊಟ್ಟಿದ್ದಾರೆ. ಆದರೆ, ಈ ಜಾಗ ಅವರಿಗೆ ಮಂಜೂರಾಗಿಲ್ಲ. ಪುರಸಭೆಯಲ್ಲಿ ತೀರ್ಮಾನ ಮಾಡಿರುವಂತೆ ಸಾರ್ವಜನಿಕರ ಉಪಯೋಗಕ್ಕಾಗಿ ಇಂದಿರಾ ಕ್ಯಾಂಟೀನ್ ನಿರ್ಮಾಣ ಮಾಡಲಾಗುತ್ತಿದೆ. ಈ ಸ್ವತ್ತು ಪುರಸಭೆಗೆ ಸೇರಿದ್ದು, ವಿದ್ಯಾರ್ಥಿಗಳು ಓಡಾಡುವುದಕ್ಕೆ ಅಗತ್ಯವಿರುವಷ್ಟು ಜಾಗವನ್ನು ನಾವು ಬಿಟ್ಟಿದ್ದೇವೆ ಎಂದರು.

ದೂರು ಸಲ್ಲಿಕೆ: ಪುರಸಭೆ ಅಧಿಕಾರಿಗಳು ಏಕಾಏಕಿ ಬಂದು, ನಾವು ಶಾಲಾ ವಿದ್ಯಾರ್ಥಿಗಳಿಗಾಗಿ ಬಳಕೆ ಮಾಡಿಕೊಳ್ಳುತ್ತಿದ್ದ ಜಾಗದಲ್ಲಿ ಇಂದಿರಾ ಕ್ಯಾಂಟೀನ್ ನಿರ್ಮಾಣ ಮಾಡಲು ಸಿದ್ಧತೆ ನಡೆಸಿದ್ದಾರೆ. ಆದ್ದರಿಂದ ನಿರ್ಮಾಣ ಕಾರ್ಯವನ್ನು ತಡೆದು, ಶಾಲಾ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಬೇಕು ಎಂದು ರೋಟರಿ ಸಂಸ್ಥೆಯವರು ಪುರಸಭೆ ಅಧಿಕಾರಿಗಳ ವಿರುದ್ಧ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಪುರಸಭೆ ಕಂದಾಯ ಅಧಿಕಾರಿ ಚಂದ್ರು, ಕಂದಾಯ ನಿರೀಕ್ಷಕ ತ್ಯಾಗರಾಜ್, ಪರಿಸರ ಎಂಜಿನಿಯರ್ ಶೇಖರ್, ಎಂಜಿನಿಯರ್ ವೆಂಕಟೇಶ್, ಇದ್ದರು.

**ಮುಖ್ಯಮಂತ್ರಿ ಹೆಗಡೆಯಿಂದ ಮೆಚ್ಚುಗೆ**

**ಮಾಜಿ ರೋಟರಿ ಅಧ್ಯಕ್ಷ ದಾಖಲೆಯ ರಕ್ತದಾನ ಮಾಡಿ, ಹೆಸರು ಮಾಡಿರುವ ವಿ.ಎನ್.ಸೂರ್ಯಪ್ರಕಾಶ್‌ರವರು ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆರವರು ವಿಜಯಪುರಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಸಾರ್ವಜನಿಕ ಸಭೆಯಲ್ಲಿ ವಿಜಯಪುರ ಪಟ್ಟಣದಲ್ಲಿ ಉತ್ತಮ ಶಿಕ್ಷಣಕ್ಕೆ ಹೆಸರುವಾಸಿಯಾದ ರೋಟರಿ ಸಂಸ್ಥೆಯವರು ನನ್ನನ್ನು ಬಂದು ಕಂಡಲ್ಲಿ ತಾಂತ್ರಿಕ ಶಿಕ್ಷಣ ಕಾಲೇಜನ್ನು ನೀಡುವುದಾಗಿ, ಸರಕಾರಿ ಶಾಲೆಗಳು ಸರಿಯಾಗಿ ನಡೆಯುವುದಿಲ್ಲವೆಂದು, ಉತ್ತಮವಾಗಿ ನಡೆಯುತ್ತಿದ್ದ ರೋಟರಿ ಶಾಲೆಯ ಬಗ್ಗೆ ಮೆಚ್ಚುಗೆ ವ್ಯಕ್ತ ಪಡಿಸಿದ್ದುದನ್ನು ನೆನಪಿಸಿಕೊಂಡರು.**

# ಅಧಿಕಾರಿಗಳಿಗೆ ವಾರ್ನಿಂಗ್

## ದರ್ಪ ತೋರದಿರಿ ಎಂದ ಕೊತ್ತೂರು ಮಂಜುನಾಥ್

**ಕೋಲಾರ :** ಆಫೀಸರ್ಸ್‌ಗಳಿಗೆ ಬಹಳ ಗೌರವ ಕೊಟ್ಟು ಅಣ್ಣ ತಮ್ಮ ಭಾವನೆಯಿಂದ ತಾಳ್ಮೆಯಲ್ಲಿ ಮಾತನಾಡುತ್ತೇವೆ. ಅದನ್ನೇ ಮಿಸ್ಯೂಜ್‌ಮಾಡಿಕೊಂಡು ದರ್ಪ ಮಾಡಿದರೆ ಉಲ್ಟಾ ಮಾಡೋದು ಗೊತ್ತು ಎಂದು ಶಾಸಕ ಕೊತ್ತೂರು ಮಂಜುನಾಥ್ ಅವರು ಅಧಿಕಾರಿಗಳಿಗೆ ವಾರ್ನಿಂಗ್ ನೀಡಿದರು.

ತಾಲೂಕು ವ್ಯಾಪ್ತಿಯ ನರಸಾಪುರದ ಕಾಫಿ ಡೇ ಹಿಂಬಾಗದಲ್ಲಿ ಬುಧವಾರ ಬೆಳ್ಳಿಗೆ ಸುಮಾರು 12 ಕೋಟಿ ವೆಚ್ಚದ ನರಸಾಪುರ ಸಮುದಾಯ ಆರೋಗ್ಯ ಕೇಂದ್ರದ ನೂತನ ಕಟ್ಟಡದ ನಿರ್ಮಾಣ ಕಾಮಗಾರಿಗೆ ಶಂಕುಸ್ಥಾಪನೆಯನ್ನು ನೆರವೇರಿಸಿ ಮಾತನಾಡಿ ಈ ಆಸ್ಪತ್ರೆ ನರಸಾಪುರ ಜನಸಾಮಾನ್ಯರಿಗೆ ಮಾತ್ರವಲ್ಲದೆ ಕೋಲಾರ ಬೆಂಗಳೂರು ಬೈಪಾಸ್ ರಸ್ತೆಯ ಈ ವ್ಯಾಪ್ತಿಯಲ್ಲಿ ಅಪಘಾತಗಳದಾಗ ಕೂಡಲೇ ಅವರಿಗೆ ತುರ್ತು ಚಿಕಿತ್ಸೆ ನೀಡಲು ಅನುಕೂಲ ಆಗುತ್ತದೆ. ಈ ಆಸ್ಪತ್ರೆ ಮಾಜಿ ಶಾಸಕ ಕೆ ಶ್ರೀನಿವಾಸಗೌಡ ಅವರ ಅವಧಿಯಲ್ಲೇ ಆಗಿತ್ತು. ಆದರೆ ಜಾಗದ ಸಮಸ್ಯೆಯಿಂದ ಆಸ್ಪತ್ರೆ ನಿರ್ಮಾಣ ಕಾಮಗಾರಿ ವಿಳಂಬ ಆಗಿತ್ತು.

ಈ ಜನವರಿಯಿಂದ ಮುಂದಿನ ಜನವರಿ ಅವಧಿಗೆ ಈ ಕಾಮಗಾರಿ ಪೂರ್ಣ ಮಾಡಬೇಕೆಂದು ತಿಳಿಸಿದ್ದೇನೆ. ತುರ್ತು ಸೇವೆಗೆ ಇನ್ನಷ್ಟು ಕಾಮಗಾರಿ ಪ್ರಸ್ತಾವನೆ ಜಿಲ್ಲಾ ಮತ್ತು ತಾಲೂಕು ಆರೋಗ್ಯ ಅಧಿಕಾರಿಗಳು ತಿಳಿಸಿದ್ದಾರೆ. ಇದು ನಮ್ಮದೇ ಸರ್ಕಾರ ಖಂಡಿತವಾಗಿ ಸಚಿವ ದಿನೇಶ್ ಗುಂಡೂರಾವ್ ಬಳಿ ಮಾತನಾಡಿ ಮನವಿ ಮಾಡುತ್ತೇನೇ. ಜೊತೆಗೆ ಕಂಪೌಂಡ್, ಡ್ರೈನೇಜ್ ಬೇಕಾಗಿದೆ ಅದಕ್ಕೆ ನನ್ನ ಅನುದಾನದಲ್ಲಿ ಹಣಕಾಸು ನೀಡಿ ಮೇಲೆ ಬಿದ್ದ ನೀರು ಕೆರೆಗೆ ಹೋಗುವ ರೀತಿ ಮಾಡೋಣ. ಈಗಾಗಲೇ ರಸ್ತೆ ಒತ್ತುವರಿ ತೆರವು ಮಾಡಿದ್ದಾರೆ. ಡಬ್ಬಲ್ ರೋಡ್ ಮಾಡುತ್ತೇವೆ ಎಂದರು.



ಇನ್ನು ಕಾರ್ಯಕ್ರಮಕ್ಕೆ ತಡವಾಗಿ ಬಂದ ನರಸಾಪುರ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೆ ವಾರ್ನಿಂಗ್ ನೀಡುತ್ತಾ ನಾನು ಆಫೀಸರ್ ಗಳಲ್ಲಿ ಮನವಿ ಮಾಡುವುದಿಷ್ಟೇ ನಾನು ಗೌರವಕೊಟ್ಟು ಮಾತನಾಡುತ್ತೇನೆ. ಪಂಚಾಯಿತಿ ಎಂದ ಮೇಲೆ ಯಾರೋ ಒಬ್ಬರು ಬರುತ್ತಾರೆ ಕೆಲಸ ಮಾಡುತ್ತಾರೆ. ನೀವಿಲ್ಲದಿದ್ದರೆ ಇನ್ನೊಬ್ಬರು ಬರುತ್ತಾರೆ. ನಾನು ಎಲ್ಲರಿಗೂ ಫೋನ್ ಮಾಡಿ ಖಾತೆಗೆಷ್ಟು, ಎನ್ ಮಾಡಿದ್ದಿಯ, ಎಷ್ಟ್ ತಗೊಂಡಿದ್ದೀಯ ಅಂತ ಕೇಳೋನಲ್ಲ. ನ್ಯಾಯಯುತವಾಗಿ ಜನಸಾಮಾನ್ಯರಿಗೆ, ರೈತರಿಗೆ, ಸಾರ್ವಜನಿಕರಿಗೆ ಕೆಲಸ ಮಾಡದೇ ಇದ್ದಾಗ ನಮ್ಮ ಕೆಲಸ ಮಾಡೋದು ನಮಗೆ ಗೊತ್ತಿದೆ. ಮಾಡೇ ಮಾಡ್ತೀವಿ.

ನಮಗೆ ಲೀಗಲ್ಲು ಗೊತ್ತಿದೆ. ಇಲ್ಲೀಗಲ್ಲು ಗೊತ್ತಿದೆ. ಲೀಗಲ್ ಗಿಂತ ಇಲ್ಲೀಗಲ್ ಜಾಸ್ತಿ ಗೊತ್ತಿದೆ ಅದನ್ನು ಮಾಡಿ ತೋರಿಸ್ತೀವಿ. ಬೆಳಿಗ್ಗೆ ಎದ್ದಾಗಿನಿಂದ ಜನಸಾಮಾನ್ಯರ ಬಳಿ ಮಾತನಾಡುತ್ತೇವೆ. ಕೆಲವೊಮ್ಮೆ ರಾತ್ರಿ ಒಂದು ಎರಡು ಘಂಟೆಯಲ್ಲಿ ಕರೆಮಾಡಿ ಸಮಸ್ಯೆಗಳು ಹೇಳುತ್ತಾರೆ. ರಾಜಕಾರಣಿಗಳು ಹಗಲು ರಾತ್ರಿಯೆನ್ನದೆ ಸೇವೆ ಮಾಡಬೇಕು. ಅಧಿಕಾರಿಗಳು 10 ರಿಂದ 5ರ ತನಕ ಮಾತ್ರ. ಆನಂತರ ಭೀಗ ಹಾಕಿ ಮನೆಗೆ ಹೋಗೀಆರಾಮಾಗಿ ಇರ್ತೀರಾ. 24 ಘಂಟೆಗಳ ಕಾಲ ಕೆಲಸ ಮಾಡೋರು ನಾವು. ನಾವು ಸಮಾಧಾನವಾಗಿ ಇರುವಷ್ಟು ದಿನ ಇರುತ್ತೇವೆ. ಆ ನಂತರ ನಮ್ಮ ತಾಳ್ಮೆ ನಾವು ಕಳೆದುಕೊಂಡರೆ ಬೇರೆ ಬೇರೆ ರೀತಿಯಾಗುತ್ತದೆ ಎಂದರು. ವಿಧಾನ ಪರಿಷತ್ ಸದಸ್ಯ ಅನಿಲ್ ಕುಮಾರ್ ,ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಜಗದೀಶ್, ತಾಲೂಕು ಆರೋಗ್ಯ ಅಧಿಕಾರಿ ನಾರಾಯಣಸ್ವಾಮಿ, ಸೇರಿದಂತೆ ನರಸಾಪುರ ಗ್ರಾಮಸ್ಥರು ಕಾಂಗ್ರೆಸ್ ಮುಖಂಡರು ಇತರರು ಇದ್ದರು.

# ಬೆಗ್ಲಿಹೊಸಹಳ್ಳಿಯಲ್ಲಿ ಎಂಎಸ್‌ಐಎಲ್ ಮಳಿಗೆ ಪ್ರಾರಂಭಿಸದಂತೆ ಪ್ರತಿಭಟನೆ

**ಕೋಲಾರ:** ತಾಲ್ಲೂಕಿನ ಬೆಗ್ಲಿ ಹೊಸಹಳ್ಳಿ ಗ್ರಾಮಪಂಚಾಯತಿ ವ್ಯಾಪ್ತಿಯ ಬೆಗ್ಲಿಬೆಣಜೇನಹಳ್ಳಿ ಗ್ರಾಮದ ಬಳಿ ನೂತನವಾಗಿ ಪ್ರಾರಂಭವಾಗಿರುವ ಎಂಎಸ್‌ಐಎಲ್ ಮದ್ಯ ಮಾರಾಟದ ಮಳಿಗೆಯನ್ನು ರದ್ದು ಪಡಿಸುವಂತೆ ಒತ್ತಾಯಿಸಿ ಬುಧವಾರ ಬೆಗ್ಲಿಬೆಣಜೇನಹಳ್ಳಿ ಗ್ರಾಮಸ್ಥರು ಹಾಗೂ ದಲಿತ ಸಂಘಟನೆಗಳ ನೇತೃತ್ವದಲ್ಲಿ ಗ್ರಾಮದಿಂದ ಮೆರವಣಿಗೆ ಮೂಲಕ ಹೊರಟು ಮಳಿಗೆಯ ಮುಂದೆ ಪ್ರತಿಭಟನೆ ನಡೆಸಿದರು.

ನಂತರ ಕರ್ನಾಟಕ ದಲಿತ ಸಿಂಹ ಸೇನೆ ರಾಜ್ಯ ಅಧ್ಯಕ್ಷ ಹೂವಳ್ಳಿ ಪ್ರಕಾಶ್ ಮಾತನಾಡಿ ಈ ರಸ್ತೆಯಲ್ಲಿ ಒಖಐ ಪ್ರಾರಂಭ ಸೂಕ್ತವಲ್ಲ. ಸರ್ಕಾರಕ್ಕೂ ಇದು ಶೋಭೆ ತರುವುದಿಲ್ಲ. ಈ ರಸ್ತೆಯಲ್ಲಿ ಮಕ್ಕಳು, ವಿದ್ಯಾರ್ಥಿಗಳು ಮತ್ತು ಮಹಿಳೆಯರು ಸಂಚಾರ ಮಾಡುತ್ತಾರೆ. ಮುಂದಿನ ದಿನಗಳಲ್ಲಿ ಅವರಿಗೆ ರಕ್ಷಣೆ ಸಿಗುವುದಿಲ್ಲ. ಇಲ್ಲಿ ಅನುಮತಿ ನೀಡಿರುವುದೇ ಸರಿಯಲ್ಲ. ಜೊತೆಗೆ ಅವರಿಗೆ ಸರ್ಕಾರ ಸಾಥ್ ನೀಡುತ್ತಿರುವುದು ಬೇಸರ ತರುತ್ತಿದೆ. ಈ ಸರ್ಕಾರ ಯಾರ ಪರ ಕೆಲಸ ಮಾಡುತ್ತಿದೆ. ಈ ಭಾಗದ ಬಡವರಪರ ಕಾಳಜಿ ಯಾಕೆ ತೋರುತ್ತಿಲ್ಲ. ದೂರದ ನಗರದಿಂದ ಕುಡಿದು ಬರುವವರ ಸಂಖ್ಯೆ ಈಗಲೇ ಜಾಸ್ತಿಯಾಗದೆ. ಜೊತೆಗೆ ಹತ್ತಿರದಲ್ಲೇ ಬಾರ್ ತೆರೆದರೆ ಮಹಿಳೆಯರು ಮನೆಯಲ್ಲಿ ನೆಮ್ಮದಿ ಜೀವನ ನಡೆಸುವುದೇಗೆ ಎಂದರು.

ಈ ಸಂದರ್ಭದಲ್ಲಿ ಮಾತನಾಡಿದ ಭಾರತೀಯ ದಲಿತ ಸೇನೆ ರಾಜ್ಯ ಅಧ್ಯಕ್ಷ ದಲಿತ್ ನಾರಾಯಣಸ್ವಾಮಿ ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಸರ್ಕಾರವು ಪ್ರತಿ ಗ್ರಾಮ ಪಂಚಾಯಿತಿಗಳಲ್ಲಿ ಎಂಎಸ್‌ಐಎಲ್ ಮದ್ಯ ಮಾರಾಟ ಮಳಿಗೆಯನ್ನು ಪ್ರಾರಂಭ ಮಾಡಿ ಜನತೆಯನ್ನು ಕುಡುಕರನ್ನಾಗಿ ಮಾಡುತ್ತಿದೆಯೆಂದು ದೂರಿದರು.

ಮದ್ಯ ಮಾರಾಟ ಮಳಿಗೆ ಪ್ರಾರಂಭ ಮಾಡಿದಾಗಲೂ ಗಲಾಟೆ ಹಾಗೂ ಪ್ರತಿಭಟನೆ ಮಾಡಿ ಮುಚ್ಚಿಸಿದ್ದು ಮತ್ತೆ ಪ್ರಾರಂಭ ಮಾಡಿರುವುದು ಖಂಡನೀಯ, ಈ ರಸ್ತೆಯಲ್ಲಿ ಕೆಲಸಕ್ಕೆ ಹೋಗುವ ಹೆಣ್ಣುಮಕ್ಕಳು, ಗೃಹಣಿಯರು ಹಾಗೂ ವಿದ್ಯಾರ್ಥಿಗಳು ಸಂಚಾರ ಮಾಡುತ್ತಾರೆ ಈ ರಸ್ತೆಯಲ್ಲಿ ಮದ್ಯದ ಮಳಿಗೆ ಪ್ರಾರಂಭ ಮಾಡಿದರೆ ತೊಂದರೆ ಆಗುತ್ತದೆಯೆಂದು ಆರೋಪಿಸಿದರು.

ಸ್ಥಳಕ್ಕೆ ಆಗಮಿಸಿದ ತಹಶಿಲ್ದಾರ್ ಹರ್ಷವರ್ಧನ್ ಪ್ರತಿಭಟನೆಕಾರರಿಂದ ಮನವಿ ಪಡೆದು ಕಡತಗಳ ಪರಿಶೀಲನೆ ನಂತರಯಾರಿಗೂತೊಂದರೆಆಗದಂತೆ ಕ್ರಮಕ್ಕೈಗೊಳ್ಳಲಾಗುವುದೆಂದು ತಿಳಿಸಿದರು ಒಪ್ಪದ ಪ್ರತಿಭಟನಾಕಾರರು ಮಳಿಗೆ ಬಂದ್ ಮಾಡುವಂತೆ ಪಟ್ಟು ಹಿಡಿದರು ಸ್ಥಳದಲ್ಲಿಯೇ ಧರಣಿ ಕುಳಿತರು

ಈ ಸಂದರ್ಭದಲ್ಲಿ ಅಬಕಾರಿ ಡಿವೈಎಸ್ಪಿ.ಶ್ರೀಶೈಲ ಅವಜಿ ಹಾಗೂ ಎಂಎಸ್‌ಐಎಸ್ ಜಿಲ್ಲಾ ಅಧಿಕಾರಿ ಮಂಜುನಾಥ್ ಸ್ಥಳಕ್ಕೆ ಭೇಟಿ ನೀಡಿ ಪ್ರತಿಭಟನಾಕಾರರ ಅಹವಾಲು ಕೇಳಿಸಿಕೊಂಡು ಮಾತನಾಡಿ ಕಾನೂನು ಬದ್ದವಾಗಿ ಮದ್ಯ ಮಾರಾಟಕ್ಕೆ ಎಂಎಸ್‌ಐಎಲ್.ಗೆ ಪರವಾನಗಿ ನೀಡಿದ್ದು ಜನರ ವಿರೋಧದ ವರದಿಯನ್ನು ಉನ್ನತ ಅಧಿಕಾರಿಗಳ ಗಮನಕ್ಕೆ ತರುವುದಾಗಿ ಹೇಳಿದರು.

ಅಂಗಡಿ ಮಾಲೀಕರು ಇನ್ನು ಒಂದು ತಿಂಗಳ ಒಳಗೆ ರಸ್ತೆಯ ಬದಿಯಲ್ಲಿರುವ ಅಂಗಡಿಯನ್ನು ರಸ್ತೆಯಿಂದ ದೂರದಲ್ಲಿ ಕಟ್ಟಿ ಬದಲಿಸುವ ಭರವಸೆ ನೀಡಿರುವುದಾಗಿ ತಿಳಿಸಿದರು ಇದಕ್ಕೆ ಒಪ್ಪದ ಪ್ರತಿಭಟನೆಕಾರರು ಸ್ಥಳದಲ್ಲಿ ಪೆಂಡಾಲ್ ಹಾಕಿ ಧರಣಿ ಮುಂದುವರೆಸಿದ್ದು ಎಂಎಸ್‌ಐಎಲ್.ಮದ್ಯ ಮಾರಾಟ ಮಳಿಗೆಯನ್ನು ಮುಚ್ಚುವವರೆಗೆ ಹೋರಾಟ ಮುಂದುವರೆಸುವುದಾಗಿ ಪಟ್ಟು ಹಿಡಿದು ಧರಣಿ ಕುಳಿತಿದ್ದಾರೆ.

ಮತ್ತೊಂದು ತಂಡ ಸ್ಥಳದಲ್ಲಿಯೇ ಎಂಎಸ್‌ಐಎಲ್ ಮಳಿಗೆಯನ್ನು ಪ್ರಾರಂಭ ಮಾಡಬೇಕು ಎಂದು ಕೆಲವರು ಘೋಷಣೆಗಳನ್ನು ಕೂಗಿದರು ಸ್ಥಳದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಗ್ರಾಮಾಂತರ ವೃತ್ತ ನಿರೀಕ್ಷಕ ಲೋಕೇಶ್ ನೇತೃತ್ವದಲ್ಲಿ ಬಿಗಿ ಪೊಲೀಸ್ ವ್ಯವಸ್ಥೆ ಏರ್ಪಡಿಸಲಾಗಿತ್ತು,

ಪ್ರತಿಭಟನೆಯ ನೇತೃತ್ವವನ್ನು ಬೆಗ್ಲಿ ಹೊಸಹಳ್ಳಿ ಗ್ರಾಪಂ ಮಾಜಿ ಅಧ್ಯಕ್ಷ ಚರಣ್, ದಲಿತ ಸಂಘಟನೆಗಳ ಮುಖಂಡರಾದ ಯುವಶಕ್ತಿ ಸುಬ್ಬು ,ಮತ್ತಿಕುಂಟೆ ಕೃಷ್ಣ, ಹೂವಳ್ಳಿ ಪ್ರಕಾಶ್ ಎಂ.ಆರ್ ಚೇತನ್ ಬಾಬು ಸೇರಿದಂತೆ ಗ್ರಾಮ ಮಹಿಳೆಯರು ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ಪ್ರತಿಭಟನೆ ನೇತೃತ್ವವನ್ನು ವಹಿಸಿದ್ದರು.



## ಅಲೆಮಾರಿ / ಅರೆ ಅಲೆಮಾರಿ ಜನಾಂಗಗಳ ಅಭಿವೃದ್ಧಿಗೆ ಕ್ರಮವಹಿಸಿ

**ರಾಮನಗರ:** ಹಿಂದುಗಳಿದ ವರ್ಗಗಳ ಅಲೆಮಾರಿ/ಅರೆ ಅಲೆಮಾರಿ ಸಮುದಾಯದ ಅಭಿವೃದ್ಧಿಗೆ ಅಧಿಕಾರಿಗಳು ಶ್ರಮಿಸುವಂತೆ ಜಿಲ್ಲಾಧಿಕಾರಿ ಡಾ. ಅವಿನಾಶ್ ಮೆನನ್ ರಾಜೇಂದ್ರನ್ ಅವರು ತಿಳಿಸಿದರು. ಅವರು ಇಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಹಿಂದುಳಿದ ವರ್ಗಗಳ ಅಲೆಮಾರಿ/ಅರೆ ಅಲೆಮಾರಿ ಜಿಲ್ಲಾ ಮಟ್ಟದ ಸಲಹಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಹಿಂದುಳಿದ ವರ್ಗಗಳ ಅಲೆಮಾರಿ/ಅರೆ ಅಲೆಮಾರಿ ಜನಾಂಗಕ್ಕೆ ವಸತಿ, ಶಿಕ್ಷಣ, ನಿವೇಶನ, ವಿದ್ಯಾರ್ಥಿ ನಿಲಯ ಸೇರಿದಂತೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಅಧಿಕಾರಿಗಳು ಕಠಿಣ ಶ್ರಮ ವಹಿಸುವಂತೆ ತಿಳಿಸಿದರು. ಐಜೂರು ಗುಡ್ಡದ ನಿವಾಸಿಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸುವಂತೆ ನಗರಸಭೆ ಅಧಿಕಾರಿಗಳಿಗೆ ಸೂಚಿಸಿದರು. ಜಿಲ್ಲೆಯಲ್ಲಿರುವ ಅಲೆಮಾರಿ/ಅರೆ ಅಲೆಮಾರಿ ಜನಾಂಗದವರನ್ನು ಗುರುತಿಸಿ ಮಾಹಿತಿಯನ್ನು ಜಿಲ್ಲಾಧಿಕಾರಿಗಳ ಕಚೇರಿಗೆ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ದಿಗ್ವಿಜಯ್ ಬೋಡ್ಕೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಮೋಹನ್ ಕುಮಾರ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರಾದ ಪ್ರಸನ್ನ ಕುಮಾರ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮೀನಾರಾಯಣ್, ಅಲೆಮಾರಿ/ಅರೆ ಅಲೆಮಾರಿ ಬುಡಕಟ್ಟು ಸಮುದಾಯದ ಮುಖಂಡರುಗಳಾದ ರಂಗಪ್ಪ, ಬಿ. ರಂಗನಾಥಪ್ಪ, ಮಾರಪ್ಪ ಉಪಸ್ಥಿತರಿದ್ದರು.

# ವೈದ್ಯಕೀಯ ಕ್ಷೇತ್ರದಲ್ಲಿ ವಸ್ತುಪ್ರದರ್ಶನ ಅಗತ್ಯ: ಡಿಹೆಚ್‌ಓ

**ತುಮಕೂರು:** ಇತ್ತೀಚಿನ ದಿನಗಳಲ್ಲಿ ವೈದ್ಯಕೀಯ ಕ್ಷೇತ್ರದಲ್ಲಿ ಪ್ಯಾರಾಮೆಡಿಕಲ್ ಕೋರ್ಸ್‌ಗಳು ಹೆಚ್ಚಿನ ಅವಕಾಶಗಳು, ಬೇಡಿಕೆಯನ್ನು ಹೊಂದಿದ್ದು, ಪ್ಯಾರಾ ಮೆಡಿಕಲ್ ವ್ಯಾಸಂಗಕ್ಕೆ ಶ್ರೀದೇವಿ ವೈದ್ಯಕೀಯ ಕಾಲೇಜಿನ ಪ್ರಾಯೋಗಾಲಯಗಳು, ಆಸ್ಪತ್ರೆಯ ವಿವಿಧ ವಿಭಾಗಗಳನ್ನು ಬಳಸಿಕೊಳ್ಳಲಾಗುತ್ತಿದೆ. ವೈದ್ಯಕೀಯ ವಿಜ್ಞಾನ ವಸ್ತುಪ್ರದರ್ಶನವನ್ನು ಉದ್ಘಾಟಿಸುತ್ತಾ ಈ ತರಹದ ಪ್ರದರ್ಶನಗಳು ಅತಿ ಅವಶ್ಯಕವಾಗಿರುತ್ತದೆ. ಈ ವಸ್ತುಪ್ರದರ್ಶನದಲ್ಲಿ ವೈದ್ಯಕೀಯ ವಿಜ್ಞಾನದ ವಿವಿಧ ಪ್ರಾತ್ಯಕ್ಷಕತೆಗಳು ವೈಜ್ಞಾನಿಕ ಹಿನ್ನಲೆಯಿಂದ ತಯಾರಿಸಿರುವುದರಿಂದ ಸದರಿ ವಿದ್ಯಾರ್ಥಿಗಳ ಜ್ಞಾನರ್ಜನೆ ಮತ್ತು ತಾಂತ್ರಿಕತೆ ಹೊಂದಿರುತ್ತದೆ ಎಂದು ತುಮಕೂರಿನ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯಾದ ಡಾ.ಡಿ.ಎಸ್. ಮಂಜುನಾಥ್‌ರವರು ತಿಳಿಸಿದರು.

ನಗರದ ಶಿರಾರಸ್ತೆಯ ಶ್ರೀದೇವಿ ಪ್ಯಾರಾಮೆಡಿಕಲ್ ಕಾಲೇಜಿನ ಸಂಯುಕ್ತಾಶ್ರಯದಲ್ಲಿ ಜ.17 ರಂದು ಬುಧವಾರ ಬೆಳಿಗ್ಗೆ 11 ಗಂಟೆಗೆ ಶ್ರೀದೇವಿ ಮೆಡಿಕಲ್ ಕಾಲೇಜಿನಲ್ಲಿ ''ವೈದ್ಯಕೀಯ ವಿಜ್ಞಾನ ವಸ್ತುಪ್ರದರ್ಶನ''ವನ್ನು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಗೌರವ ಅತಿಥಿಗಳಾಗಿ ಶ್ರೀದೇವಿ ಮೆಡಿಕಲ್ ಕಾಲೇಜಿನ ವೈದ್ಯಕೀಯ ನಿರ್ದೇಶಕರಾದ ಡಾ.ರಮಣ್ ಎಂ ಹುಲಿನಾಯ್ಕರ್‌ರವರು ಮಾತನಾಡುತ್ತಾ ಇಂದಿನ ದಿನಗಳಲ್ಲಿ ವೈದ್ಯಕೀಯ ಕ್ಷೇತ್ರಕ್ಕೆ ಬಹಳ ಬೇಡಿಕೆಯಿದ್ದು, ವೈದ್ಯರಾಗುವ ಅಥವಾ ಅರೆ ವೈದ್ಯರಾಗುವ ಕನಸು ಕಾಣುತ್ತಿರುವ ಮಕ್ಕಳಿಗೆ ಈ ವಸ್ತು ಪ್ರದರ್ಶನವು ಬಹಳ ಉಪಯುಕ್ತರಾಗಿರುತ್ತದೆ. ಈ ಸಂಸ್ಥೆಯಲ್ಲಿ ಇತಂಹ ಮಕ್ಕಳು ವಿದ್ಯಾಭ್ಯಾಸ ಮಾಡಲು ಬಹಳ ಅನುಕೂಲತೆಗಳಿದ್ದು ಇದನ್ನು ವಿದ್ಯಾರ್ಥಿಗಳು ಸದುಪಯೋಗ ಪಡಿಸಿಕೊಳ್ಳಬೇಕೆಂದು. ಈ ವಸ್ತುಪ್ರದರ್ಶನದಲ್ಲಿ ಡಿಪ್ಲೋಮ ಮತ್ತು ಪದವಿ ವಿದ್ಯಾರ್ಥಿಗಳು ಸುಮಾರು 400 ಕ್ಕೂ ವೈದ್ಯಕೀಯ ವಿಜ್ಞಾನ ಪ್ರಾತ್ಯಕ್ಷಕತೆ ತಯಾರಿಸಿದ್ದು ಸುಮಾರು 4500 ಕ್ಕೂ ಹೆಚ್ಚು ವಿದ್ಯಾರ್ಥಿಗಳು



ಪ್ರಯೋಜನ ಪಡೆಯುವ ಸಂಭವವಿದೆ. ಈ ವಸ್ತು ಪ್ರದರ್ಶನವು ಜ.17, 18, 19 ರಂದು ಸುಮಾರು 3 ದಿನಗಳ ಕಾಲ ವಸ್ತುಪ್ರದರ್ಶನವು ಸಾರ್ವಜನಿಕರು, ಪೋಷಕರು, ವಿದ್ಯಾರ್ಥಿಗಳು ಸದುಪಯೋಗಪಡೆದುಕೊಳ್ಳಬೇಕು ಎಂದರು.

ಶ್ರೀದೇವಿ ಕಾಲೇಜಿನ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್.ಪಾಟೀಲ್‌ರವರು ಮಾತನಾಡುತ್ತಾ ಉತ್ತಮ ತಂತ್ರಜ್ಞರನ್ನು ಸಮಾಜಕ್ಕೆ ಕೊಡುಗೆ ನೀಡುವುದರಲ್ಲಿ ಶ್ರೀದೇವಿ ವೈದ್ಯಕೀಯ ಸಂಸ್ಥೆಯು ಹೆಚ್ಚು ಹೆಚ್ಚು ಅವಿಷ್ಕಾರಗಳನ್ನು ಹಮ್ಮಿಕೊಳ್ಳುತ್ತಾ ಬಂದಿದೆ. ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ಓದುತ್ತಿರುವ ಮಕ್ಕಳಿಗೆ ಮುಂದಿನ ತಮ್ಮ ವೈದ್ಯಕೀಯ ವೃತ್ತಿಕೋರ್ಸ್‌ಗಳನ್ನು ಆಯ್ಕೆ ಮಾಡಲು ಅನುಕೂಲವಾಗುತ್ತದೆ. ಉತ್ತಮ ಶಿಕ್ಷಣ ನೀಡುವುದರ ಜೊತೆಗೆ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ನೈಪುಣಿತೆಯನ್ನು ಪಡೆಯುವುದಕ್ಕಾಗಿ ವಿಶೇಷ ಸುಸುಜ್ಜಿತ ಪ್ರಾಯೋಗಾಲಯಗಳನ್ನು ರಚಿಸಲಾಗಿದೆ. ನಮ್ಮ ಸಂಸ್ಥೆಗಳಲ್ಲಿ ಭೌತಿಕ ವಿಚಾರದ ಜೊತೆಗೆ ಹೆಚ್ಚು ಹೆಚ್ಚು ಪ್ರಾಯೋಗಿಕ ತಂತ್ರಜ್ಞತೆಯನ್ನು ನೀಡಲಾಗುತ್ತದೆ ಎಂದು ತಿಳಿಸಿದರು.

ಶ್ರೀದೇವಿ ಆಸ್ಪತ್ರೆಯ ನೇತ್ರತಜ್ಞರಾದ ಡಾ.ಲಾವಣ್ಯರವರು ಮಾತನಾಡುತ್ತಾ ಪ್ಯಾರಾ ಮೆಡಿಕಲ್ ವ್ಯಾಸಂಗಕ್ಕೆ ಬರುವ ವಿದ್ಯಾರ್ಥಿಗಳು ಹೆಚ್ಚಿಗೆ ಗ್ರಾಮೀಣ ಪ್ರದೇಶಗಳಿಂದ ಬಂದಿದ್ದು ಅವರಲ್ಲಿರುವ ಕೌಶಲ್ಯಗಳನ್ನು ಹೊರ ಹಾಕಲು ಹಾಗೂ ಅಭಿವೃದ್ಧಿಗೊಳಿಸಲು ಇತಂಹ ವಸ್ತು ಪ್ರದರ್ಶನ ಹೆಚ್ಚು ಅನುಕೂಲಕರವಾಗಿರುತ್ತದೆ ಎಂದರು. ವೈದ್ಯಕೀಯ ಕ್ಷೇತ್ರದಲ್ಲಿ ನೂತನ ಅವಿಷ್ಕಾರಗಳು ಆಗುತ್ತೇವೆ. ನೂತನ ತಾಂತ್ರಿಕತೆ ಪರಿಣತಿವುಳ್ಳ ಸಿಬ್ಬಂದಿಗಳು ಕೆಲಸ ನಿರ್ವಹಿಸುತ್ತಾರೆ, ಇದು ರೋಗಿಗಳಿಗೆ ಉತ್ತಮ ಸೇವೆ ನೀಡಲು ಬಹು ಅವಶ್ಯಕವಾಗಿದೆ ಎಂದು ತಿಳಿಸಿದರು.

ಶ್ರೀದೇವಿ ಪ್ಯಾರಾಮೆಡಿಕಲ್ ಕಾಲೇಜಿನ ಪ್ರಾಂಶುಪಾಲರಾದ ಡಾ.ಎಂ.ಸಿ.ಕೃಷ್ಣರವರು ಮಾತನಾಡುತ್ತಾ ಜ್ಞಾನಾರ್ಜನೆ ಜೊತೆಗೆ ಕೌಶಲ್ಯಾಭಿವೃದ್ಧಿಯನ್ನು ಹೆಚ್ಚಿಸಿಕೊಂಡು ವೃತ್ತಿಪರ ಶಿಕ್ಷಣ ಮುಂದುವರೆಸಬೇಕಾಗಿರುತ್ತದೆ. ಈ ನಿಟ್ಟಿನಲ್ಲಿ ಶ್ರೀದೇವಿ ಪ್ಯಾರಾಮೆಡಿಕಲ್ ವಿದ್ಯಾರ್ಥಿಗಳು ಎಲ್ಲಾ ವಿಭಾಗಗಳ ವೈದ್ಯಕೀಯ ಉಪಕರಣಗಳ ಉಪಯೋಗ ಮತ್ತು ಆರೋಗ್ಯ ಶಿಕ್ಷಣವನ್ನು ನೀಡಲು ಪ್ರಾಯೋಗಿಕವಾಗಿ ಅನುಕೂಲಕರ ವಾತಾವರಣವನ್ನು ಕಲ್ಪಿಸಲಾಗಿದೆ. ಇದು ವೈದ್ಯಕೀಯ ಕ್ಷೇತ್ರದ ನೂತನ ಅವಿಷ್ಕಾರವಾಗಿದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಶ್ರೀದೇವಿ ಆಡಳಿತಾಧಿಕಾರಿ ಟಿ.ವಿ.ಬ್ರಹ್ಮದೇವಯ್ಯರವರು ಮಾತನಾಡುತ್ತಾ ಶ್ರೀದೇವಿ ಕಾಲೇಜಿನ ಅರೆ ವೈದ್ಯಕೀಯ ವಿದ್ಯಾರ್ಥಿಗಳ ಇದರ ಬಗ್ಗೆ ಅರಿವು ಮೂಡಿಸಲು ವಸ್ತು ಪ್ರದರ್ಶನವನ್ನು ಆಯೋಜಿಸಿದ್ದಾರೆ. ವಿದ್ಯಾರ್ಥಿಗಳು ಬಹಳ ಶ್ರಮಪಟ್ಟು ಅಧ್ಯಾಪಕ ಸಹಕಾರದೊಂದಿಗೆ ಮಾದರಿಗಳನ್ನು ತಯಾರಿಸಿರುತ್ತಾರೆ. ಇದೇ ಸಂದರ್ಭದಲ್ಲಿ ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಟ್ರಸ್ಟಿಯಾದ ಶ್ರೀಮತಿ ಅಂಬಿಕಾ ಎಂ ಹುಲಿನಾಯ್ಕರ್, ಶ್ರೀದೇವಿ ಪ್ಯಾರಾಮೆಡಿಕಲ್ ಕಾಲೇಜಿನ ಉಪಪ್ರಾಂಶುಪಾಲರಾದ ಡಾ.ಸಿ.ಪಿ.ಚಂದ್ರಪ್ಪ ಹಾಗೂ ಬೋಧಕ ಬೋಧಕೇತರ ಸಿಬ್ಬಂದಿ ವರ್ಗದವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಸಂವಿಧಾನ ಜಾಗೃತಿ ಜಾಥಾ ಕಾರ್ಯಕ್ರಮಕ್ಕೆ ಸಿದ್ಧತೆ ಮಾಡಿಕೊಳ್ಳಿ

**ರಾಮನಗರ:** 2024 ಜನವರಿ ಮತ್ತು ಫೆಬ್ರವರಿ ಮಾಹೆಯಲ್ಲಿ ಸಂವಿಧಾನ ದಿನಾಚರಣೆ ಪ್ರಯುಕ್ತ ಜಿಲ್ಲೆಯಾದ್ಯಂತ ಸಂವಿದಾನ ಜಾಗೃತಿ ಜಾಥಾ ಕಾರ್ಯಕ್ರಮವನ್ನು ಸ್ತಬ್ಧ ಚಿತ್ರ ಮೂಲಕ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಡಾ. ಅವಿನಾಶ್ ಮೆನನ್ ರಾಜೇಂದ್ರನ್ ಅವರು ತಿಳಿಸಿದರು.

ಅವರು ಸಂವಿಧಾನ ದಿನಾಚರಣೆಯ ಪ್ರಯುಕ್ತ ಸಂವಿಧಾನ ಜಾಗೃತಿ ಜಾಥ ಕಾರ್ಯಕ್ರಮದ ಪೂರ್ವ ಸಿದ್ದತೆಗಳನ್ನು ಕೈಗೊಳ್ಳುವ ಬಗ್ಗೆ ಡಿ. 16ರಂದು ಆಯೋಜಿಸಲಾಗಿದ್ದ ಜೂಮ್ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಿಲ್ಲೆಯಲ್ಲಿ ಸ್ತಬ್ಧ ಚಿತ್ರವು ಜ. 26 ರಿಂದ ಫೆ. 23ರ ವರೆಗೆ ಸಂಚಾರಗೊಳ್ಳಲಿದ್ದು, ಸಂವಿಧಾನ ಜಾಗೃತಿ ಜಾಥಾ ಕಾರ್ಯಕ್ರಮಕ್ಕೆ ಜ. 26ರಂದು ರಾಮನಗರದಲ್ಲಿ ಚಾಲನೆ ನೀಡಲಾಗುವುದು. ಸ್ತಬ್ದ ಚಿತ್ರವು ಜಿಲ್ಲೆಯ 126 ಗ್ರಾಮ ಪಂಚಾಯಿತಿಗಳಿಗೆ, ನಗರಸಭೆ ಹಾಗೂ ಪುರಸಭೆಗಳಲ್ಲಿ ಸಂಚಾರಗೊಳ್ಳಲಿದೆ. ಜಾಥಾ ಸಂದರ್ಭದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುವುದು, ಶಾಲಾ ಕಾಲೇಜುಗಳಲ್ಲಿ ರಂಗೋಲಿ ಸ್ಪರ್ಧೆ, ರಸಪ್ರಶ್ನೆ, ಪ್ರಬಂಧ ಸ್ಪರ್ಧೆಯನ್ನು ಆಯೋಜಿಸಲಾಗುವುದು ಎಂದು ತಿಳಿಸಿದರು.

ಈ ಕಾರ್ಯಕ್ರಮವು ಭಾರತ ಸಂವಿಧಾನದ ಆಚರಣೆ ಹಾಗೂ ಅದರ ಮಹತ್ವದ ಬಗ್ಗೆ ಜಾಗೃತಿ ಮೂಡಿಸುವುದಾಗಿದೆ. ಆದ್ದರಿಂದ ಎಲ್ಲಾ ಸರ್ಕಾರಿ ಇಲಾಖೆಗಳು, ಸಂಸ್ಥೆಗಳು ಹಾಗೂ ಖಾಸಗಿ ಸಂಸ್ಥೆಗಳ ಅಧಿಕಾರಿ/ಸಿಬ್ಬಂದಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಬೇಕು ಎಂದರು.

ಸಂವಿಧಾನ ಜಾಗೃತಿ ಜಾಥ ಕಾರ್ಯಕ್ರಮದ ಸ್ತಬ್ದ ಚಿತ್ರವು ಭವ್ಯತೆ, ನಾವೀನ್ಯತೆ, ಪರಿಣಾಮಕಾರಿತ್ವವಾಗಿರಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಜೂಮ್ ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ದಿಗ್ವಿಜಯ್ ಬೋಡ್ಕೆ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರಾದ ಶಾಂತಿಪ್ರಿಯ, ಯೋಜನಾ ನಿರ್ದೇಶಕರಾದ ರಮೇಶ್, ತಹಶೀಲ್ದಾರುಗಳು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ಸಂಜೆ ಟಿಪ್ಸ್

## ಏರ್ ಬಸ್‌ನೊಂದಿಗೆ ತನ್ನ ವ್ಯೂಹಾತ್ಮಕ ಸಂಬಂಧವನ್ನು ವಿಸ್ತರಿಸಿದ ಮಹೀಂದ್ರಾ ಏರೋಸ್ಟ್ರಕ್ಚರ್ಸ್

ಮಹೀಂದ್ರಾ ಏರೋಸ್ಟ್ರಕ್ಚರ್ಸ್ ಪ್ರೈವೇಟ್ ಲಿಮಿಟೆಡ್ (ಎಂಎಎಸ್ಪಿಎಲ್) ಮತ್ತು ಏರ್ಬಸ್ ಏರೋಸ್ಟ್ರಕ್ಚರ್ಸ್ ಜಿಎಂಬಿಎಚ್ ಸಂಸ್ಥೆಗಳು ಎಲ್ಲಾ ಏರ್ಬಸ್ ವಾಣಿಜ್ಯ ವಿಮಾನ ಮಾದರಿಗಳಿಗೆ ಲೋಹದ ಬಿಡಿಭಾಗಗಳ ತಯಾರಿಕೆ ಹಾಗೂ ವಿತರಣೆಗಾಗಿ ಹೊಸ ಒಪ್ಪಂದಕ್ಕೆ ಸಹಿ ಹಾಕಿವೆ. ಒಪ್ಪಂದದ ಪ್ರಕಾರ, ಮಹೀಂದ್ರಾ ಏರೋಸ್ಟ್ರಕ್ಚರ್ಸ್ ಭಾರತದಲ್ಲಿನ ತನ್ನ ಉತ್ಪಾದನಾ ನೆಲೆಯಿಂದ ಜರ್ಮನಿಯ ಏರ್ಬಸ್‌ಗೆ ಸುಮಾರು 5000 ರೀತಿಯ ಲೋಹದ ಉಪಕರಣಗಳನ್ನು ಪೂರೈಸಲಿದೆ. ಹೊಸ ಒಪ್ಪಂದವು, ಫ್ರಾನ್ಸ್‌ನ ಟೌಲೌಸ್‌ನಲ್ಲಿರುವ ತನ್ನ ಘಟಕದಿಂದ ಏರ್ಬಸ್‌ಗೆ ನೇರವಾಗಿ ಬಿಡಿಭಾಗಗಳನ್ನು ಪೂರೈಸಲು ಎಂಎಎಸ್ಪಿಎಲ್ ಈಗಾಗಲೇ ಹೊಂದಿರುವ ಯೋಜನೆಗಳಿಗೆ ಹೊಸ ಸೇರ್ಪಡೆಯಾಗಿದೆ. ಈ ಒಪ್ಪಂದದ ಬಗ್ಗೆ ಮಾತನಾಡಿದ ಮಹೀಂದ್ರಾ ಸಂಸ್ಥೆಯ ಏರೋಸ್ಪೇಸ್, ರಕ್ಷಣೆ ಹಾಗೂ ಸಿಪಿಒ, ವಾಹನ ಮತ್ತು ಕೃಷಿ ವಿಭಾಗದ ಅಧ್ಯಕ್ಷ ವಿನೋದ್ ಸಹಾಯ್, ಅವರು ಮಹೀಂದ್ರಾ ಸಮೂಹವು ಏರ್ಬಸ್ ಜೊತೆಗಿನ ತನ್ನ ಸಂಬಂಧದ ಬಗ್ಗೆ ಹೆಮ್ಮೆ ಹೊಂದಿದೆ. ಈ ಹೊಸ ಒಪ್ಪಂದದೊಂದಿಗೆ ನಾವು ನಮ್ಮ ಸಂಬಂಧವನ್ನು ಮತ್ತಷ್ಟು ವಿಸ್ತರಿಸುತ್ತೇವೆ ಮತ್ತು ಭಾರತ ಸರ್ಕಾರದ 'ಮೇಕ್ ಇನ್ ಇಂಡಿಯಾ' ಉಪಕ್ರಮದಲ್ಲಿ ನಮ್ಮ ಭಾಗವಹಿಸುವಿಕೆಯನ್ನು ಹೆಚ್ಚಿಸುತ್ತೇವೆ. ನಮ್ಮ ಬದ್ಧತೆಗಳನ್ನು ಪೂರೈಸಲು ಮತ್ತು ಸಹಯೋಗದ ಬೆಳವಣಿಗೆಯ ಈ ಪ್ರಯಾಣವನ್ನು ಮುಂದುವರಿಸಲು ನಾವು ಎದುರು ನೋಡುತ್ತಿದ್ದೇವೆ, ಎಂದು ಹೇಳಿದರು. ಮಹೀಂದ್ರಾ ಏರೋಸ್ಟ್ರಕ್ಚರ್ಸ್ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಅರವಿಂದ್ ಮೆಹ್ರಾ, ಅವರು ಮಾತನಾಡಿ, ಏರ್ಬಸ್ನ ಪೂರೈಕೆದಾರನಾಗಲು ಮಹೀಂದ್ರಾ ಏರೋಸ್ಟ್ರಕ್ಚರ್ಸ್ ಹೆಮ್ಮೆಪಡುತ್ತದೆ. ನಮ್ಮ ಬೆಳವಣಿಗೆಯ ಉಪಕ್ರಮಗಳಿಗೆ ಅವರ ನಿರಂತರ ಬೆಂಬಲವನ್ನು ನಾವು ಬಹಳವಾಗಿ ಪ್ರಶಂಸಿಸುತ್ತೇವೆ. ಈ ಒಪ್ಪಂದವು ನಮ್ಮ ಏರ್ಬಸ್ ಬಿಡಿಭಾಗಗಳ ಉತ್ಪನ್ನ ಪಟ್ಟಿಗೆ ಮಹತ್ವದ ವಿಸ್ತರಣೆಯಾಗಿದೆ. ಕಾರ್ಯಕ್ಷಮತೆ, ಸುಸ್ಥಿರತೆ ಮತ್ತು ಕಾರ್ಯಾಚರಣೆಯ ಉತ್ಕೃಷ್ಟತೆ ವಿಚಾರವಾಗಿ ಏರ್ಬಸ್‌ನೊಂದಿಗೆ ಕೆಲಸ ಮಾಡಲು ನಮಗೆ ಹೆಚ್ಚಿನ ಅವಕಾಶಗಳನ್ನು ನೀಡುತ್ತದೆ, ಎಂದು ಹೇಳಿದರು.

## ಹಸಿಮೆಣಸಿನಕಾಯಿ ಉಪ್ಪಿನಕಾಯಿ

### ಪಾಕ ಶಾಲೆ



20 - ಹಸಿಮೆಣಸು, 3 ಟೇಬಲ್ ಸ್ಪೂನ್ - ಧನಿಯಾ ಬೀಜ, 1 - 1 ½ ಟೇಬಲ್ ಸ್ಪೂನ್, ಸೊಂಪು, 1 ಟೀ ಸ್ಪೂನ್ - ಮೆಂತ್ಯಕಾಳು, 1 ಟೀ ಸ್ಪೂನ್ - ಸಾಸಿವೆ, 1/8 ಟೀ ಸ್ಪೂನ್ - ಇಂಗು, 3 ಟೀ ಸ್ಪೂನ್ - ಉಪ್ಪು, ½ ಟೀ ಸ್ಪೂನ್ - ಅರಿಶಿನ, 1 ಟೇಬಲ್ ಸ್ಪೂನ್ - ವಿನೇಗರ್, 2 ಟೇಬಲ್ ಸ್ಪೂನ್ - ಎಣ್ಣೆ.

ಮೊದಲಿಗೆ ಹಸಿಮೆಣಸನ್ನು ಚೆನ್ನಾಗಿ ತೊಳೆದು ಉದ್ದಕ್ಕೆ ಸೀಳಿಕೊಳ್ಳಿ. ಮಿಕ್ಸಿ ಜಾರಿಗೆ ಧನಿಯಾ ಬೀಜ, ಸೋಂಪು, ಮೆಂತ್ಯಕಾಳು ಹಾಕಿ ತರಿತರಿಯಾಗಿ ರುಬ್ಬಿಕೊಂಡು ತೆಗೆದಿಟ್ಟುಕೊಳ್ಳಿ. ನಂತರ ಇದಕ್ಕೆ ಉಪ್ಪು, ಅರಿಶಿನ, ಇಂಗು, ಸಾಸಿವೆ ಹಾಕಿ ಮಿಕ್ಸ್ ಮಾಡಿ. ಎಣ್ಣೆ ಬಿಸಿ ಮಾಡಿಕೊಂಡು ಅದನ್ನು ಈ ಮಿಶ್ರಣಕ್ಕೆ ಹಾಕಿ ಚೆನ್ನಾಗಿ ಮಿಕ್ಸ್ ಮಾಡಿ. ನಂತರ ವಿನೇಗರ್ ಹಾಕಿ ಮಿಕ್ಸ್ ಮಾಡಿ.

ನಂತರ ಈ ಮಸಾಲಾ ಮಿಶ್ರಣವನ್ನು ಸೀಳಿಟ್ಟುಕೊಂಡ ಹಸಿಮೆಣಸಿನ ಒಳಗೆ ತುಂಬಿ ಒಂದು ಗ್ಲಾಸ್ ಜಾರಿನೊಳಗೆ ಹಾಕಿ ಎರಡು ದಿನ ಹಾಗೇ ಇಡಿ. ನಂತರ ಒಂದು ದಿನ ಸೂರ್ಯನ ಬಿಸಿಲಿಗೆ ಇಡಿ. ಆಮೇಲೆ ಇದನ್ನು ಉಪಯೋಗಿಸಬಹುದು. ಫ್ರಿಡ್ಜ ನಲ್ಲಿಟ್ಟುಕೊಂಡು ಬಳಸಬಹುದು.

## ಮಯೋಪಿಯಾ ಇರುವವರಿಗೆ ಗ್ಲಾಕೋಮಾ ಕಾಣಿಸಿಕೊಳ್ಳುವ ಸಾಧ್ಯತೆ ಹೆಚ್ಚಳ

### ಹೆಲ್ತ್ ಟಿಪ್ಸ್




ಸಾಮಾನ್ಯ ದೃಷ್ಟಿಯನ್ನು ಹೊಂದಿರುವವರಿಗೆ ಹೋಲಿಸಿದರೆ ಮಯೋಪಿಯಾ ಹೊಂದಿರುವವರಲ್ಲಿ ಗ್ಲಾಕೋಮಾ ಕಾಣಿಸಿಕೊಳ್ಳುವ ಸಾಧ್ಯತೆ ಮೂರು ಪಟ್ಟು ಹೆಚ್ಚಿರುತ್ತದೆ ಎಂದು ಗ್ಲಾಕೋಮಾ ಜಾಗೃತಿ ಮಾಸದ ಆಚರಣೆಯ ವೇಳೆ ಡಾ. ಅಗರ್ವಾಲ್ಸ್ ಐ ಹಾಸ್ಪಿಟಲ್‌ನ ವೈದ್ಯರು ಹೇಳಿದ್ದಾರೆ. ಸಮೀಪ ದೃಷ್ಟಿ ದೋಷ ಎಂದೂ ಕರೆಯಲಾಗುವ ಮಯೋಪಿಯಾ ಒಂದು ಅತ್ಯಂತ ಸಾಮಾನ್ಯ ದೃಷ್ಟಿ ಸಮಸ್ಯೆಯಾಗಿದ್ದು, ಇದರಲ್ಲಿ ಸಮೀಪದ ವಸ್ತುಗಳು ಸ್ಪಷ್ಟವಾಗಿ ಕಾಣಿಸುತ್ತವೆ. ಆದರೆ, ದೂರದ ವಸ್ತುಗಳು ಮಂದವಾಗಿ ಕಾಣಿಸುತ್ತವೆ. ಇದು ರಿಫ್ರಾಕ್ಟಿವ್ ದೋಷಕ್ಕೆ ಕಾರಣವಾಗುತ್ತದೆ ಮತ್ತು ಭಾರತದ 10-20 ಶೇಕಡಾ ಜನಸಂಖ್ಯೆಗೆ ಈ ಸಮಸ್ಯೆ ಬಾಧಿಸುತ್ತದೆ. ಡಾ. ಅಗರ್ವಾಲ್ಸ್ ಐ ಹಾಸ್ಪಿಟಲ್‌ನ ಕನ್ಸಲ್ಟಂಟ್ ಆಪ್ಥಾಲ್ಮಾಲಜಿಸ್ಟ್ ಡಾ. ಪಿ ಸುನೀತಾ ಹೇಳುವಂತೆ ''ಮಯೋಪಿಯಾ ಮತ್ತು ಗ್ಲಾಕೋಮಾ ಮಧ್ಯೆ ಇರುವ ಸಂಬಂಧವನ್ನು ಪರಿಗಣಿಸಿ, ಹಲವು ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳುವುದು ಅತ್ಯಂತ ಮುಖ್ಯವಾಗಿದೆ. ಓದುವುದು, ಕಂಪ್ಯೂಟರ್ ಬಳಕೆ, ವೀಡಿಯೋ ಗೇಮ್ ಆಡುವುದು ಮತ್ತು ಸಮೀಪದಿಂದ ಟಿವಿ ವೀಕ್ಷಣೆ ಇತ್ಯಾದಿ ಚಟುವಟಿಕೆಗಳನ್ನು ಕಡಿಮೆ ಮಾಡುವ ಮೂಲಕ ಮಕ್ಕಳಲ್ಲಿ ಮಯೋಪಿಯಾವನ್ನು ನಿಯಂತ್ರಿಸಬಹುದು. ಈ ಎಲ್ಲ ಚಟುವಟಿಕೆಗಳೂ ಮಕ್ಕಳ ಕಣ್ಣಿನಿಂದ ಹೆಚ್ಚು ದೃಷ್ಟಿ ಬೇಡಿಕೆಯನ್ನು ಹುಟ್ಟುಹಾಕುತ್ತವೆ. ಹೊರಾಂಗಣ ಚಟುವಟಿಕೆಗಳಲ್ಲಿ ಹೆಚ್ಚು ಸಮಯ ಕಳೆಯುವಂತೆ ಅವರನ್ನು ಪ್ರೋತ್ಸಾಹಿಸಬೇಕು. ಸರಿಯಾದ ಕರೆಕ್ಟಿವ್ ಲೆನ್ಸ್ ಅನ್ನು ಧರಿಸುವುದು ಕೂಡಾ ಅತ್ಯಂತ ಮುಖ್ಯವಾಗಿರುತ್ತದೆ. ಮಯೋಪಿಯಾ ಹೊಂದಿರುವವರು ವರ್ಷಕ್ಕೆ ಎರಡು ಬಾರಿ ಕಣ್ಣಿನ ತಪಾಸಣೆ ಮಾಡಿಸಿಕೊಳ್ಳಬೇಕು. ಜಾಗೃತಿ ಕೊರತೆ, ಪತ್ತೆ ಸಾಧನಗಳ ಸೀಮಿತ ಲಭ್ಯತೆ ಮತ್ತು ಕಾಲಕಾಲಕ್ಕೆ ಕಣ್ಣಿನ ತಪಾಸಣೆ ಮಾಡುವುದಕ್ಕೆ ಬದ್ಧವಾಗದೇ ಇರುವುದು ಇತ್ಯಾದಿ ಸಮಸ್ಯೆಗಳು ಗ್ಲಾಕೋಮಾ ಮತ್ತು ಮಯೋಪಿಯಾವನ್ನು ಆರಂಭಿಕ ಹಂತದಲ್ಲಿ ಪತ್ತೆ ಮಾಡುವಲ್ಲಿ ಇರುವ ಅಡಚಣೆಗಳಾಗಿವೆ.'' ಇನ್ನೊಂದೆಡೆ ಗ್ಲಾಕೋಮಾ ಭಾರತದಲ್ಲಿ ದೃಷ್ಟಿ ಮಾಂದ್ಯತೆಗೆ ಮೂರನೇ ಪ್ರಮುಖ ಕಾರಣವಾಗಿದೆ ಎಂದು ಡಾ. ಅಗರ್ವಾಲ್ಸ್ ಹಾಸ್ಪಿಟಲ್‌ನ ಕ್ಲಿನಿಕಲ್ ಸೇವೆಗಳ ಪ್ರಾದೇಶಿಕ ಮುಖ್ಯಸ್ಥ ಡಾ. ರಾಮ್ ಎಸ್ ಮಿರ್ಲೆ ಹೇಳಿದ್ದಾರೆ. ಅಲ್ಲದೆ, ''ಮಧ್ಯಮ ಪ್ರಮಾಣದಿಂದ ಅಧಿಕ ಪ್ರಮಾಣದ ಮಯೋಪಿಯಾ ಹೊಂದಿರುವವರನ್ನು ಗ್ಲಾಕೋಮಾ ಕಾಣಿಸಿಕೊಳ್ಳುವ ಅಪಾಯ ಮೂರರಿಂದ ನಾಲ್ಕು ಪಟ್ಟು ಹೆಚ್ಚಿದೆ. ಕಣ್ಣಿನ ದ್ರವ ಒತ್ತಡದಿಂದ ಸ್ವತಂತ್ರವಾಗಿ ಈ ಅಪಾಯ ಕಂಡುಬರುತ್ತದೆ. 30% ಪ್ರೈಮರಿ ಓಪನ್ ಆಂಗಲ್ ಗ್ಲಾಕೋಮಾ (ಪಿಒಎಜಿ) ರೋಗಿಗಳು ಮಯೋಪಿಯಾ ಹೊಂದಿದ್ದಾರೆ. ಮಯೋಪಿಯಾ ಹೊಂದಿರುವವರಲ್ಲಿ ಗ್ಲಾಕೋಮಾ ಕಾಣಿಸಿಕೊಳ್ಳುವ ಸಾಧ್ಯತೆಯು ವಯಸ್ಸು, ಕುಟುಂಬದ ಇತಿಹಾಸ ಮತ್ತು ಮಯೋಪಿಯಾ ಮಟ್ಟವನ್ನು ಅವಲಂಬಿಸಿರುತ್ತದೆ.

ಡಾ. ರಾಮ್ ಎಸ್ ಮಿರ್ಲೆ ಹೇಳುವಂತೆ ''ಕೋಲಾರದಲ್ಲಿನ ಶಾಲೆಯಲ್ಲಿ 6-16 ವರ್ಷಗಳ ವ್ಯಕ್ತಿಗಳಲ್ಲಿ 2012 ರಲ್ಲಿ ನಡೆಸಿದ ಎರಡು ಕಣ್ಣು ತಪಾಸಣೆ ಅಧ್ಯಯನಗಳಲ್ಲಿ 11.5% ಜನರಿಗೆ ಮಯೋಪಿಯಾ ಇರುವುದು ಕಂಡುಬಂದಿದೆ. 2016 ರಲ್ಲಿ ಉಡುಪಿಯಲ್ಲಿ ನಡೆಸಿದ ಸಮೀಕ್ಷೆಯಲ್ಲಿ 4% ಮಯೋಪಿಯಾ ಇರುವುದು ಪತ್ತೆಯಾಗಿದೆ. 18 ವರ್ಷಗಳಿಗಿಂತ ಹೆಚ್ಚಿನ ವಯಸ್ಸಿನ ಸುಮಾರು 41% ರಷ್ಟು ಜನಸಂಖ್ಯೆಯನ್ನು ಹೊಂದಿರುವ ಎರಡನೇ ಅತಿ ಹೆಚ್ಚು ಜನಸಂಖ್ಯೆ ಇರುವ ದೇಶ ಭಾರತವಾಗಿದೆ. ಹೀಗಾಗಿ, ಮಯೋಪಿಯಾ ಸಮಸ್ಯೆ ಹೆಚ್ಚು ಪ್ರಮುಖವಾಗಿದೆ ಎಂದರು. ಗ್ಲಾಕೋಮಾ ದೀರ್ಘಕಾಲೀನ, ಬೆಳೆಯುತ್ತಿರುವ ಕಣ್ಣಿನ ರೋಗವಾಗಿದ್ದು, ಆಪ್ಟಿಕ್ ನರದ ಹಾನಿಯಿಂದ ಕಂಡುಬರುತ್ತದೆ. ಇದು ನಿಧಾನವಾಗಿ ದೃಷ್ಟಿ ನಷ್ಟಕ್ಕೆ ಕಾರಣವಾಗುತ್ತದೆ. ಮೊದಲ ಹೊರ ಮೇಲ್ಮೈ ದೃಷ್ಟಿಗೆ ಇದು ಬಾಧಿಸುತ್ತದೆ. ಇದಕ್ಕೆ ಮುಖ್ಯ ಕಾರಣವೆಂದರೆ ಕಣ್ಣಿಗೆ ಹೆಚ್ಚು ಒತ್ತಡ ಹಾಕುವುದಾಗಿದೆ. ದೊಡ್ಡ ಪ್ರಮಾಣದಲ್ಲಿ ಕಣ್ಣಿಗೆ ಹಾನಿಯಾಗುವವರೆಗೂ ಯಾವುದೇ ಎಚ್ಚರಿಕೆ ಚಿಹ್ನೆಗಳು ಕಂಡುಬರುವುದಿಲ್ಲ. ಔಷಧ ಅಥವಾ ಲೇಸರ್ ಸರ್ಜರಿ ಮೂಲಕ ಇಂಟ್ರಾಕ್ಯುಲರ್ ಒತ್ತಡ (ಕಣ್ಣಿನ ದ್ರವ ಒತ್ತಡ) ಕಡಿಮೆ ಮಾಡುವ ವಿಧಾನವನ್ನು ಚಿಕಿತ್ಸೆಯು ಒಳಗೊಂಡಿರುತ್ತದೆ. 40 ಹಾಗೂ ಹೆಚ್ಚು ವಯಸ್ಸಿನ ಸುಮಾರು 12 ಮಿಲಿಯನ್ ಜನರು ಭಾರತದಲ್ಲಿ ಗ್ಲಾಕೋಮಾದಿಂದ ಬಳಲುತ್ತಿದ್ದಾರೆ'' ಎಂದು ಡಾ. ಅಗರ್ವಾಲ್ಸ್ ಐ ಹಾಸ್ಪಿಟಲ್‌ನ ಕ್ಲಿನಿಕಲ್ ಸೇವೆಗಳ ಪ್ರಾದೇಶಿಕ ಮುಖ್ಯಸ್ಥ ಡಾ. ಅರ್ಚನಾ ಎಸ್ ಹೇಳಿದ್ದಾರೆ.

## ಅಮಿತ್ ಶ್ರೀವಾಸ್ತವ ಅವರಿಂದ ಏಕವ್ಯಕ್ತಿ ಪ್ರದರ್ಶನ



ಭಾರತ, ದುಬೈ ಮತ್ತು ಯುಎಸ್‌ನಲ್ಲಿ ಹಲವಾರು ಗಮನಾರ್ಹ ಗುಂಪು ಪ್ರದರ್ಶನಗಳ ನಂತರ, ಐಐಟಿ ದೆಹಲಿಯ ಹಳೆಯ ವಿದ್ಯಾರ್ಥಿಯಾದ ಅಮಿತ್ ಶ್ರೀವಾಸ್ತವ ಅವರು ಶಾಸ್ತ್ರೀಯ ವಾಸ್ತವಿಕತೆಯಲ್ಲಿ ಪ್ರಶಸ್ತಿ ವಿಜೇತ ಕಲಾಕೃತಿಗಳ ಸೆರೆಯಾಳುಗಳ ಸಂಗ್ರಹಕ್ಕಾಗಿ ವಿಜಯೋತ್ಸವದ ಮೂಲಕ ಬೆಂಗಳೂರಿಗೆ ಮರಳುತ್ತಿದ್ದಾರೆ. ಒಂದು ದಶಕದ ಹಿಂದೆ ರೋಮಾಂಚಕ ನಗರದಲ್ಲಿ ತನ್ನ ಕಲಾತ್ಮಕ ಪ್ರಯಾಣವನ್ನು ಆರಂಭಿಸಿದ ಅವರು, ಬೆಂಗಳೂರಿನ ಗ್ಯಾಲರಿ ಟೈಮ್ ಸ್ಪೇಸ್‌ನಲ್ಲಿ ಜನವರಿ 20 (ಶನಿವಾರ) ರಿಂದ ಜನವರಿ 28 (ಭಾನುವಾರ), 2024 ರವರೆಗೆ ನಡೆಯುವ ತಮ್ಮ ಅಸಾಧಾರಣವಾದ ವಿಶಿಷ್ಟ ಏಕವ್ಯಕ್ತಿ ಪ್ರದರ್ಶನವನ್ನು ಅನಾವರಣಗೊಳಿಸಲು ಸಿದ್ಧರಾಗಿದ್ದಾರೆ.

ಅನ್ಪ್ಟರ್ಡ್ ಎಂಬ ಕಲಾ ಪ್ರದರ್ಶನವು ಆಧುನಿಕ ಭಾರತೀಯ ಮಹಿಳೆಯ ಆತ್ಮಕ್ಕೆ ಗೌರವವಾಗಿ ಕಾರ್ಯನಿರ್ವಹಿಸುತ್ತದೆ, ಆಕೆಯ ಸ್ವಾವಲಂಬನೆ, ಸ್ವಾತಂತ್ರ್ಯ ಮತ್ತು ಸಬಲೀಕರಣವನ್ನು ಆಚರಿಸುತ್ತದೆ. ಕಳೆದ ಕೆಲವು ದಶಕಗಳಲ್ಲಿ ಮಹಿಳೆಯರು ಸಾಂಪ್ರದಾಯಿಕ ಪಾತ್ರಗಳಿಂದ ಹೊರಬಂದು ಸ್ಫೂರ್ತಿದಾಯಕ ವ್ಯಕ್ತಿಗಳಾಗುತ್ತಿದ್ದಾರೆ.

ವೈವಿಧ್ಯಮಯ ಹಿನ್ನೆಲೆಗಳ ವಿರುದ್ಧ ಹೊಂದಿಸಲಾಗಿದೆ, ಪ್ರದರ್ಶನದ ನಿರೂಪಣೆಯು ಅನಿಯಂತ್ರಿತ ಅಭಿವ್ಯಕ್ತಿಗಳ ಕ್ಷಣಗಳೊಂದಿಗೆ ಗಾಜಿನ ಛಾವಣಿಗಳ ಒಡೆದುಹೋಗುವಿಕೆಯನ್ನು ಮನಬಂದಂತೆ ಹೆಣೆಯುತ್ತದೆ. ಕಲೆಯು ಮಹಿಳೆಯರು ತಮ್ಮ ವೇಗದ ಆಧುನಿಕ ಜೀವನದಿಂದ ಹೊರಬರುವುದನ್ನು ವಿವಿಧ ಸೆಟ್ಟಿಂಗ್‌ಗಳಲ್ಲಿ ಸ್ಪಷ್ಟವಾಗಿ ಸೆರೆಹಿಡಿಯುತ್ತದೆ. ರೋಮಾಂಚಕ ಕೆಫೆಗಳು, ಮೃದುವಾಗಿ ಬೆಳಗಿದ ಬಾರ್‌ಗಳು, ಏಕಾಂತ ಪ್ರಯಾಣದ ಸಮಯದಲ್ಲಿ, ಪ್ರತಿಬಿಂಬಗಳು,

ಸಂಗೀತ, ನೃತ್ಯ ಅಥವಾ ಪ್ರಾರ್ಥನೆಯ ಮೂಲಕ ತಮ್ಮನ್ನು ತಾವು ವ್ಯಕ್ತಪಡಿಸುವುದು. ಕಲಾವಿದನ ನೋಟವು ಸಾರ್ವಜನಿಕ ಸ್ಥಳಗಳಲ್ಲಿ ವೈಯಕ್ತಿಕ ಕ್ಷೇತ್ರಗಳಲ್ಲಿ ಅವರನ್ನು ಕಂಡುಹಿಡಿದಿದೆ, ಸಮಕಾಲೀನ ಮಹಿಳೆಯರ ಜೀವನದಲ್ಲಿ ಶ್ರೀಮಂತ ಆತ್ಮಾವಲೋಕನದ ಕ್ಷಣಗಳನ್ನು ಎತ್ತಿ ತೋರಿಸುತ್ತದೆ. ಕಲೆಯ ಭಾಷೆಯ ಮೂಲಕ, ಪ್ರದರ್ಶನವು ಪ್ರತ್ಯೇಕತೆಯ ಬಗ್ಗೆ ಸಂಭಾಷಣೆಗಳನ್ನು ಹುಟ್ಟುಹಾಕುತ್ತದೆ, ಮಹಿಳೆಯರು ತಮ್ಮ ಸ್ವಂತ ನಿಯಮಗಳ ಮೇಲೆ ಬದುಕಲು ಅಧಿಕಾರ ನೀಡುವ ಮಹತ್ವವನ್ನು ಒತ್ತಿಹೇಳುತ್ತದೆ.

ಇದು ಪ್ರಶಂಸನೀಯ ಸಂಯೋಜನದಿಂದ ಮಾನವ ರೂಪದ ಅದ್ವಿತೀಯ ಪ್ರಕೃತಿಯನ್ನು ಪರಿಚಯಿಸುವ ಕಲೆಗಾಗಿ ಕಲಾವಿದ ಹೊರೆಯಾದ ರೂಪದರ್ಶಕತೆಯನ್ನು ಅವಲಂಬಿಸಿದೆ. ಇದು ಪರಾಕ್ರಮದ ಮಾನವ ರೂಪದ ಮಾಹಿತಿಗೆ ಒಂದು ವಿನಂತಿಯಾಗಿದೆ ಮತ್ತು ವೈವಿಧ್ಯಮಯ ಡಿಜೈನ್ ಅರಿವಿನ ಸಾಮರ್ಥ್ಯದಿಂದ ಆಗಿದೆ, ಇದರ ಫಲವಾಗಿ ಆಕರ್ಷಕ ರಚನೆಗಳು ಉಂಟಾಗುತ್ತವೆ. ಅಮಿತ್ ಶ್ರೀವಾಸ್ತವ ಅವರು ಒಂಬತ್ತನೇ ವಯಸ್ಸಿನಿಂದಲೂ ಚಿತ್ರಗಳನ್ನು ಬಿಡಿಸಲು ಪ್ರಾರಂಭಿಸಿದರು.

ಐಐಟಿ-ದೆಹಲಿಹಳೆಯ ವಿದ್ಯಾರ್ಥಿ, ಅವರು ಕಲೆಗಾಗಿ ತಮ್ಮ ದೀರ್ಘಕಾಲದ ಉತ್ಸಾಹವನ್ನು ಅನುಸರಿಸಲು ಐಟಿಯಲ್ಲಿ ತಮ್ಮಲಾಭದಾಯಕ ವೃತ್ತಿಜೀವನವನ್ನು ತೊರೆದರು. ಅವರ ಕಲಾತ್ಮಕ ಹಂಬಲಗಳು ಅವರನ್ನು ದಿ ರೈಡರ್ ಸ್ಟುಡಿಯೊಗೆ(ಯುಎಸ್‌ಎ) ಕರೆದೊಯ್ದವು, ಅಲ್ಲಿ ಅವರು ಮಾಸ್ಟರ್ ಪೇಂಟರ್ ಆಂಥೋನಿ ರೈಡರ್ ಅವರ ಅಡಿಯಲ್ಲಿ ಅಧ್ಯಯನಮಾಡಿದರು, ಶಾಸ್ತ್ರೀಯ ವಾಸ್ತವಿಕ ಶೈಲಿಯ ಚಿತ್ರಕಲೆ ಮತ್ತು ಜೀವನ ಚಿತ್ರಕಲೆ ಅವರ ಕಲಿಕೆಯ ಕೇಂದ್ರಬಿಂದುಗಳಾಗಿವೆ.

## ನಟಿ ಅಕ್ಷರಾ ಸಿಂಗ್ ನೋಡಲು ನೂಕು ನುಗ್ಗಲು



ಭೋಜ್ಪುರಿ ಸಿನಿಮಾದ ಖ್ಯಾತ ನಟಿ ಅಕ್ಷರಾ ಸಿಂಗ್ ಅವರನ್ನು ನೋಡಲು ಜನರು ಹೆಚ್ಚಿನ ಸಂಖ್ಯೆಯಲ್ಲಿ ಬಂದ ಕಾರಣ ನೂಕು ನುಗ್ಗಲು ಉಂಟಾಗಿತ್ತು. ಪರಿಸ್ಥಿತಿ ಕೈಮೀರಿ ಕಲ್ಲು ತೂರಾಟ ಕೂಡಾ ನಡೆದಿದೆ. ಇದರಲ್ಲಿ ಒಬ್ಬ ಪೊಲೀಸ್ ಪೇದೆ ಗಾಯಗೊಂಡಿದ್ದಾರೆ. ಅಪರಿಚಿತರ ವಿರುದ್ಧ ಪ್ರಕರಣ ದಾಖಲಾಗಿದೆ. ಔರಂಗಾಬಾದ್ ಜಿಲ್ಲೆಯ ದೌದ್ನಗರದಲ್ಲಿರುವ ದಾಲ್ಮಿಯಾ ಬಜಾರ್ನ ಉದ್ಘಾಟನಾ ಕಾರ್ಯಕ್ರಮದಲ್ಲಿ ಅಕ್ಷರ ಸಿಂಗ್ ಭಾಗವಹಿಸಿದ್ದರು. ಔರಂಗಾಬಾದ್ ಜಿಲ್ಲೆಯ ದೌದ್ನಗರದ ಬಖ್ರಿವಾನ್ ಬಜಾರ್ ರಸ್ತೆಯಲ್ಲಿರುವ ಲಾಲ್ಬಾಬು ಮಾರುಕಟ್ಟೆಯ ದಾಲ್ಮಿಯಾ ಬಜಾರ್ನ ಉದ್ಘಾಟನಾ ಸಮಾರಂಭದಲ್ಲಿ ಭೋಜ್ಪುರಿ ನಟಿ ಅಕ್ಷರಾ ಸಿಂಗ್ ಅವರನ್ನು ನೋಡಲು ಅಪಾರ ಸಂಖ್ಯೆಯಲ್ಲಿ ಜನರು ಬಂದಿದ್ದರು.ಅಕ್ಷರಾ ಸಿಂಗ್ ದಾಲ್ಮಿಯಾ ಬಜಾರ್ನಿಂದ ಹಿಂಬಾಗಿಲಿನಿಂದ ಹೊರಬರಲು ಪ್ರಾರಂಭಿಸಿದಾಗ, ಪ್ರೇಕ್ಷಕರು ಅವರನ್ನು ನೋಡಲು ಹಿಂಬಾಗಿಲಿನ ಕಡೆಗೆ ತಲುಪಿದರು. ಜನಸಂದಣಿಯನ್ನು ನಿಯಂತ್ರಿಸಲಾಗದೆ ಜನಸಂದಣಿಯಿಂದ ಕಲ್ಲು ತೂರಾಟವೂ ನಡೆಯಿತು. ಕಲ್ಲು ತೂರಾಟದಿಂದ ಕನ್ಹಯ್ಯಾ ಕುಮಾರ್ ಎಂಬ ಪೊಲೀಸ್ ಗಾಯಗೊಂಡಿದ್ದು, ದೌದ್ನಗರದ ಉಪವಿಭಾಗೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಸಾಕಷ್ಟು ಪ್ರಯತ್ನದ ನಂತರ ಪೊಲೀಸರು ಭೋಜ್ಪುರಿ ಚಿತ್ರನಟಿ ಅಕ್ಷರಾ ಸಿಂಗ್ ಅವರನ್ನು ಸುರಕ್ಷಿತ ಕಾರಿನಲ್ಲಿ ಕೂರಿಸಿ ಮುಂದೆ ಕಳುಹಿಸಿದ್ದಾರೆ.ಇಲ್ಲಿ ಉಪಸ್ಥಿತರಿದ್ದ ಎಲ್ ಜೆಪಿ (ರಾಮ್ ವಿಲಾಸ್) ರಾಜ್ಯ ಉಪಾಧ್ಯಕ್ಷ ಡಾ.ಪ್ರಕಾಶ್ಚಂದ್ರ ಅವರನ್ನು ತಮ್ಮ ಕಾರಿನಲ್ಲಿ ಕರೆದುಕೊಂಡು ಹೊಟೇಲ್ ಗೆ ಕರೆದೊಯ್ದರು. ಗುಂಪನ್ನು ನಿಯಂತ್ರಿಸಲು ಪೊಲೀಸರು ಲಘು ಲಾಠಿ ಪ್ರಹಾರ ನಡೆಸಿದ್ದು, ಕೆಲವರಿಗೆ ಗಾಯಗಳಾಗಿವೆ. ಗುಂಪಿನಲ್ಲಿದ್ದ ಕೆಲ ಕಿಡಿಗೇಡಿಗಳು ಕಲ್ಲು ತೂರಾಟ ನಡೆಸಿದ್ದಾರೆ ಎಂದು ಪ್ರಭಾರಿ ಪೊಲೀಸ್ ಠಾಣಾಧಿಕಾರಿ ಸುನೀಲ್ ಕುಮಾರ್ ತಿಳಿಸಿದ್ದಾರೆ. ಸುಮಾರು 200 ಅಪರಿಚಿತರ ವಿರುದ್ಧ ಎಫ್ಐಆರ್ ದಾಖಲಾಗಿದೆ. ಬುಧವಾರ ರಾತ್ರಿ ಅಕ್ಷರಾ ಸಿಂಗ್ ನಿಗದಿತ ಸಮಯಕ್ಕಿಂತ ತಡವಾಗಿ ತಲುಪಿದ್ದರು.

## ಸೌಂದರ್ಯಕ್ಕೆ 'ಮೊಳಕೆ ಕಾಳು'

### ಬ್ಯೂಟಿ ಟಿಪ್ಸ್



ಕಾಳುಗಳನ್ನು ಮೊಳಕೆ ಬರಿಸಿ ಸೇವಿಸುವುದರಿಂದ ದೇಹಕ್ಕೆ ಹಲವು ಲಾಭಗಳಿವೆ. ಮೊಳಕೆ ಕಾಳುಗಳಲ್ಲಿ ವಿಟಮಿನ್ ಕೆ, ಸಿ, ಬಿ ಗಳಿದ್ದು ನಮ್ಮ ದೇಹದ ಜೀರ್ಣಕ್ರಿಯೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಮೊಳಕೆ ಬರಿಸುವುದರಿಂದ ಬೇಳೆಕಾಳುಗಳ ಪೋಷಕಾಂಶಗಳು ದ್ವಿಗುಣವಾಗುತ್ತವೆ. ದಪ್ಪಗಿರುವವರು ಮೊಳಕೆ ಕಾಳು ಸೇವಿಸಿದರೆ ತೂಕ ಇಳಿಸುವುದರ ಜೊತೆಗೆ ಆರೋಗ್ಯವೂ ಉತ್ತಮವಾಗುತ್ತದೆ. ಇದರಲ್ಲಿ ಸೋಡಿಯಮ್ ಕಡಿಮೆ ಇರುವ ಕಾರಣ ಅಧಿಕ ರಕ್ತದೊತ್ತಡ ಇರುವವರು ನಿತ್ಯ ಸೇವಿಸಬಹುದು. ಬೆಳೆಯುವ ಮಕ್ಕಳು ಮತ್ತು ಹದಿಹರೆಯದವರ ಆರೋಗ್ಯಕ್ಕೆ ಮೊಳಕೆ ಕಾಳುಗಳು ತುಂಬಾ ಪ್ರಯೋಜನಕಾರಿ. ಇದನ್ನು ತಾಜಾ ಇರುವಾಗಲೇ ಸಲಾಡ್ ರೂಪದಲ್ಲಿ ಸವಿಯಬೇಕು. ಸಾತ್ವಿಕ ಆಹಾರ ಸೇವನೆ, ಉತ್ತಮ ಆರೋಗ್ಯದ ಹಾದಿ ಎಂಬ ಮಾತಿದೆ. ಅದರಂತೆ ಮೊಳಕೆಕಾಳು ತಿಂದು ದೇಹದ ಎಲ್ಲಾ ಸಮಸ್ಯೆಗಳಿಗೆ ಉತ್ತರ ಕಂಡುಕೊಳ್ಳಬಹುದು. ದಪ್ಪ ಶರೀರವನ್ನು ಹೊಂದಿರುವ ವ್ಯಕ್ತಿಗಳು ರಾತ್ರಿಯ ಸಮಯದಲ್ಲಿ ಇದನ್ನು ಸೇವಿಸಬೇಕು ಮತ್ತು ತೆಳ್ಳಗಿನವರು ಬೆಳಗಿನ ವೇಳೆ ಇದನ್ನು ತಿನ್ನುವುದು ಒಳ್ಳೆಯದು.

## ರಾಶಿ ಭವಿಷ್ಯ



ಜಯಶ್ರೀ.ಬಿ.ಆರ್
ಖ್ಯಾತ ಜ್ಯೋತಿಷಿ
ದೂರವಾಣಿ-9964739507
www.jyotishyavaastu.com

**ಮೇಷ:** ಆರ್ಥಿಕ ನಷ್ಟಗಳು, ಮಾಟ ಮಂತ್ರ ತಂತ್ರದ ಭೀತಿ, ದಾಂಪತ್ಯದಲ್ಲಿ ನಿರಾಸಕ್ತಿ, ಪಾಲುದಾರಿಕೆಯಲ್ಲಿ ಸಮಸ್ಯೆ.

**ವೃಷಭ:** ಶಾರೀರಿಕ ಅಸಮತೋಲನ, ವೃತ್ತಿಯಲ್ಲಿ ಹಿನ್ನಡೆ, ಆಲಸ್ಯ ಸೋಮಾರಿತನ,

**ಮಿಥುನ:** ಗರ್ಭ ದೋಷಗಳು, ಮಕ್ಕಳ ಭವಿಷ್ಯದ ಚಿಂತೆ, ಉದ್ಯೋಗ ನಷ್ಟ, ಪ್ರೀತಿ-ಪ್ರೇಮದಲ್ಲಿ ಸಮಸ್ಯೆ.

**ಕಟಕ:** ಮಾನಸಿಕ ಅಸಮತೋಲನ, ಮಾಟ ಮಂತ್ರದ ಯೋಚನೆ, ಮಿತ್ರರಿಂದ ಬೇಸರ, ಸ್ಥಿರಾಸ್ತಿ ವಾಹನದಿಂದ ಸಮಸ್ಯೆ.

**ಸಿಂಹ:** ಅವಕಾಶ ವಂಚಿತರಾಗುವಿರಿ, ಪ್ರಯಾಣದಲ್ಲಿ ನಿರಾಸಕ್ತಿ, ಉದ್ಯೋಗ ಬದಲಾವಣೆ ಪ್ರಯತ್ನ,

**ಕನ್ಯಾ:** ಆಕಸ್ಮಿಕ ಧನಾಗಮನ, ಕುಟುಂಬದಿಂದ ಬೇಸರ, ಮಾತಿನಿಂದ ಸಮಸ್ಯೆ, ಪ್ರಯಾಣದಲ್ಲಿ ಅಡೆತಡೆ.

**ತುಲಾ:** ಜಿಗುಪ್ಸೆ ಮತ್ತು ಬೇಸರ, ಸಂಗಾತಿಯಿಂದ ಸಮಸ್ಯೆ, ಆಪತ್ತಿನಿಂದ ರಕ್ಷಣೆ, ವ್ಯವಹಾರದಲ್ಲಿ ನಷ್ಟ. ಶತ್ರುಗಳು ಮಿತ್ರರಾಗುವರು.

**ವೃಶ್ಚಿಕ:** ದುಃಸ್ವಪ್ನಗಳು, ಮೋಜು-ಮಸ್ತಿಯಿಂದ ಸಮಸ್ಯೆ, ಸಂಗಾತಿಯಿಂದ ಅಂತರ, ಪಾಲುದಾರಿಕೆ ನಷ್ಟ.

**ಧನಸ್ಸು:** ಸಾಲ ತೀರಿಸುವ ಪ್ರಯತ್ನ, ಉದ್ಯೋಗ ಬಿಡುವ ಯೋಚನೆ, ಸೇವಕರಿಂದ ನಷ್ಟ,

**ಮಕರ:** ಪ್ರೀತಿ-ಪ್ರೇಮದಲ್ಲಿ ಸೋಲು, ಮೋಜು ಮಸ್ತಿಯಿಂದ ತೊಂದರೆ, ಬಾಲಗ್ರಹ ದೋಷಗಳು, ಧರ್ಮ ಕಾರ್ಯಗಳು.

**ಕುಂಭ:** ಸ್ಥಿರಾಸ್ತಿ ವಾಹನದಿಂದ ನಷ್ಟ, ಮಾಟ ಮಂತ್ರದಿಂದ ತೊಂದರೆ, ದೃಷ್ಟಿ ದೋಷಗಳು,

**ಮೀನ:** ಪ್ರಯಾಣದಲ್ಲಿ ನಿರಾಸಕ್ತಿ, ಭಯ ಗಾಬರಿ ಆತಂಕ, ಆಕಸ್ಮಿಕ ಅವಘಡಗಳು, ಆರ್ಥಿಕ ಹಿನ್ನಡೆ.

## ವಿಶ್ವಕ್ವಾರ್ಕ್ ದಿನ




ಜನವರಿ 19 ರಂದು, ಕ್ವಾರ್ಕ್ ಎಂದು ಕರೆಯಲ್ಪಡುವ ರುಚಿಕರವಾದ ಚೀಸ್ ಅನ್ನು ಆಚರಿಸಲು ವಿಶೇಷ ದಿನವನ್ನು ನಿಗದಿಪಡಿಸಲಾಗಿದೆ – ಕೆಲವೊಮ್ಮೆ ಇದನ್ನು 'ಕ್ವಾರ್ಗ್' ಎಂದು ಉಚ್ಚರಿಸಲಾಗುತ್ತದೆ. ಇದು ಸೌಮ್ಯ, ಕೆನೆ ಮತ್ತು ಸಾಮಾನ್ಯ ಚೀಸ್ಗಿಂತ ನಿಮ್ಮ ಆರೋಗ್ಯಕ್ಕೆ ಉತ್ತಮವಾಗಿದೆ, ಆದ್ದರಿಂದ ಯಾವುದು ಇಷ್ಟವಾಗುವುದಿಲ್ಲ ಕ್ವಾರ್ಕ್ ವಿಸ್ಮಯಕಾರಿಯಾಗಿ ಬಹುಮುಖ ಆಹಾರ ಮತ್ತು ಘಟಕಾಂಶವಾಗಿದೆ, ಇದನ್ನು ನೀವು ಚೀಸ್ ಬದಲಿಗೆ ಸಿಹಿ ಮತ್ತು ಖಾರದ ಪಾಕವಿಧಾನಗಳಲ್ಲಿ ಎಸೆಯಬಹುದು. ಇದು ಎಲ್ಲದರ ಜೊತೆಗೆ ಚೆನ್ನಾಗಿ ಹೋಗುತ್ತದೆ ಮತ್ತು ತನ್ನದೇ ಆದ ಮೇಲೆ ತಿನ್ನಲು ಸಂಪೂರ್ಣವಾಗಿ ರುಚಿಕರವಾಗಿರುತ್ತದೆ. ಕ್ವಾರ್ಕ್, ಅಥವಾ ಕ್ವಾರ್ಗ್, 'ಮೊಸರು ಚೀಸ್' ಎಂದು ಅನುವಾದಿಸುತ್ತದೆ. ನೀವು ಯುರೋಪಿನ ಯಾವ ಭಾಗದಲ್ಲಿರುವಿರಿ ಎಂಬುದರ ಆಧಾರದ ಮೇಲೆ, ಅದನ್ನು ಚೀಸ್ ಎಂದು ಪರಿಗಣಿಸಲಾಗುವುದಿಲ್ಲ. ಕ್ವಾರ್ಕ್ ಅನ್ನು ಏನು ಕರೆಯಲಾಗಿದ್ದರೂ, ಕ್ವಾರ್ಕ್ ಸೌಮ್ಯ, ಕೆನೆ ಮತ್ತು ರುಚಿಕರವಾದ ಚೀಸ್ ತರಹದ ಆಹಾರವಾಗಿದೆ. ಸುವಾಸನೆ ಮತ್ತು ವಿನ್ಯಾಸವು ಫ್ರಾನ್ಸ್‌ನ ಫ್ರೊಮೇಜ್ ಬ್ಲಾಂಕ್ ಅಥವಾ ಭಾರತದ ಪನೀರ್ಗೆ ಹೋಲುತ್ತದೆ. ಆದರೆ ಮೊಸರು ಬಳಸುವ ದಕ್ಷಿಣ ಏಷ್ಯಾದ ಚೀಸ್ಗಳಿಗಿಂತ ಭಿನ್ನವಾಗಿ, ಕ್ವಾರ್ಕ್ ಅನ್ನು ಹುಳಿ ಹಾಲಿನಿಂದ ತಯಾರಿಸಲಾಗುತ್ತದೆ ಮತ್ತು ಹುದುಗಿಸಲಾಗುತ್ತದೆ. ಕ್ವಾರ್ಕ್ನ ಕೆಲವು ಸಿದ್ಧತೆಗಳು 40% ವರೆಗೆ ಕೊಬ್ಬಿನ ಅಂಶವನ್ನು ಹೊಂದಿರಬಹುದು, ಹೆಚ್ಚಿನ ಭಾಗಕ್ಕೆ, ಕ್ವಾರ್ಕ್ ಸುಮಾರು 10% ನಷ್ಟು ಕಡಿಮೆ-ಕೊಬ್ಬಿನ ಶೇಕಡಾವಾರು ಪ್ರಮಾಣವನ್ನು ಹೊಂದಿರುತ್ತದೆ. ಈ ಕಡಿಮೆ-ಕೊಬ್ಬಿನ ಅಂಶವು ಸಾಮಾನ್ಯ ಅಮೇರಿಕನ್ ಚೀಸ್ ಹರಡುವಿಕೆಗೆ ನಂಬಲಾಗದಷ್ಟು ಆರೋಗ್ಯಕರ ಬದಲಿಯಾಗಿ ಮಾಡುತ್ತದೆ. ಸಸ್ಯಾಹಾರಿಗಳಿಗೆ ಪ್ರೋಟೀನ್ನ ಅದ್ಭುತ ಮೂಲವಾದ ಕ್ವಾರ್ಕ್ನ ಉಳಿದ ಭಾಗವನ್ನು ಪ್ರೋಟೀನ್ ಮಾಡುತ್ತದೆ. ಇದು ಪ್ರತಿ ದ್ರವ್ಯರಾಶಿಗೆ ಸುಮಾರು 3.5% ಪ್ರೋಟೀನ್ ಅನ್ನು ಹೊಂದಿದೆ, ಇದು ಗ್ರೀಕ್ ಮೊಸರಿನಲ್ಲಿರುವ ಪ್ರೋಟೀನ್ನ ದ್ವಿಗುಣವಾಗಿದೆ.

ಕ್ವಾರ್ಕ್ ರಾಣಿ ಜರ್ಮನ್ ಮಹಿಳೆಯಾಗಿದ್ದು, ಅವರ ಹೆಸರು ತಿಳಿದಿಲ್ಲ. ಅವಳು ಬವೇರಿಯಾದಲ್ಲಿ ವಾಸಿಸುತ್ತಾಳೆ ಮತ್ತು ಕ್ವಾರ್ಕ್ ಉತ್ಸಾಹಿ. ಆರೋಗ್ಯಕರ ಆಹಾರ ಮತ್ತು ಉತ್ತಮ ಆಹಾರ ಪದ್ಧತಿಯ ದೊಡ್ಡ ಅಭಿಮಾನಿ, ಕ್ವಾರ್ಕ್ ರಾಣಿ ವಿಶ್ವ ಕ್ವಾರ್ಕ್ ದಿನವನ್ನು ಆಚರಿಸಲು ನಿರ್ಧರಿಸಿದರು, ಇದರಿಂದಾಗಿ ಹೆಚ್ಚಿನ ಜನರು ಈ ಯುರೋಪಿಯನ್ ಸೂಪರ್ಫುಡ್ ಬಗ್ಗೆ ತಿಳಿದುಕೊಳ್ಳಬಹುದು. ಅವರು ಅನೇಕ ಪಾಕವಿಧಾನಗಳೊಂದಿಗೆ ಅಡುಗೆ ಪುಸ್ತಕವನ್ನು ಬರೆದಿದ್ದಾರೆ ಮತ್ತು ಅಮೆರಿಕದೊಂದಿಗೆ ಕ್ವಾರ್ಕ್ನ ಪ್ರೀತಿಯನ್ನು ಆಚರಿಸಲು ಮತ್ತು ಹಂಚಿಕೊಳ್ಳಲು ನ್ಯೂಯಾರ್ಕ್ ಫಾರ್ಮ್ನೊಂದಿಗೆ ಸೇರಿಕೊಂಡರು.

# 2024ರಲ್ಲಿಯೂ ಪ್ರಬಲ ಬ್ರ್ಯಾಂಡ್ ಆಗಿ ಮುಂದುವರಿದ ಜಿಯೋ

**ನವದೆಹಲಿ:** ಮುಕೇಶ್ ಅಂಬಾನಿ ನಾಯಕತ್ವದ ರಿಲಯನ್ಸ್‌ನ ಟೆಲಿಕಾಂ ಮತ್ತು ಡಿಜಿಟಲ್ ಅಂಗವಾದ ಜಿಯೋ ಭಾರತದ ಪ್ರಬಲ ಬ್ರ್ಯಾಂಡ್ ಮುಂದುವರಿದಿದೆ. ಅದರ ನಂತರದ ಸ್ಥಾನದಲ್ಲಿ ಲೈಫ್ ಇನ್ಶೂರೆನ್ಸ್ ಕಾರ್ಪೊರೇಷನ್ (ಎಲ್‌ಐಸಿ), ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಂಥದ್ದು ಇದೆ. ಈ ಬಗ್ಗೆ ಇತ್ತೀಚಿನ ವರದಿ 'ಗ್ಲೋಬಲ್- 500 2024' ಎಂಬುದನ್ನು ಬ್ರ್ಯಾಂಡ್ ಫೈನಾನ್ಸ್ ಪ್ರಕಟಿಸಿದೆ.

ಬ್ರ್ಯಾಂಡ್ ಫೈನಾನ್ಸ್‌ನ 2023ರ ಶ್ರೇಯಾಂಕದಲ್ಲಿಯೂ ರಿಲಯನ್ಸ್ ಜಿಯೋ ಭಾರತದ ಪ್ರಬಲ ಬ್ರ್ಯಾಂಡ್‌ಗಳಲ್ಲಿ ಅಗ್ರಸ್ಥಾನದಲ್ಲಿತ್ತು. 2024ರ ಪಟ್ಟಿಯಲ್ಲಿ ವೀಚಾಟ್, ಯೂಟ್ಯೂಬ್, ಗೂಗಲ್, ಡೆಲಾಯಿಟ್, ಕೋಕಾ ಕೋಲಾ ಮತ್ತು ನೆಟ್ ಫ್ಲಿಕ್ಸ್ ಈ ಎಲ್ಲವೂ ವಿಶ್ವದ ಪ್ರಮುಖ ಬ್ರ್ಯಾಂಡ್‌ಗಳಲ್ಲಿ ಮುಂಚೂಣಿಯಲ್ಲಿ ಇದ್ದು, ಇವುಗಳ ಸಾಲಿನಲ್ಲಿ ಇರುವಂಥ ಜಿಯೋ ಹದಿನೇಳನೇ ಸ್ಥಾನದಲ್ಲಿದೆ. ಅಂದಹಾಗೆ ಜಿಯೋದ ಬ್ರ್ಯಾಂಡ್ ಸಾಮರ್ಥ್ಯ ಸೂಚ್ಯಂಕ 88.9 ಇದೆ.




ಜಾಗತಿಕ ಮಟ್ಟದಲ್ಲಿ ಲೈಫ್ ಇನ್ಶೂರೆನ್ಸ್ ಕಾರ್ಪೊರೇಷನ್ 23ನೇ ಸ್ಥಾನದಲ್ಲಿದಲ್ಲಿದ್ದರೆ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ 24ನೇ ಸ್ಥಾನದಲ್ಲಿದೆ. ಇವು ಇವೈ (ಇಜ), ಮತ್ತು ಇನ್ ಸ್ಟಾಗ್ರಾಮ್ ನಂಥ ನಂತಹ ಬ್ರ್ಯಾಂಡ್‌ಗಳಿಗಿಂತ ಮುಂದಿವೆ.

''ಹಾಗೆ ನೋಡಿದರೆ ದೂರಸಂಪರ್ಕ ವಲಯದಲ್ಲಿ ಜಿಯೋ ಹೊಸದಾಗಿ ಪ್ರವೇಶಿಸಿದ್ದು, ಬ್ರ್ಯಾಂಡ್ ಮೌಲ್ಯದಲ್ಲಿ ಗಮನಾರ್ಹವಾದ ಶೇ 14ರಷ್ಟು ಹೆಚ್ಚಳದೊಂದಿಗೆ 6.1 ಶತಕೋಟಿ ಯುಎಸ್ ಡಿಗೆ ತಲುಪಿ, ಪ್ರಬಲ ಬ್ರ್ಯಾಂಡ್ ಆಗಿ ಹೊರಹೊಮ್ಮಿದೆ. ಜೊತೆಗೆ ಹೆಚ್ಚಿನ ಬ್ರ್ಯಾಂಡ್ ಸಾಮರ್ಥ್ಯ ಸೂಚ್ಯಂಕ ಸ್ಕೋರ್ 89.0 ಮತ್ತು ಸಂಬಂಧಿತ ಎಎಎ (೦೦೦) ಬ್ರ್ಯಾಂಡ್ ರೇಟಿಂಗ್ ಕೂಡ ಪಡೆದಿದೆ,'' ಎಂದು ವರದಿ ಹೇಳಿದೆ.

ಟೆಲಿಕಾಂ ಉದ್ಯಮದಲ್ಲಿ ಜಿಯೋದ ಈ ಅಮೋಘ ಏರಿಕೆಯು ರಿಲಯನ್ಸ್ ಇಂಡಸ್ಟ್ರೀಸ್ ಸಮೂಹದಿಂದ ಮಾಡಿರುವಂಥ ಗಣನೀಯ ಬ್ರ್ಯಾಂಡ್ ಹೂಡಿಕೆಯಿಂದ ಪ್ರಯೋಜನ ಪಡೆಯುತ್ತಿದೆ, ಇದರ ಜತೆಗೆ ಬಹಳ ವೇಗವಾಗಿ ಗ್ರಾಹಕ ನೆಲೆಯಲ್ಲಿ ಬೆಳವಣಿಗೆ ಮತ್ತು ಆದಾಯದ ಬೆಳವಣಿಗೆಯನ್ನು ನೀಡುತ್ತಿದೆ.ಬ್ರ್ಯಾಂಡ್‌ಗೆ ಸಂಬಂಧಿಸಿದಂತೆ ಹೆಚ್ಚಿನ ಬ್ರ್ಯಾಂಡ್ ಸಾಮರ್ಥ್ಯದ ಸೂಚ್ಯಂಕ ಮತ್ತು ಎಎಎ ರೇಟಿಂಗ್ ಇವೆಲ್ಲ ಅದರ ಗ್ರಾಹಕ ನೆಲೆಯ ವೇಗವಾದ ಬೆಳವಣಿಗೆ, ಮಾರುಕಟ್ಟೆ ನಾವೀನ್ಯತೆ ಮತ್ತು ಪ್ರಬಲವಾದ ಬ್ರ್ಯಾಂಡ್ ಆಲೋಚನೆಯಲ್ಲಿ ಪ್ರತಿಬಿಂಬಿಸುತ್ತದೆ.

ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್ (ಟಿಸಿಎಸ್), ಟಾಟಾ ಸ್ಟೀಲ್, ಟಾಟಾ ಮೋಟಾರ್ಸ್ ಮತ್ತು ತಾಜ್ ಹೋಟೇಲ್‌ಗಳಂತಹ ಕಂಪನಿಗಳೊಂದಿಗೆ ವೈವಿಧ್ಯಮಯ ಪೋರ್ಟ್ ಫೋಲಿಯೋ ಹೊಂದಿರುವ ಟಾಟಾ ಸಮೂಹವಯ ದಕ್ಷಿಣ ಏಷ್ಯಾದ ಅತ್ಯಮೂಲ್ಯ ಬ್ರ್ಯಾಂಡ್ ಆಗಿದೆ ಎಂದು ವರದಿ ಹೇಳಿದೆ.

## ಹರಣಿ ಸರೋವರದಲ್ಲಿ ದೋಣಿ ಮುಳುಗಿ 12 ಮಂದಿ ಸಾವು

**ಅಹಮದಾಬಾದ್:** ಗುಜರಾತ್‌ನ ವಡೋದರಾದ ಹರಣಿ ಸರೋವರದಲ್ಲಿ ದೋಣಿ ಮುಳುಗಿ 12 ಶಾಲಾ ಮಕ್ಕಳು ಮತ್ತು ಇಬ್ಬರು ಶಿಕ್ಷಕರು ಸೇರಿದಂತೆ ಒಟ್ಟು 14 ಜನ ಸಾವನ್ನಪ್ಪಿರುವ ದಾರುಣ ಘಟನೆ ಗುರುವಾರ ನಡೆದಿದೆ.

ದೋಣಿಯಲ್ಲಿ ನ್ಯೂ ಸನ್ ರೈಸ್ ಶಾಲೆಯ 27 ವಿದ್ಯಾರ್ಥಿಗಳು ಪ್ರಯಾಣಿಸುತ್ತಿದ್ದರು ಮತ್ತು ಅವರಲ್ಲಿ ಯಾರೂ ಲೈಫ್ ಜಾಕೆಟ್‌ಗಳನ್ನು ಧರಿಸಿರಲಿಲ್ಲ ಎಂದು ವರದಿಯಾಗಿದೆ.

ಉಳಿದ ವಿದ್ಯಾರ್ಥಿಗಳ ಪತ್ತೆಗೆ ಶೋಧ ಕಾರ್ಯ ನಡೆಯುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದೋಣಿ ಮುಳುಗಿ ಆರು ವಿದ್ಯಾರ್ಥಿಗಳು ಮೃತಪಟ್ಟಿರುವುದನ್ನು ಗುಜರಾತ್ ಶಿಕ್ಷಣ ಸಚಿವ ಕುಬೇರ್ ದಿಂಡೋರ್ ಅವರು ಖಚಿತಪಡಿಸಿದ್ದಾರೆ.

ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ(ಎನ್‌ಡಿಆರ್‌ಎಫ್) ಮತ್ತು ಅಗ್ನಿಶಾಮಕ ಸಿಬ್ಬಂದಿ ರಕ್ಷಣಾ ಕಾರ್ಯ ನಡೆಸುತ್ತಿದ್ದು, ಹಲವು ಹಿರಿಯ ಅಧಿಕಾರಿಗಳು ಸ್ಥಳದಲ್ಲಿದ್ದಾರೆ ಎಂದು ಸಚಿವರು ತಿಳಿಸಿದ್ದಾರೆ.

ದೋಣಿಯಲ್ಲಿ 27 ಮಕ್ಕಳಿದ್ದರು, ನಾವು ಇತರರನ್ನು ಪತ್ತೆಹಚ್ಚಲು ಮತ್ತು ರಕ್ಷಿಸಲು ಪ್ರಯತ್ನಿಸುತ್ತಿದ್ದೇವೆ ಎಂದು ವಡೋದರಾ ಜಿಲ್ಲಾಧಿಕಾರಿ ಎಬಿ ಗೋರ್ ಅವರು ಹೇಳಿದ್ದಾರೆ.

ಏತನ್ಮಧ್ಯೆ, ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ದುರಂತದ ನಂತರ ಸಂತಾಪ ಸೂಚಿಸಿದ್ದು, ಪ್ರಾಣ ಕಳೆದುಕೊಂಡ ಅಮಾಯಕ ಮಕ್ಕಳ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಪ್ರಾರ್ಥಿಸುತ್ತೇನೆ. ಈ ದುಃಖದ ಸಮಯದಲ್ಲಿ ಅವರ ಕುಟುಂಬಕ್ಕೆ ನನ್ನ ಆಳವಾದ ಸಂತಾಪಗಳು. ದೇವರು ಅವರಿಗೆ ದುಃಖವನ್ನು ಸಹಿಸುವ ಶಕ್ತಿ ನೀಡಲಿ ಎಂದು ಟ್ವೀಟ್ ಮಾಡಿದ್ದಾರೆ.



## ಡಿಎಂಕೆ ರಾಮಮಂದಿರದ ವಿರೋಧಿಯಲ್ಲ

**ಚೆನ್ನೈ:** ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣ ಮಾಡುವುದನ್ನು ಡಿಎಂಕೆ ವಿರೋಧಿಸುವುದಿಲ್ಲ ಆದರೆ ಮಸೀದಿ ಕೆಡವಿ ನಂತರ ದೇವಾಲಯವನ್ನು ನಿರ್ಮಿಸುವುದನ್ನು ಒಪ್ಪಲಾಗದು ತಮಿಳು ನಾಡು ಸಚಿವ ಉದಯನಿಧಿ ಸ್ಟಾಲಿನ್ ಹೇಳಿದ್ದಾರೆ.

ಚೆನ್ನೈನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, , ಡಿಎಂಕೆ ಯಾವುದೇ ನಂಬಿಕೆ ಅಥವಾ ಧರ್ಮವನ್ನು ವಿರೋಧಿಸುವುದಿಲ್ಲ, ಆದರೆ ಮಸೀದಿ ಕೆಡವಿ ಮಂದಿರ ಕಟ್ಟುವುದನ್ನು ನಾವು ಒಪ್ಪುವುದಿಲ್ಲ ಎಂದಿದ್ದಾರೆ.

ಡಿಎಂಕೆ ಯಾವುದೇ ನಂಬಿಕೆ ಅಥವಾ ಧರ್ಮವನ್ನು ವಿರೋಧಿಸುವುದಿಲ್ಲ ಎಂದು ಕರುಣಾನಿಧಿ ಅವರು ಯಾವಾಗಲೂ ಹೇಳುತ್ತಿದ್ದರು, ಮಂದಿರ ಕಟ್ಟುವುದು ಸಮಸ್ಯೆಯಲ್ಲ, ಆದರೆ ಮಸೀದಿ ಕೆಡವಿ ಅಲ್ಲಿ ಮಂದಿರ ನಿರ್ಮಿಸುವುದನ್ನು ನಾವು ಒಪ್ಪುವುದಿಲ್ಲ, ಆಧ್ಯಾತ್ಮಿಕತೆ ಮತ್ತು ರಾಜಕೀಯವನ್ನು ಬೆರೆಸಬೇಡಿ ಎಂದು ಉದಯನಿಧಿ ತಿಳಿಸಿದ್ದಾರೆ.

1992 ರಲ್ಲಿ ಬಾಬರಿ ಮಸೀದಿ ಧ್ವಂಸವನ್ನು ಉಲ್ಲೇಖಿಸಿದ ಉದಯನಿಧಿ ಸ್ಟಾಲಿನ್ ಅಲ್ಲಿ ದೇವಸ್ಥಾನ ಬರುವುದರಿಂದ ನಮಗೆ ಸಮಸ್ಯೆ ಇಲ್ಲ. ಮಸೀದಿ ಕೆಡವಿದ ನಂತರ ಮಂದಿರ ನಿರ್ಮಾಣಕ್ಕೆ ನಾವು ಒಪ್ಪುವುದಿಲ್ಲ ಎಂದು ಹೇಳಿದರು. ಅಯೋಧ್ಯೆಯ ರಾಮ ಜನ್ಮಭೂಮಿಯಲ್ಲಿರುವ ಭವ್ಯ ಮಂದಿರದ ಶಂಕುಸ್ಥಾಪನೆ ಜನವರಿ 22 ರಂದು ನಡೆಯಲಿದೆ.

### ಅಯೋಧ್ಯೆ ರಾಮ ಮಂದಿರ ಉದ್ಘಾಟನೆ

## ರಾಮಲಲ್ಲಾ ವಿಗ್ರಹ ಪ್ರತಿಷ್ಠಾಪನೆ

**ಅಯೋಧ್ಯೆ:** ಅಯೋಧ್ಯೆ ರಾಮ ಮಂದಿರದ ಗರ್ಭಗೃಹದಲ್ಲಿ ಇರಿಸಲಾದ ರಾಮ್ ಲಲ್ಲಾನ ವಿಗ್ರಹದ ಮೊದಲ ಚಿತ್ರಗಳು ಹೊರಬಂದಿವೆ. 51 ಇಂಚಿನ ರಾಮ್ ಲಲ್ಲಾ ವಿಗ್ರಹವನ್ನು ಬಿಳಿ ಬಟ್ಟೆಯಲ್ಲಿ ಸುತ್ತಿ ನಿಲ್ಲಿಸಿರುವ ಭಂಗಿಯಲ್ಲಿ ಕಾಣಬಹುದು. ರಾಮ್ ಲಲ್ಲಾ ವಿಗ್ರಹವು 150 ಕೆಜಿಗಿಂತ ಹೆಚ್ಚು ತೂಕವಿದ್ದು, ಇದನ್ನು ಮೈಸೂರಿನ ಖ್ಯಾತ ಶಿಲ್ಪಿ ಅರುಣ್ ಯೋಗಿರಾಜ್ ಕೆತ್ತಿದ್ದಾರೆ.

ಭಗವಾನ್ ರಾಮ ಮತ್ತು ಅವರ ಸಹೋದರರ ಮೂಲ ವಿಗ್ರಹಗಳನ್ನು ಗರ್ಭಗುಡಿಯೊಳಗಿನ ಹೊಸ ವಿಗ್ರಹ ಅಥವಾ ಜನವರಿ 22 ರ ಸಮಾರಂಭದ ಮೊದಲು 'ಗರ್ಭಗೃಹ'ದ ಮುಂದೆ ಸ್ಥಾಪಿಸಲಾಗುವುದು. 1949 ರಿಂದ ಪೂಜಿಸಲ್ಪಡುತ್ತಿರುವ ಮೂಲ ವಿಗ್ರಹಗಳನ್ನು ಪ್ರಸ್ತುತ ಆವರಣದೊಳಗೆ ನಿರ್ಮಿಸಲಾದ ದೇವಾಲಯದಲ್ಲಿ ಇರಿಸಲಾಗಿದೆ. ಜನವರಿ 22 ರ 'ಪ್ರಾಣ ಪ್ರತಿಷ್ಠಾನ' ಸಮಾರಂಭದ ಮೊದಲು ಹೊಸ ದೇವಾಲಯಕ್ಕೆ ಸ್ಥಳಾಂತರಿಸಲಾಗುತ್ತದೆ.

ನಿನ್ನೆ ಮಧ್ಯಾಹ್ನ ಪ್ರಾರ್ಥನೆಯ ಪಠಣಗಳ ನಡುವೆ ರಾಮ್ ಲಲ್ಲಾ ಮೂರ್ತಿಯನ್ನು ಗರ್ಭಗುಡಿಯಲ್ಲಿ ಇರಿಸಲಾಯಿತು ಎಂದು ಪವಿತ್ರೀಕರಣ ಸಮಾರಂಭಕ್ಕೆ ಸಂಬಂಧಿಸಿದ ಅರ್ಚಕ ಅರುಣ್ ದೀಕ್ಷಿತ್ ಸುದ್ದಿ ಸಂಸ್ಥೆಗಳಿಗೆ ತಿಳಿಸಿದ್ದಾರೆ. ರಾಮ ಜನ್ಮಭೂಮಿ ತೀರ್ಥ ಕ್ಷೇತ್ರದ ಸದಸ್ಯರು ಕೂಡ ಪ್ರಾರ್ಥನೆಯಲ್ಲಿ ಭಾಗವಹಿಸಿದ್ದರು ಎಂದು ವಿಶ್ವ ಹಿಂದೂ ಪರಿಷತ್ (ಗಿಊಕ) ಹೇಳಿದೆ.

ಟ್ರಸ್ಟ್‌ನ ಸದಸ್ಯ ಅನಿಲ್ ಮಿಶ್ರಾ ಅವರು 'ಪ್ರಧಾನ ಸಂಕಲ್ಪ'ವನ್ನು ನಡೆಸಿದರು. ಪ್ರಧಾನ ಸಂಕಲ್ಪದ ಹಿಂದಿನ ಕಲ್ಪನೆಯೆಂದರೆ, ಭಗವಾನ್ ರಾಮನ 'ಪ್ರತಿಷ್ಠೆ'ಯನ್ನು ಎಲ್ಲರ ಕಲ್ಯಾಣಕ್ಕಾಗಿ, ರಾಷ್ಟ್ರದ ಕಲ್ಯಾಣಕ್ಕಾಗಿ, ಮಾನವೀಯತೆಯ ಕಲ್ಯಾಣಕ್ಕಾಗಿ ಮತ್ತು ಈ ಕೆಲಸಕ್ಕೆ ಕೊಡುಗೆ ನೀಡಿದವರಿಗಾಗಿ ಮಾಡಲಾಗುತ್ತಿದೆ ಎಂದು ದೀಕ್ಷಿತ್ ಹೇಳಿದರು.

ಪ್ರಧಾನಿ ನರೇಂದ್ರ ಮೋದಿ ಅವರು ಜನವರಿ 22 ರಂದು ರಾಮಮಂದಿರದಲ್ಲಿ 'ಪ್ರಾಣ ಪ್ರತಿಷ್ಠಾ' ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ, ಅಂದು ಅಯೋಧ್ಯೆಗೆ ಭೇಟಿ ನೀಡದಂತೆ ಸಾರ್ವಜನಿಕರಿಗೆ ಮನವಿ ಮಾಡಿದ್ದಾರೆ. ಬದಲಾಗಿ, ಜನವರಿ 23 ರಿಂದ ಸಾರ್ವಜನಿಕರಿಗೆ ದೇವಸ್ಥಾನವನ್ನು ತೆರೆಯುವ ನಂತರ ಎಲ್ಲರೂ ಭೇಟಿ ನೀಡುವಂತೆ ಅವರು ಸಾರ್ವಜನಿಕರನ್ನು ಕೇಳಿಕೊಂಡಿದ್ದಾರೆ.



### ಜರ್ಮನ್ ಯುವತಿಯ ರೀಲ್ಸ್ ಶೇರ್ ಮಾಡಿದ ಮೋದಿ



**ದೆಹಲಿ:** ಅಯೋಧ್ಯೆ ರಾಮಮಂದಿರ ಇನ್ನೇನು ನಾಲ್ಕು ದಿನಗಳಲ್ಲಿ ಲೋಕಾರ್ಪಣೆಗೊಳ್ಳಲಿದೆ. ಇದರ ಬೆನ್ನಲ್ಲೇ ರಾಮನ ಬಗ್ಗೆ ಹಾಡು ಹಾಡಿದ ಜರ್ಮನ್ನ ಯುವತಿಯೊಬ್ಬರ ರೀಲ್ಸ್ ಅನ್ನು ಪ್ರಧಾನಿಯವರು ಶೇರ್ ಮಾಡಿದ್ದಾರೆ. ಪ್ರಧಾನಿ ಮೋದಿಯವರು ತಮ್ಮ ಎಕ್ಸ್ ಅಕೌಂಟ್ನಲ್ಲಿ ಜರ್ಮನ್ ಸಿಂಗರ್ ಆಗಿರುವ ಕಸ್ಸಂದ್ರ ಮೇ ಸ್ಪಿಟ್ಮನ್ ಎನ್ನುವರ ರೀಲ್ಸ್ ಶೇರ್ ಮಾಡಿದ್ದಾರೆ. ನಾನು ಒಮ್ಮೆ ಮನ್ ಕೀ ಬಾತ್ನಲ್ಲಿ ಈ ಸಿಂಗರ್ ಬಗ್ಗೆ ಉಲ್ಲೇಖ ಮಾಡಿದ್ದೆ. ಅವರು ಹಾಡಿರುವ ರಾಮನ ಹಾಡು ತುಂಬಾ ಇಂಪಾಗಿದೆ. ಹಾಡನ್ನು ಕೇಳಿದಾಗ ಮನಸಿಗೆ ಆಹ್ಲಾದಕರ ಅನುಭವ ಆಗುತ್ತೆ ಎಂದು ಬರೆದುಕೊಂಡಿದ್ದಾರೆ. ಕಸ್ಸಂದ್ರ ಮೇ ಸ್ಪಿಟ್ಮನ್ 'ರಾಮ ಆಯೆಂಗೇ, ರಾಮ ಆಯೆಂಗೇ ತೊ ಅಂಗಾನಾ ಸಜವುಂಗಿ' ಎನ್ನುವ ಹಾಡನ್ನು ಹಾಡಿದ್ದಾರೆ. ಇನ್ನು ಪ್ರಧಾನಿ ಮೋದಿಯವರು 105ನೇ ಮನ್ ಕೀ ಬಾತ್ ಸಂಚಿಕೆಯಲ್ಲಿ ಈ ಸಿಂಗರ್ ಬಗ್ಗೆ ಉಲ್ಲೇಖ ಮಾಡಿದ್ದರು. ಸದ್ಯ ಇದೀಗ ರಾಮಮಂದಿರ ಉದ್ಘಾಟನೆ ಮುನ್ನವೇ ಮತ್ತೊಮ್ಮೆ ಕಸ್ಸಂದ್ರ ಮೇ ಸ್ಪಿಟ್ಮನ್ ಅವರ ಫೋಟೋ ಶೇರ್ ಮಾಡಿದ್ದಾರೆ. ಕಸ್ಸಂದ್ರ ಮೇ ಸ್ಪಿಟ್ಮನ್ ಅವರು ಕನ್ನಡ, ಹಿಂದಿ, ಉರ್ದು, ಅಸ್ಸಾಮಿ, ಮಲಯಾಳಂ, ತಮಿಳು, ಬಂಗಾಳಿ, ಸಂಸ್ಕೃತವನ್ನು ಚೆನ್ನಾಗಿ ಬಲ್ಲವರಾಗಿದ್ದಾರೆ.

## ಮಾಂಸ, ಮೀನು ಮಾರಾಟ ನಿಷೇಧ: ಯೋಗಿ

**ಲಕ್ನೋ:** ಜನವರಿ 22 ರಂದು ರಾಜ್ಯದಲ್ಲಿ ಮದ್ಯ, ಮಾಂಸ ಮತ್ತು ಮೀನು ಮಾರಾಟವನ್ನು ನಿಷೇಧಿಸುವುದಾಗಿ ಯೋಗಿ ಆದಿತ್ಯನಾಥ್ ನೇತೃತ್ವದ ಉತ್ತರ ಪ್ರದೇಶ ಸರ್ಕಾರ ಗುರುವಾರ ಘೋಷಿಸಿದೆ. ಮಧ್ಯಾಹ್ನ 12.20ಕ್ಕೆ 'ಪ್ರಾಣ ಪ್ರತಿಷ್ಠಾ' ಸಮಾರಂಭವನ್ನು ವಾರಣಾಸಿಯ ಅರ್ಚಕ ಲಕ್ಷ್ಮೀಕಾಂತ ದೀಕ್ಷಿತ್ ನೆರವೇರಿಸುವರು. ಸಮಾರಂಭವು ಜನವರಿ 22 ರಂದು ಮಧ್ಯಾಹ್ನ 1 ಗಂಟೆಗೆ ಮುಕ್ತಾಯಗೊಳ್ಳುವ ನಿರೀಕ್ಷೆಯಿದೆ. ಹೆಲಿಕಾಪ್ಟರ್ ಸೇವೆ: ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಅಯೋಧ್ಯಾ ಧಾಮಕ್ಕಾಗಿ ಮಹತ್ವದ ಉಪಕ್ರಮವನ್ನು ಅನಾವರಣಗೊಳಿಸಿದ್ದಾರೆ, ಭಗವಾನ್ ರಾಮನ ಭಕ್ತರಿಗೆ ಮತ್ತು ಪ್ರವಾಸಿಗರಿಗಾಗಿ ಹೆಲಿಕಾಪ್ಟರ್ ಸೇವೆಗಳನ್ನು ಪರಿಚಯಿಸಿದ್ದಾರೆ. ಯೋಗಿ ಸರ್ಕಾರದ ನೇತೃತ್ವದಲ್ಲಿ, ರಾಜ್ಯದ ಆರು ಜಿಲ್ಲೆಗಳಿಂದ ಹೆಲಿಕಾಪ್ಟರ್ ಸೇವೆಗೆ ಅನುಕೂಲವಾಗುವಂತೆ ಸಂಪೂರ್ಣ ಸಿದ್ಧತೆಗಳು ನಡೆಯುತ್ತಿವೆ. ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ 7,000 ಕ್ಕೂ ಹೆಚ್ಚು ಜನರನ್ನು ಸಮಾರಂಭಕ್ಕೆ ಆಹ್ವಾನಿಸಲಾಗಿದೆ.



## ಆ್ಯಂಟಿ ಬಯಾಟಿಕ್ ಬೇಕಾಬಿಟ್ಟಿ ಬಳಕೆಗೆ ಕೇಂದ್ರದ ಕಡಿವಾಣ

**ನವದೆಹಲಿ:** ಆ್ಯಂಟಿ ಬಯಾಟಿಕ್ಗಳನ್ನು ಬೇಕಾಬಿಟ್ಟಿ ಬಳಕೆ ಮಾಡುವುದರ ಬಗ್ಗೆ ಕೇಂದ್ರ ಸರ್ಕಾರ ಗುರುವಾರ ನಿಷೇಧ ಹೇರಿದೆ. ವೈದ್ಯರ ಪ್ರಿಸ್ಕಿಪ್ಶನ್ (ವೈದ್ಯರು ನೀಡುವ ಚೀಟಿ) ಇಲ್ಲದೆ ಔಷಧ ಮಳಿಗೆಗಳು ಕೆಲವೊಂದು ಆಯಂಟಿ ಬಯಾಟಿಕ್ಗಳನ್ನು ಮಾರಾಟ ಮಾಡುವಂತೆ ಇಲ್ಲ. ಜತೆಗೆ ವೈದ್ಯರೂ ಕೂಡ ಯಾವ ಕಾರಣಕ್ಕಾಗಿ ಅವುಗಳನ್ನು ನೀಡಲಾಗಿದೆ ಎಂಬ ಬಗ್ಗೆ ಕಾರಣಗಳನ್ನು ನೀಡಬೇಕು ಎಂದು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ವ್ಯಾಪ್ತಿಯ ಆರೋಗ್ಯ ಸೇವೆಗಳ ಮಹಾ ನಿರ್ದೇಶನಾಲಯ (ಡಿಜಿಎಚ್‌ಎಸ್) ಕಟ್ಟುನಿಟ್ಟಿನ ನಿಯಮಗಳನ್ನು ಹೇರಿದೆ. ಅಗತ್ಯ ಬಿದ್ದಲ್ಲಿ ವೈದ್ಯರು ನೀಡುವ ಪ್ರಿಸ್ಕಿಪ್ಶನ್ ಅನುಸಾರವಾಗಿಯೇ ಆಯಂಟಿ ಬಯಾಟಿಕ್ಗಳನ್ನು ನೀಡಬೇಕು ಎಂದು ಡಿಜಿಎಚ್‌ಎಸ್ ಸ್ಪಷ್ಟಪಡಿಸಿದೆ. ಇದರ ಜತೆಗೆ ವೈದ್ಯರು ಆಯಂಟಿ ಬಯಾಟಿಕ್ಗಳನ್ನು ನೀಡುವ ಸಂದರ್ಭದಲ್ಲಿ ಯಾವ ಕಾರಣಕ್ಕಾಗಿ ಅವುಗಳನ್ನು ನೀಡಲಾಗುತ್ತದೆ ಎಂಬುದನ್ನು ಪ್ರಿಸ್ಕಿಪ್ಶನ್ (ವೈದ್ಯರ ಚೀಟಿ)ನಲ್ಲಿ ನಮೂದಿಸಬೇಕು. ಜತೆಗೆ ಔಷಧ ಮಾರಾಟ ಮಾಡುವ ಮಳಿಗೆಗಳು ಕೂಡ ವೈದ್ಯರು ನೀಡುವ ಚೀಟಿಯ ಹೊರತಾಗಿ ಅಂಥ ಔಷಧಗಳನ್ನು ನೇರವಾಗಿ ಮಾರಾಟ ಮಾಡಲೇಬಾರದು ಎಂದು ದೇಶದ ಎಲ್ಲಾ ವೈದ್ಯಕೀಯ ಕಾಲೇಜುಗಳಿಗೆ, ವೈದ್ಯರ ಸಂಘಟನೆಗಳು, ಔಷಧ ಮಾರಾಟ ಮಾಡುವ ಮಳಿಗೆಗಳ ಒಕ್ಕೂಟಗಳಿಗೆ ಬರೆದಿರುವ ಪತ್ರದಲ್ಲಿ ಆರೋಗ್ಯ ಸೇವೆಗಳ ಮಹಾ ನಿರ್ದೇಶನಾಲಯ ಗುರುವಾರ ತಿಳಿಸಿದೆ.



## ರೈಲು ಡಿಕ್ಕಿ: ನಾಲ್ವರು ಸಾವು

**ರಾಂಚಿ:** ಜಾರ್ಖಂಡ್ ನ ಗಮರಿಯಾದಲ್ಲಿ ಉತ್ಕಲ್ ಎಕ್ಸ್ ಪ್ರೆಸ್ ರೈಲು ಡಿಕ್ಕಿ ಹೊಡೆದು ನಾಲ್ವರು ಸಾವನ್ನಪ್ಪಿದ್ದಾರೆ. ಜಾರ್ಖಂಡ್ ನ ಸೆರೈಕೆಲಾ-ಖಾರ್ಸ್ವಾನ್ ಜಿಲ್ಲೆಯ ಗಮಾರಿಯಾ ನಿಲ್ದಾಣದ ಬಳಿ ಗುರುವಾರ ಸಂಜೆ ನಡೆದ ಘಟನೆಯಲ್ಲಿ ಪುರಿಗೆ ಹೊರಟಿದ್ದ ಉತ್ಕಲ್ ಎಕ್ಸ್ ಪ್ರೆಸ್ ಗೆ ಡಿಕ್ಕಿ ಹೊಡೆದು ನಾಲ್ವರು ಪ್ರಾಣ ಕಳೆದುಕೊಂಡಿದ್ದಾರೆ. ಮೃತರು ಹತ್ತಿರದ ಸ್ಲಮ್ ನ ನಿವಾಸಿಗಳು. ಸರಿಸುಮಾರು ಸಂಜೆ 6:55 ಕ್ಕೆ ರೈಲ್ವೆ ಹಳಿಗಳನ್ನು ದಾಟುತ್ತಿದ್ದಾಗ ರೈಲು ಡಿಕ್ಕಿ ಹೊಡೆದಿದೆ. ಸ್ಥಳೀಯ ಪೊಲೀಸ್ ಮತ್ತು ರೈಲ್ವೇ ರಕ್ಷಣಾ ಪಡೆ(ಆರ್‌ಪಿಎಫ್) ತುರ್ತು ಸ್ಪಂದನಾ ತಂಡಗಳು ರಕ್ಷಣಾ ಕಾರ್ಯಾಚರಣೆ ಪ್ರಾರಂಭಿಸಿವೆ.

## ಚೀನಾದಲ್ಲಿ ಜನಸಂಖ್ಯೆ ಕುಸಿತ

**ಬೀಜಿಂಗ್:** ಜಗತ್ತಿಗೇ ಕೋವಿಡ್ ಸೋಂಕು ಹಬ್ಬಿಸಿ ವ್ಯವಸ್ಥೆಯನ್ನೇ ಬುಡಮೇಲು ಮಾಡಿದ ಚೀನ ಜನಸಂಖ್ಯೆ ಕುಸಿತವನ್ನು ಅನುಭವಿಸಿದೆ. ಸತತ ಎರಡನೇ ವರ್ಷ ಕೂಡ ಆ ದೇಶದ ಒಟ್ಟು ಜನಸಂಖ್ಯೆ 20 ಲಕ್ಷ ಕಡಿಮೆಯಾಗಿದೆ. ಆದರೆ 2022ಕ್ಕೆ ಹೋಲಿಸಿದರೆ, ಚೀನ ಆರ್ಥಿಕತೆ ಶೇ.5.2ರಷ್ಟು ವೃದ್ಧಿಯಾಗಿದೆ. ಕೋವಿಡ್ ಹಾವಳಿ ಹೆಚ್ಚಾಗಿದ್ದ ಸಂದರ್ಭದಲ್ಲಿ ಚೀನದಲ್ಲಿ ವಿಧಿಸಲಾಗಿದ್ದ ನಿರ್ಬಂಧಗಳನ್ನು ವಾಪಸ್ ಪಡೆದ ನಂತರವೂ ಜನಸಂಖ್ಯೆ ವೃದ್ಧಿಯಾಗುವಲ್ಲಿ ನೆರವಾಗಿಲ್ಲ. ಜನನ ಪ್ರಮಾಣಕ್ಕಿಂತಲೂ ಸಾವಿನ ಸಂಖ್ಯೆ ಹೆಚ್ಚಾಗಿದೆ. ಚೀನದಲ್ಲಿ ಕಳೆದ ವರ್ಷ 11.1 ಮಿಲಿಯನ್ ಮಂದಿ ಜನರು ಅಸುನೀಗಿದ್ದರು. 2022ರಲ್ಲಿ ಜನರ ಸಾವಿನ ಪ್ರಮಾಣ 10.41 ಮಿಲಿಯನ್ ಆಗಿತ್ತು. 1961ರ ಬಳಿಕ ಮೊದಲ ಬಾರಿಗೆ 2022ರಿಂದ ಡ್ರ್ಯಾಗನ್ ರಾಷ್ಟ್ರದಲ್ಲಿ ಜನಸಂಖ್ಯಾ ಪ್ರಮಾಣ ಕುಸಿತ ಶುರುವಾಗಿತ್ತು. ಸತತ ಏಳನೇ ವರ್ಷ ಜನನ ಪ್ರಮಾಣ ಕುಸಿತಗೊಂಡಿದೆ. ಸರ್ಕಾರದ ಪ್ರಕಾರ ಕಳೆದ ವರ್ಷ 9 ಮಿಲಿಯನ್ ಮಕ್ಕಳು ಜನಿಸಿದ್ದಾರೆ. 2016ಕ್ಕೆ ಹೋಲಿಕೆ ಮಾಡಿದರೆ ಇದು ಅರ್ಧದಷ್ಟಾಗಿದೆ. ಚೀನ ಈಗ ಪ್ರತಿ 1 ಸಾವಿರ ಮಂದಿಗೆ ಶೇ. 6.39 ಫಲವತ್ತತೆ ಹೊಂದಿದೆ.

## ಮಲೇಷ್ಯಾಗೆ ಹೊರಟಿದ ವಿಮಾನದ ಟೈರ್ ಸ್ಫೋಟ

**ಚೆನ್ನೈ:** ಮಲೇಷ್ಯಾಗೆ ಹೊರಡಬೇಕಿದ್ದ ವಿಮಾನದ ಟೈರ್ ಸ್ಫೋಟಗೊಂಡ ಘಟನೆ ತಮಿಳುನಾಡಿನ ಚೆನ್ನೈ ವಿಮಾನ ನಿಲ್ದಾಣದಲ್ಲಿ ನಡೆದಿದೆ. ಚೆನ್ನೈ ಏರ್ಪೋರ್ಟ್ನಿಂದ ಗುರುವಾರ ಬೆಳಗ್ಗೆ ಮಲೇಷ್ಯಾದ ಕೌಲಾಲಂಪುರಕ್ಕೆ ಹೊರಟಿದ್ದ ವಿಮಾನದಲ್ಲಿ 130 ಪ್ರಯಾಣಿಕರಿದ್ದರು. ಇನ್ನೇನು ವಿಮಾನ ಟೇಕಾಫ್ ಆಗಲು ಸಿದ್ಧತೆಯಲ್ಲಿರುವಾಗಲೇ ವಿಮಾನದ ಟೈರ್ ಸ್ಫೋಟಗೊಂಡಿದೆ. ಅದೃಷ್ಟವಶಾತ್, ಪ್ರಯಾಣಿಕರಿಗೆ ಯಾವುದೇ ರೀತಿಯ ತೊಂದರೆಯಾಗಿಲ್ಲ. ವಿಮಾನದ ಟೈರ್ ಸ್ಫೋಟಗೊಂಡ ಪರಿಣಾಮ ಒಂದು ಕ್ಷಣ ಎಲ್ಲ ಪ್ರಯಾಣಿಕರು ಬೆಚ್ಚಿಬಿದ್ದರು. ವಿಮಾನದ ಸಿಬ್ಬಂದಿ ನಿಧಾನವಾಗಿ ಪ್ರಯಾಣಿಕರನ್ನು ವಿಮಾನದಿಂದ ಕೆಳಗೆ ಇಳಿಸಿದ್ದು, ಬಳಿಕ ಅವರಿಗೆ ಉಳಿದುಕೊಳ್ಳಲು ಚೆನ್ನೈನ ಹಲವು ಹೊಟೇಲ್‌ಗಳಲ್ಲಿ ವ್ಯವಸ್ಥೆ ಮಾಡಲಾಯಿತು. ಪ್ರಯಾಣಿಕರಿಗೆ ಊಟ, ವಸತಿ ವ್ಯವಸ್ಥೆಯನ್ನು ವಿಮಾನಯಾನ ಸಂಸ್ಥೆಯೇ ವಹಿಸಿಕೊಂಡಿದೆ. ಟೈರ್ ಸ್ಫೋಟಗೊಂಡ ಕಾರಣ ವಿಮಾನವು ಜನವರಿ 19ರಂದು ಶುಕ್ರವಾರ ಬೆಳಗ್ಗೆ ಕೌಲಾಲಂಪುರಕ್ಕೆ ಹಾರಾಟ ನಡೆಸಲಿದೆ. ಮಲೇಷ್ಯಾ ವಿಮಾನದ ಟೈರ್ ಸ್ಫೋಟದಿಂದ ಬೇರೆ ವಿಮಾನಗಳ ಹಾರಾಟಕ್ಕೆ ಯಾವುದೇ ತೊಂದರೆಯಾಗಿಲ್ಲ ಎನ್ನಲಾಗಿದೆ.



## ಕೇಜ್ರಿವಾಲ್ ಅಬಕಾರಿ ಹಗರಣದ ಕಿಂಗ್‌ಪಿನ್

**ನವದೆಹಲಿ:** ಜಾರಿ ನಿರ್ದೇಶನಾಲಯದ ಸಮನ್ಸ್‌ಗಳನ್ನು ಪದೇ ಪದೇ ನಿರ್ಲಕ್ಷಿಸುತ್ತಿರುವ ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರನ್ನು ತರಾಟೆಗೆ ತೆಗೆದುಕೊಂಡಿರುವ ಬಿಜೆಪಿ, ಕೇಜ್ರಿವಾಲ್ ಆಪಾದಿತ ಅಬಕಾರಿ ಹಗರಣದ 'ಕಿಂಗ್‌ಪಿನ್' ಆಗಿರುವುದರಿಂದಲೇ ಅವರಿಗೆ ಬಂಧನದ ಭಯವಿದೆ ಎಂದು ಆರೋಪಿಸಿದೆ.

ಆಪಾದಿತ ದೆಹಲಿ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದಂತೆ ತನಿಖಾ ಸಂಸ್ಥೆ ನೀಡಿದ ನಾಲ್ಕನೇ ಸಮನ್ಸ್ ಅನ್ನು ಕೇಜ್ರಿವಾಲ್ ನಿರ್ಲಕ್ಷಿಸಿದ್ದಾರೆ. ಈ ಪ್ರಕರಣದಲ್ಲಿ ಕೇಜ್ರಿವಾಲ್ ಆರೋಪಿಯಲ್ಲದಿದ್ದರೆ ಅವರಿಗೆ ಏಕೆ ಸಮನ್ಸ್ ನೀಡಲಾಯಿತು ಎಂದು ಕೇಳಿದೆ.

ಪಕ್ಷದ ಪ್ರಧಾನ ಕಛೇರಿಯಲ್ಲಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಬಿಜೆಪಿ ರಾಷ್ಟ್ರೀಯ ವಕ್ತಾರ ಗೌರವ್ ಭಾಟಿಯಾ, ಕೇಜ್ರಿವಾಲ್ ಅವರು ಚಳಿಗಾಲದಲ್ಲೂ 'ಬೆವರು' ಮತ್ತು 'ಭಯದಿಂದ ನಡುಗುತ್ತಿದ್ದಾರೆ'. ಏಕೆಂದರೆ ಅವರು ಅಬಕಾರಿ ಕಿಂಗ್‌ಪಿನ್ ಎಂದು ತಿಳಿದಿರುವ ಕಾರಣ ಅವರ ಬಂಧನದ ನಿರೀಕ್ಷೆಯಲ್ಲಿ ಇಡಿ ಮುಂದೆ ಹಾಜರಾಗಲು ಹಿಂಜರಿಯುತ್ತಿದ್ದಾರೆ ಎಂದು ಆರೋಪಿಸಿದರು.ಕೇಜ್ರಿವಾಲ್‌ಗೆ ಇಡಿ ಸಮನ್ಸ್ ನೀಡಿರುವುದನ್ನು ಸಮರ್ಥಿಸಿಕೊಂಡಿರುವ ಭಾಟಿಯಾ, ಆಮ್ ಆದ್ಮಿ ಪಕ್ಷದ(ಎಎಪಿ) ರಾಷ್ಟ್ರೀಯ ಸಂಚಾಲಕರಾಗಿರುವ ಕೇಜ್ರಿವಾಲ್ ಅವರು ಸಮನ್ಸ್‌ಗಳನ್ನು ನಿರ್ಲಕ್ಷಿಸುತ್ತಿರುವ ಬದಲು ತನಿಖಾ ಸಂಸ್ಥೆಯ ಸಮನ್ಸ್‌ಗಳನ್ನು ಪ್ರಶ್ನಿಸಿ ನ್ಯಾಯಾಲಯವನ್ನು ಏಕೆ ಹೋಗುತ್ತಿಲ್ಲ ಎಂದು ಪ್ರಶ್ನಿಸಿದರು.

ಮದ್ಯದ ಹಗರಣದ ಕಿಂಗ್‌ಪಿನ್ ಕಂಬಿಗಳ ಹಿಂದೆ ಹೋಗುವುದು ಈಗ ಖಚಿತವಾಗಿದೆ ಎಂದು ಬಿಜೆಪಿ ವಕ್ತಾರರು ಹೇಳಿದ್ದಾರೆ.



## ಸಂಸತ್ ಭದ್ರತಾ ಲೋಪ: ಗಂಭೀರ ಆರೋಪ, ನೀಲಂ ಆಜಾದ್‌ಗೆ ಜಾಮೀನು ನಿರಾಕರಿಸಿದ ನ್ಯಾಯಾಲಯ

**ನವದೆಹಲಿ:** ಸಂಸತ್ತಿನ ಭದ್ರತಾ ಲೋಪ ಪ್ರಕರಣದಲ್ಲಿ ಬಂಧಿತರಾಗಿರುವ ನೀಲಂ ಆಜಾದ್ ಅವರ ಜಾಮೀನು ಅರ್ಜಿಯನ್ನು ದೆಹಲಿ ನ್ಯಾಯಾಲಯ ಗುರುವಾರ ವಜಾಗೊಳಿಸಿದೆ. ತನಿಖೆಯು ಆರಂಭಿಕ ಹಂತದಲ್ಲಿದ್ದು, ಅವರು ದೇಶದ ಸಾರ್ವಭೌಮತೆ ಮತ್ತು ಸಮಗ್ರತೆಯನ್ನು ಅಡ್ಡಿಪಡಿಸಲು ಪ್ರಯತ್ನಿಸುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.

ಈ ಪ್ರಕರಣದ ಎಫ್‌ಐಆರ್ ಅನ್ನು ಭಯೋತ್ಪಾದನಾ ವಿರೋಧಿ ಕಾನೂನು, ಕಾನೂನುಬಾಹಿರ ಚಟುವಟಿಕೆಗಳು (ತಡೆಗಟ್ಟುವಿಕೆ) ಕಾಯ್ದೆ ಮತ್ತು ಭಾರತೀಯ ದಂಡ ಸಂಹಿತೆಯ ವಿವಿಧ ವಿಭಾಗಗಳ ಅಡಿಯಲ್ಲಿ ದಾಖಲಿಸಲಾಗಿದೆ ಎಂದು ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಹರ್ದೀಪ್ ಕೌರ್ ಹೇಳಿದ್ದಾರೆ.

ಪ್ರಸ್ತುತ ಪ್ರಕರಣದ ತನಿಖೆಯು ಆರಂಭಿಕ ಹಂತದಲ್ಲಿದೆ. ಆರೋಪಿಯ ವಿರುದ್ಧದ ಆರೋಪಗಳು ಗಂಭೀರ ಸ್ವರೂಪದ್ದಾಗಿದೆ, ಏಕೆಂದರೆ ಆಕೆ ಇತರ ಸಹ-ಆರೋಪಿಗಳೊಂದಿಗೆ ಭಾರತದ ಸಾರ್ವಭೌಮತೆ ಮತ್ತು ಸಮಗ್ರತೆಯನ್ನು ಅಡ್ಡಿಪಡಿಸುವಲ್ಲಿ ಭಾಗಿಯಾಗಿದ್ದಾಳೆ. ತನಿಖೆ ಆರಂಭಿಕ ಹಂತದಲ್ಲಿರುವುದರಿಂದ ಜಾಮೀನು ನೀಡಲು ಸೂಕ್ತವಲ್ಲ ಎಂದರು.

ಅರ್ಜಿದಾರರ ವಿರುದ್ಧ ಹೊರಿಸಲಾದ ಆರೋಪಗಳ ಗಂಭೀರತೆ ಮತ್ತು ತನಿಖೆಯ ಆರಂಭಿಕ ಹಂತವನ್ನು ಪರಿಗಣಿಸಿ, ಜಾಮೀನಿನ ಮೇಲೆ ಆರೋಪಿ ಬಿಡುಗಡೆ ಮಾಡಲು ಸೂಕ್ತ ಪ್ರಕರಣವೆಂದು ನನಗೆ ಕಂಡುಬಂದಿಲ್ಲ. ಪ್ರಸ್ತುತ ಜಾಮೀನು ಅರ್ಜಿಯನ್ನು ವಜಾಗೊಳಿಸಲಾಗಿದೆ ಎಂದು ನ್ಯಾಯಾಧೀಶರು ಹೇಳಿದರು.



## ಮುಸ್ಲಿಂ ಯುವಕನ ಮನೆ ನೆಲಸಮ

**ಉಜ್ಜಯಿನಿ:** ಬಾಬಾ ಮಹಾಕಾಲ್ ಮೆರವಣಿಗೆ ಸಾಗುತ್ತಿದ್ದ ವೇಳೆ ಮನೆ ಮೇಲೆ ನಿಂತು ಎಂಜಲು ಉಗುಳಿದ್ದ 18 ವರ್ಷದ ಯುವಕ ಅದ್ನಾನ್ ಮನ್ಸೂರಿಯ ಮನೆಯನ್ನು ಕೆಡವಲಾಗಿದೆ.

151 ದಿನಗಳ ಕಾಲ ನ್ಯಾಯಾಂಗ ಬಂಧನದಲ್ಲಿದ್ದ ಅದ್ನಾನ್ ನ ಮನೆಯನ್ನು ಇದೀಗ ಬುಲ್ಡೋಜರ್ ನಿಂದ ನೆಲಸಮಗೊಳಿಸಲಾಗಿದೆ.

5 ತಿಂಗಳ ಜೈಲುವಾಸದ ಬಳಿಕ ಆತನಿಗೆ ಜಾಮೀನು ದೊರೆತಿದ್ದು, ಪ್ರತ್ಯಕ್ಷದರ್ಶಿ ಆತನನ್ನು ಗುರುತಿಸಲು ನಿರಾಕರಿಸಿದರು.

ಜುಲೈ 17ರಂದು ಉಜ್ಜಯಿನಿಯಲ್ಲಿ ಬಾಬಾ ಮಾಹಾಕಾಲ್ ಮೆರವಣಿಗೆ ಸಾಗುತ್ತಿದ್ದ ವೇಳೆ ಮೇಲಿನಿಂದ ಯಾರೋ ಉಗುಳಿದ್ದಾರೆಂದು ಭಕ್ತರು ದೂರಿದ್ದರು. ಅಶ್ರಫ್ ಹುಸೇನ್ ರ ಇಬ್ಬರು ಮಕ್ಕಳು ಮತ್ತು ಇತರರು ಛಾವಣಿಯ ಮೇಲಿನಿಂದ ಭಕ್ತರ ಮೇಲೆ ಉಗುಳಿದ್ದಾರೆ ಎಂದು ಸಾವನ್ ಲೋಟ್ ಎಂಬ ವ್ಯಕ್ತಿ ಆರೋಪಿಸಿದ್ದರು. ಈ ಸಂಬಂಧ ಇಬ್ಬರು ಅಪ್ರಾಪ್ತರು ಸೇರಿ ಮೂವರ ವಿರುದ್ಧ 5 ಸೆಕ್ಷನ್ ಗಳ ಅಡಿಯಲ್ಲಿ ಈಖಖ ದಾಖಲಿಸಲಾಗಿತ್ತು.

ಇಂದೋರ್ನ ಮಧ್ಯಪ್ರದೇಶ ಹೈಕೋರ್ಟ್ನ ಏಕಸದಸ್ಯ ಪೀಠ ಕಳೆದ ಸೋಮವಾರ ಅದ್ನಾನ್‌ಗೆ ಜಾಮೀನು ನೀಡಿತ್ತು. ಈ ಬೆಳವಣಿಗೆಯ ಬೆನ್ನಲ್ಲೇ ಖಾರಾ ಕುವಾನ್ ಠಾಣೆಯ ಪೊಲೀಸರು ಮಹಾಕಾಲ್ ಮೆರವಣಿಗೆಯ ಮೇಲೆ ಉಗುಳಿರುವ ಬಗ್ಗೆಯಷ್ಟೇ ನಮಗೆ ಮಾಹಿತಿ ಸಿಕ್ಕಿದೆ ಎಂದು ಹೇಳಿ ತಪ್ಪಿಸಿಕೊಳ್ಳುತ್ತಿದ್ದಾರೆ.



## ಕಣದಿಂದ ಹೊರಗುಳಿದ ವಿವೇಕ್ ರಾಮಸ್ವಾಮಿ !

**ಅಮೆರಿಕ:** ಭಾರತೀಯ-ಅಮೆರಿಕನ್ ವಾಣಿಜ್ಯೋದ್ಯಮಿ ವಿವೇಕ್ ರಾಮಸ್ವಾಮಿ ಅವರು ಯುಎಸ್ ಅಧ್ಯಕ್ಷೀಯರೇಸ್ನಿಂದ ಹೊರಗುಳಿದಿದ್ದಾರೆ. ಇದೇ ವರ್ಷ ಯುಎಸ್ ಅಧ್ಯಕ್ಷೀಯ ಸ್ಥಾನಕ್ಕೆ ಚುನಾವಣೆ ನಡೆಯಲಿದೆ.

ಅಯೋವಾ ರಿಪಬ್ಲಿಕನ್ ಸಭೆ ನಂತರ ಡೊನಾಲ್ಡ್ ಟ್ರಂಪ್ಗೆ ತಮ್ಮ ಬೆಂಬಲ ಘೋಷಿಸಿದ್ದಾರೆ.

ರಾಮಸ್ವಾಮಿ ಅವರು ಫೆಬ್ರವರಿ 2023 ರಲ್ಲಿ ಯುಎಸ್ ಅಧ್ಯಕ್ಷೀಯ ಸ್ಥಾನಕ್ಕೆ ಸ್ಪರ್ಧಿ ಎನ್ನುವ ಮೂಲಕ ರಾಜಕೀಯ ವಲಯದಲ್ಲಿ ಸಂಚಲನ ಮೂಡಿಸಿದ್ದರು.

ತಮ್ಮ ನಿಲುವುಗಳ ಮೂಲಕ ರಿಪಬ್ಲಿಕನ್ ಮತದಾರರು ಮತ್ತು ಬೆಂಬಲಿಗರ ಗಮನ ಸೆಳೆಯುವಲ್ಲಿ ಯಶಸ್ವಿಯಾಗಿದ್ದರು. ಅವರ ಪ್ರಚಾರ ಕಾರ್ಯತಂತ್ರವು ಮಾಜಿ ಅಧ್ಯಕ್ಷ ಟ್ರಂಪ್ ಅವರ ನೀತಿಯನ್ನು ನಿಕಟವಾಗಿ ಪ್ರತಿಬಿಂಬಿಸುತ್ತದೆ. ಹಿಂದಿನ ಚುನಾವಣೆಗಳಲ್ಲಿ ಟ್ರಂಪ್ ಅವರನ್ನು ಯಶಸ್ವಿನತ್ತ ಮುನ್ನಡೆಸಿದ್ದ ಸಂಪ್ರದಾಯವಾದಿ ವಲಯದ ಗಮನ ಸೆಳೆಯಲು ರಾಮಸ್ವಾಮಿ ಪ್ರಯತ್ನಿಸಿದ್ದರು.

ಓಹಿಯೋ ಮೂಲದ ರಾಮಸ್ವಾಮಿ, ಕೇರಳದಿಂದ ವಲಸೆ ಹೋಗಿದ್ದ ಕುಟುಂಬವೊಂದರ ಪುತ್ರ. ಟ್ರಂಪ್ ಅವರ ಖ್ಯಾತಿಯಿಂದ ಹೆಚ್ಚು ಪ್ರಾಬಲ್ಯ ಹೊಂದಿರುವ ರಿಪಬ್ಲಿಕನ್ ಕ್ಷೇತ್ರದಲ್ಲಿ ಅನಿರೀಕ್ಷಿತ ಸ್ಪರ್ಧಿಗಳಲ್ಲಿ ಒಬ್ಬರಾಗಿ ಹೊರಹೊಮ್ಮಿದರು.



## ಇರಾನ್ ಮೇಲೆ ಪಾಕ್ ಪ್ರತಿದಾಳಿ



**ಇಸ್ಲಾಮಾಬಾದ್:** ಇರಾನ್ನ ಆಗ್ನೇಯ ಗಡಿ ಭಾಗದಲ್ಲಿ ಪಾಕಿಸ್ತಾನ ಗುರುವಾರ ನಡೆಸಿದ ಕ್ಷಿಪಣಿ ದಾಳಿಯಲ್ಲಿ ಕನಿಷ್ಠ ಮೂವರು ಮಹಿಳೆಯರು ಹಾಗೂ ನಾಲ್ಕು ಮಕ್ಕಳು ಮೃತಪಟ್ಟಿದ್ದಾರೆ ಎಂದು ತಿಳಿದು ಬಂದಿದೆ.

ಕ್ಷಿಪಣಿಗಳಿಂದ ಇರಾನ್ನ ಗಡಿ ಭಾಗದ ಗ್ರಾಮದ ಮೇಲೆ ಪಾಕಿಸ್ತಾನ ದಾಳಿ ನಡೆಸಿದೆ.

ಸಂಘಟಿತ ಮತ್ತು ನಿರ್ದಿಷ್ಟ ಗುರಿಯೊಂದಿಗೆ ಪಾಕಿಸ್ತಾನವು ಇಂದು ಮುಂಜಾನೆ ಇರಾನ್ನ ಸೀಸ್ತನ್-ಒ-ಬಲೂಚಿಸ್ತಾನ್ ಪ್ರಾಂತ್ಯದ ಉಗ್ರ ಅಡಗುತಾಣಗಳ ಮೇಲೆ ದಾಳಿ ನಡೆಸಿದೆ, ಹಲವಾರು ಉಗ್ರರು ಮೃತಪಟ್ಟಿದ್ದಾರೆ ಎಂದು ಪಾಕ್ ವಿದೇಶಾಂಗ ಸಚಿವಾಲಯದ ಹೇಳಿಕೆ ತಿಳಿಸಿದೆ. ಈ ಗುಪ್ತಚರ ಆಧರಿತ ಕಾರ್ಯಾಚರಣೆಗೆ ?ಮಾರ್ಗ್ ಬರ್ ಸರ್ಮಚರ್? ಎಂಬ ಕೋಡ್ ನೀಡಲಾಗಿತ್ತು.

ಇರಾನ್ನ ಕ್ಷಿಪಣಿಗಳು ಮತ್ತು ಡ್ರೋನ್ಗಳು ಪಾಕಿಸ್ತಾನದ ಬಲೂಚಿಸ್ತಾನದ ಮೇಲೆ ಮಂಗಳವಾರ ನಡೆಸಿದ ದಾಳಿಯಲ್ಲಿ ಇಬ್ಬರು ಮಕ್ಕಳು ಮೃತಪಟ್ಟ ನಂತರದ ಬೆಳವಣಿಗೆ ಇದಾಗಿದೆ.

ಪಾಕ್ ನಡೆಸಿದ ದಾಳಿಯಲ್ಲಿ ಇರಾನ್ನ ಸರವನ್ ನಗರದ ಸಮೀಪ ಸ್ಫೋಟ ಸಂಭವಿಸಿದರೂ ಸಾವು ನೋವುಗಳುಂಟಾಗಿಲ್ಲ ಎಂದು ಅಲ್ಲಿನ ಅಧಿಕಾರಿಗಳು ತಿಳಿಸಿದ್ದಾರೆ.

Postal Registration No.KA/BGW-1823/2019-2021, Posted at Patrika Channel, RMS Bhavan, Bengaluru PSO, Mysore Road, Bengaluru- 560020, RNI No.KARKAN/2002/08054

## ದುನಿಯಾ ವಿಜಯ್ ಹುಟ್ಟುಹಬ್ಬಕ್ಕೆ
# ಭೀಮ ಟೀಸರ್



ಕನ್ನಡದ ಹೆಸರಾಂತ ನಟ ದುನಿಯಾ ವಿಜಯ್ ನಾಳೆ ತಮ್ಮ ಹುಟ್ಟು ಹಬ್ಬವನ್ನು ಆಚರಿಸಿಕೊಳ್ಳುತ್ತಿದ್ದಾರೆ. ಅಭಿಮಾನಿಗಳ ಜೊತೆ ಇರುವುದಕ್ಕಾಗಿಯೇ ಅವರು ವಿಶೇಷ ವ್ಯವಸ್ಥೆಯನ್ನೂ ಮಾಡಿಕೊಂಡಿದ್ದಾರೆ. ಜೊತೆಗೆ ವಿಜಯ್ ಅವರೇ ನಿರ್ದೇಶಿಸಿ, ನಟಿಸುತ್ತಿರುವ ಭೀಮ ಚಿತ್ರದ ಟೀಸರ್ ಕೂಡ ಅಂದು ಬಿಡುಗಡೆ ಆಗಲಿದೆ.

ಈ ಹುಟ್ಟು ಹಬ್ಬದ ಸಂದರ್ಭದಲ್ಲಿ ದುನಿಯಾ ವಿಜಯ್ ಅವರು ತಮ್ಮ ಅಭಿಮಾನಿಗಳಿಗೆ ವಿಶೇಷ ಮನವಿಯೊಂದನ್ನು ಮಾಡಿದ್ದಾರೆ. ಯಶ್ ಫ್ಯಾನ್ಸ್ ದುರಂತ ಸಾವಿನ ಬಳಿಕ ವಿಜಯ್ ಅಭಿಮಾನಿಗಳಿಗೆ ಕೈ ಮುಗಿದು ಮನವಿ ಮಾಡಿಕೊಂಡಿದ್ದಾರೆ. ತಮ್ಮ ಹುಟ್ಟುಹಬ್ಬದ ಅಪ್‌ಡೇಟ್ ಹಂಚಿಕೊಂಡಿದ್ದಾರೆ.

ನಾಳೆ ದುನಿಯಾ ವಿಜಯ್ ಹುಟ್ಟುಹಬ್ಬವಿದೆ. ಹೀಗಾಗಿ ಪ್ರತಿ ಬಾರಿಯಂತೆ ಈ ಬಾರಿಯೂ ವಿಜಯ್ ತಮ್ಮ ಅಭಿಮಾನಿಗಳನ್ನು ಭೇಟಿಯಾಗಲಿದ್ದಾರೆ. ಈ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ. ತನ್ನ ಹುಟ್ಟೂರಾದ ಕುಂಬಾರನಹಳ್ಳಿಯಲ್ಲಿ ತಮ್ಮ ಹುಟ್ಟುಹಬ್ಬ ಆಚರಿಸಿಕೊಳ್ಳಲಿದ್ದಾರೆ.

ಕುಂಬಾರನಹಳ್ಳಿಯಲ್ಲಿ ಹುಟ್ಟುಹಬ್ಬ ಆಚರಿಸಿಕೊಳ್ಳಲಿದ್ದು, ಅಲ್ಲಿಯೇ ಅಭಿಮಾನಿಗಳನ್ನು ಭೇಟಿಯಾಗಲಿದ್ದಾರೆ. ನಟ ಯಶ್ ಬರ್ತಡೇ ದಿನ ನಡೆದ ದುರಂತಗಳನ್ನು ಗಮನದಲ್ಲಿಟ್ಟುಕೊಂಡು ಈ ವಿಚಾರ ತಿಳಿಸಿದ್ದಾರೆ. ಇನ್ನೂ ಕಳೆದ ಬಾರಿ



ಅಭಿಮಾನಿಯೊಬ್ಬರು ನಡೆದುಕೊಂಡೇ ವಿಜಯ್ ಹುಟ್ಟುಹಬ್ಬಕ್ಕೆ ಬಂದಿದ್ದರು. ಹಾಗಾಗಿ ಕೈ ಮುಗಿದು ಕೇಳಿಕೊಳ್ಳುತ್ತೇನೆ ಯಾವ ಅಭಿಮಾನಿಗಳು ಸಹ ಈ ಬಾರಿ ನಡೆದುಕೊಂಡು ಬರಬೇಡಿ, ಯಾರು ಕೇಕ್ ಮತ್ತು ಹೂವಿನ ಹಾರ ತರಬೇಡಿ. ನನಗೆ ನಿಮ್ಮ ಜೊತೆಗೆ ಕುಳಿತು ಪ್ರೀತಿಯಿಂದ ಊಟ ಮಾಡುವ ಆಸೆಯಿದೆ ಎಂದು ಹೇಳಿದ್ದಾರೆ.

ನಾಳೆ ಬೆಳಿಗ್ಗೆ ಎಲ್ಲರೂ ಸೇಫಾಗಿ ಬನ್ನಿ. ಜನವರಿ 19ರವರೆಗೂ ನಮಗೆ ಸಿನಿಮಾ ಕೆಲಸ ಇದೆ. ಹೀಗಾಗಿ ನಾಳೆ ಎಲ್ಲರೂ ಬನ್ನಿ ಜೊತೆಯಲ್ಲಿ ಕುಳಿತು ಊಟ ಮಾಡೋಣ. ಯಾರು ನನ್ನ ಹುಟ್ಟುಹಬ್ಬದ ದಿನ ಫ್ಲೆಕ್ಸ್ ಬ್ಯಾನರ್ ಹಾಕಬೇಡಿ ಎಂದು ದುನಿಯಾ ವಿಜಯ್ ಹೇಳಿದ್ದಾರೆ.

## ಬಾಲಿವುಡ್‌ನತ್ತ ತಮಿಳಿನ ಸೂರ್ಯ
# ಜಾಹ್ನವಿಗೆ ಸಖತ್ ಅವಕಾಶ

ತಮಿಳಿನ ಹೆಸರಾಂತ ನಟ ಸೂರ್ಯ, ಇದೀಗ ಬಾಲಿವುಡ್ ನತ್ತ ಮುಖ ಮಾಡಿದ್ದಾರೆ. ಹೌದು, ಅವರು ಹಿಂದಿ ಸಿನಿಮಾವೊಂದನ್ನು ಒಪ್ಪಿಕೊಂಡಿದ್ದಾರೆ ಎಂದು ಹೇಳಲಾಗುತ್ತಿದ್ದು, ಈ ಚಿತ್ರದಲ್ಲಿ ಶ್ರೀದೇವಿ ಪುತ್ರಿ, ಜಾಹ್ನವಿ ಕಪೂರ್ ನಾಯಕಿಯಾಗಿ ನಟಿಸಲಿದ್ದಾರಂತೆ. ಚಿತ್ರದ ಕುರಿತಂತೆ ಸಾಕಷ್ಟು ವಿವರಗಳು ಸಿಗದೇ ಇದ್ದರೂ, ಸೂರ್ಯ ಮತ್ತು ಜಾಹ್ನವಿ ಕಾಂಬಿನೇಷನ್ ಬಗ್ಗೆ ಸಖತ್ ಸುದ್ದಿಗಳು ಹರಿದಾಡುತ್ತಿವೆ.





ಒಂದು ಕಡೆ ಸೂರ್ಯ ಬಾಲಿವುಡ್ ಪ್ರವೇಶ ಮಾಡುತ್ತಿದ್ದರೆ ಮತ್ತೊಂದು ಕಡೆ ಸೂರ್ಯ ನಟನೆಯ 'ಕಂಗುವ' ಸಿನಿಮಾದ ಹೊಸ ಪೋಸ್ಟರ್ ರಿಲೀಸ್ ಆಗಿದೆ. ಈ ಪೋಸ್ಟರ್ ನಲ್ಲಿ ಸೂರ್ಯ ಸಖತ್ ಮಿಂಚಿದ್ದಾರೆ. ಪೋಸ್ಟರ್ ಕಂಡು ಅಭಿಮಾನಿಗಳು ಫಿದಾ ಆಗಿದ್ದಾರೆ. ಜೊತೆಗೆ ಈ ಸಿನಿಮಾವನ್ನು ಬರೋಬ್ಬರಿ 38 ಭಾಷೆಗಳಲ್ಲಿ ರಿಲೀಸ್ ಮಾಡುವುದಾಗಿ ಚಿತ್ರತಂಡ ಘೋಷಣೆ ಮಾಡಿದೆ. ಜೊತೆಗೆ 3 ಡಿ ತಂತ್ರಜ್ಞಾನದಲ್ಲೂ ಈ ಸಿನಿಮಾವನ್ನು ನೋಡಬಹುದಾಗಿದೆ. ಈ ಸಿನಿಮಾದ ಶೂಟಿಂಗ್ ಇನ್ನೂ ಕಂಪ್ಲೀಟ್ ಆಗಿಲ್ಲ. ಆಗಲೇ ಭರ್ಜರಿ ವ್ಯಾಪಾರ ಕೂಡ ಆರಂಭಿಸಿದೆ. ಭಾರೀ ಮೊತ್ತಕ್ಕೆ ಓಟಿಟಿಗೆ ಸೇಲ್ ಆಗುವ ಮೂಲಕ ಸಂಭ್ರಮವನ್ನು ಇಮ್ಮಡಿಗೊಳಿಸಿದೆ.

ಮೂಲಗಳ ಪ್ರಕಾರ ಅಮೆಜಾನ್ ಪ್ರೈಮ್ ಸಂಸ್ಥೆಯು ಕಂಗುವ ಸಿನಿಮಾದ ಓಟಿಟಿ ಹಕ್ಕನ್ನು ಬರೋಬ್ಬರಿ 80 ಕೋಟಿಗೆ ಖರೀದಿ ಮಾಡಿದೆಯಂತೆ. ಇದು ಎಲ್ಲ ಭಾಷೆಯ ಹಕ್ಕುಗಳನ್ನೂ ಒಳಗೊಂಡಿದೆ ಎನ್ನಲಾಗುತ್ತಿದೆ. ಈ ಮಾಹಿತಿಯನ್ನು ಚಿತ್ರತಂಡವೇ ಬಹಿರಂಗ ಪಡಿಸಿದೆ ಎಂದು ಕೆಲ ಮಾಧ್ಯಮಗಳ ವರದಿ ಮಾಡಿವೆ.

ಸ್ಟುಡಿಯೋ ಗ್ರೀನ್ನಡಿ ಕೆ.ಇ.ಜ್ಞಾನ ವೇಲ್ ರಾಜ ನಿರ್ಮಿಸಿ, ಶಿವ ನಿರ್ದೇಶಿಸುತ್ತಿರುವ ಈ ಚಿತ್ರವು ಪ್ರಾರಂಭವಾದಾಗಿನಿಂದ ಅಭಿಮಾನಿಗಳ ವಲಯದಲ್ಲಿ ಸಾಕಷ್ಟು ಕುತೂಹಲ ಕೆರಳಿಸಿದೆ. ಬಹುಕೋಟಿ ವೆಚ್ಚದ ಈ ಚಿತ್ರದಲ್ಲಿ ಸೂರ್ಯಗೆ ನಾಯಕಿಯಾಗಿ ಬಾಲಿವುಡ್ ಬೆಡಗಿ ದಿಶಾ ಪಠಾಣಿ ಅಭಿನಯಿಸುತ್ತಿದ್ದು, ಯೋಗಿ ಬಾಬು ಮುಂತಾದವರು ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ.

'ಕಂಗುವ' ಚಿತ್ರವು ಹಲವು ಭಾಷೆಗಳಲ್ಲಿ ಏಕಕಾಲಕ್ಕೆ ಬಿಡುಗಡೆಯಾಗುತ್ತಿರುವುದರಿಂದ ಎಲ್ಲ ಭಾಷೆಗಳಿಗೂ ಕನೆಕ್ಟ್ ಆಗುವಂತಹ ಶೀರ್ಷಿಕೆಯೊಂದರ ಹುಡುಕಾಟದಲ್ಲಿ ಚಿತ್ರತಂಡ ಇತ್ತು. ಆ ಶೀರ್ಷಿಕೆ ಕೊನೆಗೂ ಸಿಕ್ಕಿದ್ದು, 'ಕಂಗುವ' ಎಂದರೆ, ಬೆಂಕಿಯ ಶಕ್ತಿಯುಳ್ಳವನು ಎಂದರ್ಥ. ಇಲ್ಲಿ ನಾಯಕ ಒಬ್ಬ ಸೂಪರ್ ಹೀರೋ ಆಗಿದ್ದು, ಹಲವು ಅವತಾರಗಳಲ್ಲಿ ಕಾಣಿಸಿಕೊಳ್ಳುತ್ತಾನೆ.

# ನಿಖಿಲ್ ಸಿದ್ದಾರ್ಥ ಸಿನಿಮಾದಲ್ಲೂ ಕಾಣಲಿದ್ದಾನೆ ಹನುಮಾನ್



ದೇಶದಾದ್ಯಂತ ರಾಮ ಮತ್ತು ಹನುಮನ ಜಪ ಶುರುವಾಗಿದೆ. ಅಯೋಧ್ಯೆಯಲ್ಲಿ ರಾಮ ಮಂದಿರ ಉದ್ಘಾಟನೆಗೆ ಕ್ಷಣಗಣನೆ ಶುರುವಾಗಿದೆ, ಚಿತ್ರೋದ್ಯಮದಲ್ಲಿ ಹನುಮಾನ್ ಸಿನಿಮಾ ಬಾಕ್ಸ್ ಆಫೀಸಿನಲ್ಲಿ ಕೋಟಿ ಕೋಟಿ ಹಣ ಬಾಚುತ್ತಿದೆ. ಈ ನಡುವೆ ನಿಖಿಲ್ ಸಿದ್ದಾರ್ಥ ನಟಿಸುತ್ತಿರುವ ಹೊಸ ಸಿನಿಮಾದಲ್ಲೂ ಹನುಮಾನ್ ಕಥೆ ಇದೆಯಂತೆ. ಹನುಮ ಭಕ್ತನೊಬ್ಬನ ಕಥೆಯನ್ನು ಈ ಸಿನಿಮಾದಲ್ಲಿ ಹೇಳಲ್ಲಿದ್ದಾರಂತೆ.

ನಿಖಿಲ್ ಸಿದ್ದಾರ್ಥ್ ನಟನೆಯ 20ನೇ ಸಿನಿಮಾ ಇದಾಗಿದ್ದು, ಈ ಚಿತ್ರಕ್ಕೆ ಸ್ವಯಂಭೂ ಎಂದು ಹೆಸರಿಡಲಾಗಿದೆ. ಭರತ್ ಕೃಷ್ಣಮಾಚಾರಿ ಆಕ್ಷನ್ ಕಟ್ ಹೇಳಿರುವ ಈ ಸಿನಿಮಾಗೆ ಸ್ವಯಂಭೂ ಎಂಬ ಕ್ಯಾಚಿ ಟೈಟಲ್ ಇಡಲಾಗಿದೆ.

ಪಿಕ್ಸೆಲ್ ಸ್ಟುಡಿಯೋ ಮೂಲಕ ಭುವನ್ ಹಾಗೂ ಶ್ರೀಕರ್ ಚಿತ್ರ ನಿರ್ಮಾಣ ಮಾಡುತ್ತಿದ್ದು, ಟ್ಯಾಗೋರೆ ಮಧು ಪ್ರಸ್ತುತಪಡಿಸುತ್ತಿದ್ದಾರೆ. ಸ್ವಯಂಭೂ ಎಂದರೆ ಸ್ವಯಂ ಹುಟ್ಟು ಎಂದರ್ಥ.



ಇನ್ನು, ಫಸ್ಟ್ ಲುಕ್ ಪೋಸ್ಟರ್ ನಲ್ಲಿ ನಿಖಿಲ್, ಉದ್ದವಾದ ಕೂದಲು ಬಿಟ್ಟು ಒಂದು ಕೈಯಲ್ಲಿ ಈಟಿ, ಮತ್ತೊಂದು ಕೈಯಲ್ಲಿ ಗುರಾಣಿ ಹಿಡಿದು ವೀರಯೋಧನಂತೆ ಕಾಣಿಸಿಕೊಂಡಿದ್ದಾರೆ.

ಸಹಸ್ರಮಾನಗಳ ಹಿಂದಿನ ಕಥೆಯನ್ನೊಳಗೊಂಡಿರುವ ಸ್ವಯಂಭೂ ಸಿನಿಮಾ ನಿಖಿಲ್ ಸಿದ್ದಾರ್ಥ್ ವೃತ್ತಿಜೀವನದ ಬಿಗ್ ಬಜೆಟ್ ಚಿತ್ರವಾಗಿದೆ. ಮನೋಜ್ ಪರಮಹಂಸ ಛಾಯಾಗ್ರಹಣ, ರವಿ ಬಸ್ರೂರ್ ಸಂಗೀತ, ವಾಸುದೇವ್ ಮುನೆಪ್ಪಗರಿ ಚಿತ್ರಕ್ಕೆ ಸಂಭಾಷಣೆಯನ್ನು ನೀಡಿದ್ದಾರೆ.

# ಟಿ20 ವಿಶ್ವಕಪ್‌ಗೆ 10 ಆಟಗಾರರು ಫೈನಲ್

ಟೀಮ್ ಇಂಡಿಯಾ ಮತ್ತು ಅಫ್ಘಾನಿಸ್ತಾನ ನಡುವಿನ ಮೂರನೇ ಟಿ20 ಪಂದ್ಯ, ಎರಡನೇ ಸೂಪರ್ ಓವರ್‌ನಲ್ಲಿ ಅಂತ್ಯಕಂಡು ಭಾರತ ಗೆಲುವು ಸಾಧಿಸಿತು. ಈ ಮೂಲಕ 3 ಪಂದ್ಯಗಳ ಸರಣಿಯನ್ನು ಟೀಮ್ ಇಂಡಿಯಾ 3-0 ಅಂತರದಲ್ಲಿ ವಶಪಡಿಸಿಕೊಂಡಿದೆ.

ಈ ಪಂದ್ಯದಲ್ಲಿ ನಾಯಕ ರೋಹಿತ್ ಶರ್ಮಾ ಮತ್ತು ರಿಂಕು ಸಿಂಗ್ ಇಬ್ಬರೂ ಐದನೇ ವಿಕೆಟ್‌ಗೆ 190 ರನ್‌ಗಳ ಜೊತೆಯಾಟವನ್ನು ಹಂಚಿಕೊಂಡರು. ರೋಹಿತ್ ಔಟಾಗದೆ 121 ಮತ್ತು ರಿಂಕು 69 ರನ್ ಗಳಿಸಿದರು. ಇದು ಐಸಿಸಿ ಟಿ20 ವಿಶ್ವಕಪ್‌ಗೂ ಮುನ್ನ ಭಾರತದ ಕೊನೆಯ ಟಿ20 ಪಂದ್ಯವಾಗಿತ್ತು.

ರೋಹಿತ್ ಶರ್ಮಾ ನಾಯಕತ್ವದಲ್ಲಿ ಟೀಮ್ ಇಂಡಿಯಾ 14 ತಿಂಗಳ ನಂತರ ಮತ್ತು ವಿಶ್ವಕಪ್‌ಗೆ ಮುನ್ನ ಈ ಸರಣಿಯನ್ನು ಕ್ಲೀನ್‌ಸ್ವೀಪ್ ಮಾಡಿರುವುದು ತಂಡಕ್ಕೆ ಸಂತಸದ ಸುದ್ದಿ. ಪಂದ್ಯದ ನಂತರ, ರೋಹಿತ್ ಶರ್ಮಾ ಅವರು ಮಾಜಿ ಸಹ ಆಟಗಾರರಾದ ಜಹೀರ್ ಖಾನ್, ಪ್ರಗ್ಯಾನ್ ಓಜಾ ಮತ್ತು ಇತರರೊಂದಿಗೆ ಸಂವಾದ ನಡೆಸಿದರು. ಈ ವೇಳೆ ಟಿ20 ವಿಶ್ವಕಪ್ ಕುರಿತು ಮಾತನಾಡಿದ್ದಾರೆ.

ಐಸಿಸಿ ಟಿ20 ವಿಶ್ವಕಪ್ 2024 ಅನ್ನು USA ಮತ್ತು ವೆಸ್ಟ್ ಇಂಡೀಸ್ ಜಂಟಿಯಾಗಿ




ಆಯೋಜಿಸಿವೆ. ಒಂದು ಟ್ರೋಫಿಗಾಗಿ ಒಟ್ಟು 20 ತಂಡಗಳು ಸ್ಪರ್ಧಿಸಲಿವೆ. ಈ ಸ್ಪರ್ಧೆಯನ್ನು ಜೂನ್ 1 ರಿಂದ 29 ರವರೆಗೆ ಆಯೋಜಿಸಲಾಗಿದೆ. ತಲಾ 5-5 ರಂತೆ 20 ತಂಡಗಳನ್ನು 4 ಗುಂಪುಗಳಾಗಿ ವಿಂಗಡಿಸಲಾಗಿದೆ.

ಟೀಮ್ ಇಂಡಿಯಾ ಎ ಗುಂಪಿನಲ್ಲಿದೆ. ಭಾರತದ ಜೊತೆ ಪಾಕಿಸ್ತಾನ, ಐರ್ಲೆಂಡ್, ಕೆನಡಾ ಮತ್ತು ಯುಎಸ್ ತಂಡ ಕೂಡ ಇದೆ.

ಅಫ್ಘಾನ್ ವಿರುದ್ಧದ ಸರಣಿ ಬಳಿಕ ನಾಯಕ ರೋಹಿತ್ ಶರ್ಮಾ ಟಿ20 ವಿಶ್ವಕಪ್ ಬಗ್ಗೆ ಕೆಲ ಮಾತುಗಳನ್ನು ಆಡಿದ್ದು ಅವರು ಏನು ಹೇಳಿದ್ದಾರೆ ನೋಡೋಣ.

''ಮುಂಬರುವ ಟಿ20 ವಿಶ್ವಕಪ್ ಗೆ ಟೀಮ್ ಇಂಡಿಯಾ ಪ್ರಬಲ ಸ್ಪರ್ಧಿಯಾಗಿದೆ. ಟಿ20 ವಿಶ್ವಕಪ್ ಗೆಲ್ಲಲು ಪ್ರಯತ್ನಿಸುತ್ತೇವೆ. ಆದರೆ ಮಾತನಾಡುವುದರಿಂದ ಏನೂ ಆಗುವುದಿಲ್ಲ. ಅದಕ್ಕಾಗಿ ಏನು ಸಿದ್ಧತೆ ಮಾಡಿಕೊಳ್ಳಬೇಕು''. ಒಂದಿಷ್ಟು ತಯಾರು ಆಗಿದೆ ಎಂಬ ಬಗ್ಗೆಯೂ ರೋಹಿತ್ ಹೇಳಿದ್ದಾರೆ.

ಟಿ20 ವಿಶ್ವಕಪ್‌ಗಾಗಿ ನಾವು ಇನ್ನೂ 15 ಆಟಗಾರರ ಹೆಸರನ್ನು ಅಂತಿಮಗೊಳಿಸಿಲ್ಲ. ಆದರೆ ತಲೆಯಲ್ಲಿ 8 ರಿಂದ 10 ಜನರ ಹೆಸರುಗಳಿವೆ, ಅವರು ತಂಡದಲ್ಲಿರಬಹುದು ಎಂದು ರೋಹಿತ್ ಹೇಳಿದ್ದಾರೆ. ಆದರೆ, ಅವರು ಯಾರು ಎಂಬುದನ್ನು ಬಹಿರಂಗ ಪಡಿಸಿಲ್ಲ. ಈ ಮೂಲಕ ಟಿ20 ವಿಶ್ವಕಪ್ ಗೆ 15 ಆಟಗಾರರ ಪೈಕಿ 8-10 ಆಟಗಾರರು ಫೈನಲ್ ಆಗಿದ್ದಾರೆ. 5 ಸ್ಲಾಟ್ ಖಾಲಿಯಿದೆ. ಐಪಿಎಲ್ ಪ್ರದರ್ಶನದ ಬಳಿಕ ಆ 5 ಜನರ ಬಗ್ಗೆ ನಿರ್ಧಾರ ಕೈಗೊಳ್ಳಬಹುದು.

## ಸಚಿನ್ ತೆಂಡೂಲ್ಕರ್ ಡೀಪ್‌ಫೇಕ್ ವೀಡಿಯೋ ಪ್ರಕರಣ
# ಗೇಮ್ ಅಪ್ಲಿಕೇಶನ್ ವಿರುದ್ಧ ಎಫ್‌ಐಆರ್

ಇತ್ತೀಚೆಗೆ ವೈರಲ್ ಆಗಿದ್ದ ಕ್ರಿಕೆಟ್ ದಂತಕತೆ ಸಚಿನ್ ತೆಂಡೂಲ್ಕರ್ ಅವರ ಡೀಪ್‌ಫೇಕ್ ವೀಡಿಯೋ ಸಂಬಂಧ ಮುಂಬೈ ಪೊಲೀಸರು ಗೇಮಿಂಗ್ ಅಪ್ಲಿಕೇಶನ್ ಹಾಗೂ ಫೇಸ್ ಬುಕ್ ಪುಟವೊಂದರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ಸಚಿನ್ ತೆಂಡೂಲ್ಕರ್ ಮತ್ತು ಅವರ ಮಗಳು ಸಾರಾ ಆನ್‌ಲೈನ್ ಗೇಮ್‌ವೊಂದರ ಮೂಲಕ ದೊಡ್ಡ ಮೊತ್ತದ ಹಣವನ್ನು ಗೆದ್ದಿದ್ದಾರೆ ಎಂದು ವೀಡಿಯೋದಲ್ಲಿ ಹೇಳಲಾಗಿತ್ತು. ಅಲ್ಲದೇ ಸಚಿನ್ ಗೇಮಿಂಗ್ ಅಪ್ಲಿಕೇಷನ್‌ನ್ನು ಪ್ರಚಾರ ಮಾಡುತ್ತಿದ್ದಾರೆ ಎಂದು ಅವರ ಧ್ವನಿ ಹಾಗೂ ಅವರ ವೀಡಿಯೋ ಬಳಸಿ ಹಂಚಿಕೊಳ್ಳಲಾಗಿತ್ತು. ಇದನ್ನು ಸಚಿನ್ ಅವರ ಟ್ವಿಟ್ಟರ್ ಮೂಲಕವೂ ಫ್ಲಾಗ್ ಮಾಡಲಾಗಿತ್ತು.

ಈ ಬಗ್ಗೆ ಸಚಿನ್ ಆಪ್ತ ಸಹಾಯಕರೊಬ್ಬರು



ನೀಡಿದ ದೂರಿನ ಅಡಿ ಪ್ರಕರಣ ದಾಖಲಾಗಿದೆ. ಐಪಿಸಿ ಸೆಕ್ಷನ್ 500ರ ಅಡಿ (ಮಾನನಷ್ಟ) ಮತ್ತು ಐಟಿ ಕಾಯ್ದೆಯ ಸೆಕ್ಷನ್ 66ರ (ಆಕ್ಷೇಪಾರ್ಹ ಸಂದೇಶಗಳನ್ನು ಕಳುಹಿಸುವುದು) ಅಡಿಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ. ಗೇಮಿಂಗ್ ಸೈಟ್ ಮತ್ತು ಫೇಸ್‌ಬುಕ್ ಪುಟದ ಮಾಲೀಕರ ಬಗ್ಗೆ ಪೊಲೀಸರು ವಿವರಗಳನ್ನು ಹಂಚಿಕೊಂಡಿಲ್ಲ.

ಈ ವೀಡಿಯೋ ವೈರಲ್ ಆದ ಬೆನ್ನಲ್ಲೇ ತೆಂಡೂಲ್ಕರ್ ಇದು ನಕಲಿ ವೀಡಿಯೋ ಎಂದು ಸ್ಪಷ್ಟನೆ ನೀಡಿದ್ದರು. ಅಲ್ಲದೇ ತಂತ್ರಜ್ಞಾನಗಳ ದುರುಪಯೋಗದ ಬಗ್ಗೆ ಆತಂಕ ವ್ಯಕ್ತಪಡಿಸಿದ್ದರು. ಈ ಬಗ್ಗೆ ಸೂಕ್ತ ಕ್ರಮಗಳು ಅವಶ್ಯಕವಾಗಿ ಬೇಕು ಎಂದು ಆಗ್ರಹಿಸಿದ್ದರು.

## ಸಂಸದ ಅನಂತಕುಮಾರ್ ಹೆಗಡೆಗೆ
# ಬಿಜೆಪಿ ಕಾರ್ಯಕರ್ತರ ಕ್ಲಾಸ್

**ಬೆಳಗಾವಿ:** ಸಂಸದ ಅನಂತ್ ಕುಮಾರ್ ಹೆಗಡೆ ವಿರುದ್ಧ ಬಿಜೆಪಿ ಕಾರ್ಯಕರ್ತರು ಅಸಮಾಧಾನ ಹೊರ ಹಾಕಿದ್ದಾರೆ. ಬೆಳಗಾವಿ ಜಿಲ್ಲೆಯ ಖಾನಾಪುರದಲ್ಲಿ ನಡೆದ ಸಭೆಯಲ್ಲಿ ಅನಂತ್ ಕುಮಾರ್ ಹೆಗಡೆಗೆ ಕ್ಲಾಸ್ ತೆಗೆದುಕೊಂಡಿದ್ದಾರೆ. ಕಳೆದ ಹಲವು ವರ್ಷಗಳಿಂದ ಕಾರ್ಯಕರ್ತರ ಕೈಗೆ ನೀವು ಸಿಕ್ಕಿಲ್ಲ. ನಿಮ್ಮ ಪಿಎಗಳು ಕೂಡ ಸರಿಯಾಗಿ ಸ್ಪಂದಿಸಿಲ್ಲ, ಹೇಗೆ ಮಾಡಬೇಕು. ನಮ್ಮ ಕ್ಷೇತ್ರದಲ್ಲಿ ಅಭಿವೃದ್ಧಿ ಕೆಲಸಗಳು ಕೂಡ ಕುಂಠಿತಗೊಂಡಿವೆ. ಖಾನಾಪುರದಲ್ಲಿ ಸಂಸದರ ಕಾರ್ಯಾಲಯ ಓಪನ್ ಮಾಡಿ ಎಂದು ಒತ್ತಾಯಿಸಿದ್ದಾರೆ.



ಖಾನಾಪುರ ಪಟ್ಟಣದಲ್ಲಿ ಬಿಜೆಪಿ ಪಕ್ಷದ ಕಚೇರಿಯಲ್ಲಿ ಕಾರ್ಯಕರ್ತರ ಸಭೆ ಹಮ್ಮಿಕೊಳ್ಳಲಾಗಿತ್ತು. ಈ ವೇಳೆ ಕಾರ್ಯಕರ್ತರು ಅಸಮಾಧಾನ ಹೊರ ಹಾಕಿದ್ದಾರೆ. ಕ್ಷೇತ್ರದಲ್ಲಿನ ಸಮಸ್ಯೆಗಳ ಪಟ್ಟಿಯನ್ನೇ ಸಂಸದರ ಮುಂದಿಟ್ಟು ಅಸಮಾಧಾನ ಹೊರ ಹಾಕಿದ್ದಾರೆ. ಖಾನಾಪುರ ತಾಲೂಕಿನ ಜನ ಬೆಳಗಾವಿಗೆ ಹೋದ್ರೆ ಕಾರವಾರಕ್ಕೆ ಹೋಗಿ ಅಂತಾರೆ. ಕಾರವಾರಕ್ಕೆ ಹೋದ್ರೆ ನೀವು ಬೆಳಗಾವಿ ಜಿಲ್ಲೆಯವರು ಅಲ್ಲಿಗೆ ಹೋಗಿ ಅಂತಾರೆ. ಖಾನಾಪುರ ತಾಲೂಕಿನ ಜನ ನಡುವಿನಲ್ಲಿ ಸಿಕ್ಕಿ ಒದ್ದಾಡುತ್ತಿದ್ದಾರೆ. ಐದು ಬಾರಿ ಸಂಸದರಾಗಿದ್ದೀರಿ ಖಾನಾಪುರದಲ್ಲಿ ಕೇಂದ್ರ ಸರ್ಕಾರದ ಯೋಜನೆ ಏನೂ ಗೊತ್ತಿಲ್ಲ. ಕಾರ್ಯಕರ್ತರಿಗೆ ನಿಮ್ಮ ಕಡೆಯಿಂದ ಉತ್ತಮ ಸ್ಪಂದನೆ ಸಿಗುತ್ತಿಲ್ಲ. ಅನಂತ್ ಕುಮಾರ್ ಹೆಗಡೆ ಎಲ್ಲಿದ್ದಾರೆ ಅಂತಾ ಜನ ಪ್ರಶ್ನೆ ಮಾಡ್ತಿದ್ದಾರೆ. 200 ಕಿ.ಮೀ ನಿಮ್ಮನ್ನ ಭೇಟಿಯಾಗಲು ಬಂದ್ರೂ ಸಿಗುವುದಿಲ್ಲ ಎಂದು ಸಂಸದ ಅನಂತ್ ಕುಮಾರ್ ಹೆಗಡೆಗೆ ಬಿಜೆಪಿ ಕಾರ್ಯಕರ್ತರು ತರಾಟೆಗೆ ತೆಗೆದುಕೊಂಡರು.

**ಪಕ್ಷ ಯಾರಿಗೆ ಟಿಕೆಟ್ ಕೊಟ್ಟರೂ ಚುನಾವಣೆಯಲ್ಲಿ ಗೆಲ್ಲಿಸಬೇಕಿದೆ:** ಇನ್ನು ಮತ್ತೊಂದೆಡೆ ಸಭೆಯಲ್ಲಿ ಮಾತನಾಡಿದ ಅನಂತ್ ಕುಮಾರ್ ಹೆಗಡೆ, ಚುನಾವಣೆ ಬಗ್ಗೆ ಮುಂದೆ ಏನಾಗುತ್ತೆ ಅನ್ನೋದು ನನಗೆ ಗೊತ್ತಿಲ್ಲ. ಸ್ಪರ್ಧಿಸ್ತೇನೆ ಅಂತಾ ಬಂದಿಲ್ಲ, ಃಎಕ ಗೆಲ್ಲಿಸಿ ಅಂತಾ ಹೇಳಲು ಬಂದಿದ್ದೇನೆ. ಪಕ್ಷ ಯಾರಿಗೆ ಟಿಕೆಟ್ ಕೊಟ್ಟರೂ ಚುನಾವಣೆಯಲ್ಲಿ ಗೆಲ್ಲಿಸಬೇಕಿದೆ. ಖಾನಾಪುರದಲ್ಲಿ ಸಂಸದರ ಕಚೇರಿ ತೆರೆಯಲು ಯೋಚನೆ ಮಾಡಿದ್ದೇವೆ. ಆದ್ರೆ ಅಧಿಕಾರಿಗಳ ಸಭೆ ಕರೆಯಲು ಕೂಡ ನಮಗೆ ಅಧಿಕಾರ ಇಲ್ಲ ಎಂದು ಸಂಸದ ಅನಂತಕುಮಾರ್ ಹೆಗಡೆ ಹಿಂದಿಯಲ್ಲಿ ಭಾಷಣ ಮಾಡಿದರು. ಈ ವೇಳೆ ಕನ್ನಡದಲ್ಲಿ ಮಾತನಾಡಿ ಎಂದು ಬಿಜೆಪಿ ಕಾರ್ಯಕರ್ತರು ಒತ್ತಾಯಿಸಿದ್ದು, ಎಲ್ಲರೂ ಹಿಂದಿ, ಮರಾಠಿಯಲ್ಲಿ ಮಾತಾಡಿದ್ರೆ, ಹೇಗೆ ಅಂತಾ ಪ್ರಶ್ನೆ ಮಾಡಿದರು. ಆಗ ಅನಂತ್ ಕುಮಾರ್ ಅವರು, ನಾನು ಮೀಸಳ್ ಭಾಜಿ ರೀತಿ ಮಾತಾಡ್ತೀನಿ. ಕಿತ್ತೂರು, ಖಾನಾಪುರ 2 ವಿಧಾನಸಭಾ ಕ್ಷೇತ್ರ ಕಾರವಾರಗೆ ಬಿಟ್ಟು ಕೊಡಿ. ಸಾಕಷ್ಟು ಬಾರಿ ನಾವು ಕೇಳಿದರೂ ಬೆಳಗಾವಿಯರು ಬಿಟ್ಟು ಕೊಟ್ಟಿಲ್ಲ ಎಂದರು.

**ನನ್ನ ಆರೋಗ್ಯ ಸರಿ ಇಲ್ಲದ ಕಾರಣ ಖಾನಾಪುರಕ್ಕೆ ಬರಲು ಆಗಿರಲಿಲ್ಲ:** ಖಾನಾಪುರ ವಿಧಾನಸಭೆ ಕ್ಷೇತ್ರದಲ್ಲಿ ಕಾಂಗ್ರೆಸ್ ಗೆದ್ದಿರಲಿಲ್ಲ. ಕಳೆದ ಬಾರಿ ಚುನಾವಣೆಯಲ್ಲಿ ಮೊದಲ ಬಾರಿ ಕಾಂಗ್ರೆಸ್ ಗೆದ್ದಿತು. ಒಇಖ ಗೆದ್ದಿದ್ರೆ ನಮ್ಮ ಸಹೋದರ ಗೆದ್ದಿದ್ದಾರೆ ಅಂದುಕೊಳ್ಳಬಹುದಿತ್ತು ಎನ್ನುವ ಮೂಲಕ ಎಂಇಎಸ್ ಪುಂಡರನ್ನು ಸಂಸದ ಹೆಗಡೆ ಸಹೋದರರು ಎಂದು ವರ್ತಿಸಿದ್ದಾರೆ. ಅಲ್ಲದೆ ಈ ಬಾರಿ ಮತ್ತೆ ಖಾನಾಪುರ ಕ್ಷೇತ್ರದಲ್ಲಿ ಃಎಕ ಅಭ್ಯರ್ಥಿ ಗೆಲ್ಲಿಸಿದ್ದೀರಿ. ಕಳೆದ ಎರಡು ವರ್ಷದಿಂದ ಖಾನಾಪುರಕ್ಕೆ ಬರಲು ಆಗಿರಲಿಲ್ಲ. ನನ್ನ ಆರೋಗ್ಯ ಸರಿ ಇಲ್ಲದ ಕಾರಣ ಖಾನಾಪುರಕ್ಕೆ ಬರಲು ಆಗಿರಲಿಲ್ಲ. ಈ ಸಂದರ್ಭದಲ್ಲಿ ನಾನು ನಿಮಗೆ ಅಷ್ಟೇ ಅಲ್ಲ ಬೇರೆ ಯಾರಿಗೂ ಸಿಕ್ಕಿಲ್ಲ. ಭೇಟಿಗೆ ಯಾರಾದ್ರೂ ಬಂದ್ರೆ ರಾಜಕಾರಣ ಬಗ್ಗೆ ಮಾತಾಬೇಡಿ ಅಂತಿದ್ದೆ. ಒಳ್ಳೇ ಅಭ್ಯರ್ಥಿ ಹೆಸರೇಳಿ ಅವರನ್ನೇ ಚುನಾವಣೆಗೆ ನಿಲ್ಲಿಸೋಣ ಅಂತಿದ್ದೆ. ನಾನು ಚುನಾವಣೆಗೆ ಸ್ಪರ್ಧಿಸುವುದಿಲ್ಲ, ಎಲ್ಲಿಯೂ ಹೋಗಲ್ಲ ಅಂದಿದ್ದೆ. ಎಲ್ಲರ ಮುಂದೆ ನಾನು ಸ್ಪರ್ಧೆ ಮಾಡುವುದಿಲ್ಲ ಅಂತಾ ಹೇಳಿದ್ದೆ ಎಂದು ಅನಂತ್ ಕುಮಾರ್ ಹೆಗಡೆ ತಿಳಿಸಿದ್ದಾರೆ. ರಾಮ ಆಯ್ಕೆ ಮಾಡಿಕೊಂಡಿದ್ದು ಮೋದಿ ಕೈಯಲ್ಲಿ ಪ್ರತಿಷ್ಠಾಪಿಸಲು

ಮೋದಿಯನ್ನು ಮತ್ತೆ ಗೆಲ್ಲಿಸಬೇಕೆಂಬುದು ದೇವರ ನಿರ್ಣಯವಾಗಿದೆ. ಅಡ್ವಾಣಿ, ವಾಜಪೇಯಿ ರಾಮ ಮಂದಿರಕ್ಕಾಗಿ ಯಾತ್ರೆ ಮಾಡಿದ್ರು. ಅಂದು ಯಾತ್ರೆಯಲ್ಲಿ ಕೋಟ್ಯಂತರ ಜನ ಭಾಗಿಯಾಗಿದ್ದರು. ಆದರೆ ರಾಮ ಆಯ್ಕೆ ಮಾಡಿಕೊಂಡಿದ್ದು ಮೋದಿ ಕೈಯಲ್ಲಿ ಪ್ರತಿಷ್ಠಾಪಿಸಲು. ಇದು ದೇವರ ನಿರ್ಣಯ. ಮೋದಿಯನ್ನು ಮತ್ತೆ ಗೆಲ್ಲಿಸಬೇಕು ಇದು ಕೂಡ ದೇವರ ನಿರ್ಣಯ. ಕಳೆದ ಎಂಪಿ ಚುನಾವಣೆಯಲ್ಲಿ ಹೆಚ್ಚಿನ ಲೀಡ್‌ನಲ್ಲಿ ನನ್ನನ್ನು ಗೆಲ್ಲಿಸಿದ್ರಿ. ಈ ಬಾರಿಯೂ ನನ್ನನ್ನು ಹೆಚ್ಚು ಮತಗಳಿಂದ ಗೆಲ್ಲಿಸಬೇಕು ಎಂದು ಬಿಜೆಪಿ ಸಂಸದ ಅನಂತಕುಮಾರ್ ಹೆಗಡೆ ಹೇಳಿದ್ದಾರೆ.

# ಮಠಗಳು ಸಾಮರಸ್ಯ ಬೆಳೆಸುವ ಕೇಂದ್ರವಾಗಲಿ

**ಉಡುಪಿ:** ಕೃಷ್ಣ ಮಠ ಸಾಮಾಜಿಕವಾಗಿ, ಧಾರ್ಮಿಕವಾಗಿ ತೊಡಗಿಸಿಕೊಂಡ ಕೇಂದ್ರ. ಪುತ್ತಿಗೆ ಮಠದ ಪರ್ಯಾಯದಲ್ಲಿ ಭಾಗಿಯಾಗಿರೋದು ಪುಣ್ಯದ ಕೆಲಸ ಎಂದು ವಿಧಾನಸಭೆ ಸಭಾಪತಿ ಯು.ಟಿ ಖಾದರ್ ಹೇಳಿದರು.

ಉಡುಪಿ ಕೃಷ್ಣಮಠದ ಪುತ್ತಿಗೆ ಪರ್ಯಾಯ ದರ್ಬಾರ್ ನಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಧಾರ್ಮಿಕ ಕೇಂದ್ರಗಳಿಗೆ ಸಮಾಜವನ್ನು ತಿದ್ದುವ ಶಕ್ತಿಯಿದೆ. ಸಮಾಜ ಒಡೆದು ಹೋಗುವ ಸಂದರ್ಭದಲ್ಲಿ ಮಠಾಧೀಶರು



ಜೋಡಿಸಬೇಕು. ಪುತ್ತಿಗೆ ಶ್ರೀಗಳು ಧಾರ್ಮಿಕವಾಗಿ ದೇಶ-ವಿದೇಶದಲ್ಲಿ ತೊಡಗಿಸಿಕೊಂಡವರು ಎಂದರು.

ರಾಜ್ಯ, ದೇಶದಲ್ಲಿ ಸಾಮರಸ್ಯ ಬೆಳೆಯಲು ಮಠಗಳು ದಾರಿದೀಪವಾಗಬೇಕು. ಹಿಂದಿನಿಂದಲೂ ನಾನು ಕೃಷ್ಣ ಮಠಕ್ಕೆ ಸಂಬಂಧಪಟ್ಟ ಎಲ್ಲಾ ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದೇನೆ. ಮಠ ಕೇವಲ ಧಾರ್ಮಿಕವಾಗಿ ಕಾರ್ಯಾಚರಿಸದೆ, ಶೈಕ್ಷಣಿಕ, ಸಾಮಾಜಿಕವಾಗಿ ಕೂಡಾ ಕೆಲಸ ಮಾಡುತ್ತಿದೆ ಎಂದು ಹೇಳಿದರು.

Printed, Published & Owned by N.Venugopal Krishna, Printed at DASHAPRAMATHI MUDRANALAYA, No.433/1, Chikkavitalenahalli Village, Thagachagere Post, Kasaba Hobli, Channapatna Taluk, Ramanagar District, Pin-562160. Published at No.15, Ground Floor, 12th Block, 5th Main, Kumara Park (West), Behind BDA Head Office, Bengaluru-560020. Editor: N.Venugopal Krishna, Mobile No.+91 94835 89085, email: sanjemugilu@gmail.com